ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಒಳಪುಟಗಳಲ್ಲಿ

ಸಂಪುಟ 12 | ಸಂಚಿಕೆ 51 | ಡಿಸೆಂಬರ್ 23,1990 | ರೂ. 1.50

"ಸ್ವಾತಂತ್ರ್ಯ ಹೋರಾಟದ ಮೌಲ್ಯಗಳ ಮರುಸ್ಥಾಪನೆ"

-ಇ.ಎಂ.ಎಸ್.

"ಕೋಮು ಸೌಹಾರ್ದ ರಕ್ಷಣೆಗಾಗಿ ವಿ.ಪಿ.ಸಿಂಗ್ ಅವರು ಕೈಗೊಂಡಿರುವ ಪ್ರಚಾರ ಪ್ರಕ್ರಿಯೆ ಕಾರ್ಯಕ್ರಮ ರಾಷ್ಟ್ರದಲ್ಲಿ ಹೊಸ ರಾಜಕೀಯ ಚಿಂತನೆಗೆ ಬುನಾದಿ ಹಾಕಲಿದೆ. ನಮ್ಮ ವಯಸ್ಸಿನವರು ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸಿದ ಚಳುವಳಿಯ ಸಮಯದಲ್ಲಿ ನಾವಿಟ್ಟುಕೊಂಡಿದ್ದ ಗುರಿಯನ್ನು, ಧ್ಯೇಯ ಧೋರಣೆಗಳನ್ನು, ಮೌಲ್ಯಗಳನ್ನು ಅಂದರೆ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಜಾತ್ಯಾತೀತತೆ, ಹಿಂದೂ-ಮುಸ್ಲಿಂ ಐಕ್ಯತೆ-ಸೌಹಾರ್ದತೆ, ಧರ್ಮ ಸಹಿಷ್ಣುತೆ- ಸ್ವಾತಂತ್ರ್ಯ ಪಡೆದ ನಂತರ ಕಳಕೊಂಡಿದ್ದೇವೆ. ನಲವತ್ತು ವರ್ಷ ದೇಶವನ್ನಾಳಿದ ಕಾಂಗ್ರೆಸ್ ಸರಕಾರ ಅವುಗಳನ್ನೆಲ್ಲಾ ನಾಶಮಾಡಿದೆ. ಸ್ವಾತಂತ್ರ್ಯ ಹೋರಾಟದ ಕಾಲದ ಆ ಮೌಲ್ಯಗಳನ್ನು ಪುನಃ ನಿರ್ಮಿಸಲು ವಿ.ಪಿ. ಸಿಂಗ್ ಅವರು ದೇಶಾದ್ಯಂತ ಪರ್ಯಟನೆ ಕೈಗೊಂಡಿದ್ದಾರೆ. ತಮ್ಮ ಸರಕಾರ ಉರುಳಿಸಿದವರಾರು, ಮತೀಯ ಶಕ್ತಿಗಳ ವಿರುದ್ಧ ಹೋರಾಟದ ಅವಶ್ಯಕತೆಗಳೇನೆಂಬುದರ ಕುರಿತು ಜನರಿಗೆ ತಿಳಿಸಿ ಹೇಳಿ ಅವರಲ್ಲಿ ರಾಜಕೀಯ ಜಾಗೃತಿಯನ್ನುಂಟುಮಾಡುವ ಈ ಕಾರ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಎಡ ಪಕ್ಷಗಳು ಸಹಮತ ಹೊಂದಿವೆ. ಕಳೆದ ಐದು ದಿವಸಗಳಿಂದ ತಮಿಳುನಾಡು-ಕೇರಳಗಳಲ್ಲಿ ವಿ.ಪಿ.ಸಿಂಗ್ ಅವರ ಜೊತೆಯಲ್ಲಿ ಸಂಚಾರ ಮಾಡಿ ಈಗ ರಾಜಕೀಯ ಮೌಲ್ಯಗಳನ್ನು ಪುನಃ ಸ್ಥಾಪಿಸಲು ಕರ್ನಾಟಕದ ಜನತೆ ಸಹಾಯ ಮಾಡುತ್ತಾ, ವಿ.ಪಿ.ಸಿಂಗ್ ಅವರ ಪ್ರಯತ್ನಕ್ಕೆ ಬೆಂಬಲ ನೀಡುತ್ತಾರೆ" ಎಂದು ಆಶಯ ವ್ಯಕ್ತಮಾಡಿದವರು ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಯವರಾದ ಇ.ಎಂ.ಎಸ್.ನಂಬೂದರಿಪ್ಪಾಡ್ ಅವರು. ತಾರೀಖು 13-14 ರಂದು ಬೆಳಗಾವಿ ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಅವರು ಮಾಡಿದ ಭಾಷಣದ ಸಾರ ಇದು.

> **"ಭಾರತ ದೇಶದಲ್ಲಿ ಹೊಸ ರಾಜಕೀಯ ಪರಿಸ್ಥಿತಿ ನಿರ್ಮಾಣ ಮಾಡಲು ಹೊರಟಿದ್ದೇವೆ ಈ ಚಳುವಳಿಯಲ್ಲಿ ಭಾಗೀದಾರರಾಗಿ"**

ದೇಶದಲ್ಲಿ ತಲೆ ಎತ್ತಿರುವ ಜಾತೀಯ ಶಕ್ತಿಗಳ ವಿರುದ್ಧ, ನಿರಂತರ ಹೋರಾಟಕ್ಕೆ ಟೊಂಕಕಟ್ಟಿ ನಿಲ್ಲಬೇಕೆಂದು ಜನರನ್ನು ಅಣಿಗೊಳಿಸುವ ಉದ್ದೇಶದಿಂದ ಎಡ ಪಕ್ಷಗಳ ಜೊತೆಯಲ್ಲಿ ದೇಶಾದ್ಯಂತ ಪ್ರಚಾರ ಪ್ರಾರಂಭಿಸಿರುವ ವಿ.ಪಿ.ಸಿಂಗ್ ಅವರು ಜನತಾದಳದ ಅಧ್ಯಕ್ಷ ಎಸ್.-ಆರ್. ಬೊಮ್ಮಾಯಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದರಿಪ್ಪಾಡ್ ಅವರ ಜೊತೆಯಲ್ಲಿ ತಮಿಳುನಾಡು-ಕೇರಳಗಳಲ್ಲಿಯ ಸಂಚಾರ ಮುಗಿಸಿ 12-12-90 ರಂದು ಗೋವೆಯ ಮೂಲಕ ಬೆಳಗಾವಿ ಜಿಲ್ಲೆಯ ಖಾನಾಪುರಕ್ಕೆ ಬಂದಾಗ ಮಧ್ಯರಾತ್ರಿ 12 ಗಂಟೆ ಮೀರಿತ್ತು. ಆದರೂ ಕೂಡ ನೂರಾರು ಮಹಿಳೆಯರನ್ನೊಳಗೊಂಡೂ ನಾಲ್ಕೈದುಸಾವಿರ ಜನ ವಿ.ಪಿ.ಸಿಂಗ್ ಅವರಿಗಾಗಿ ಮೂರು ಗಂಟೆಕಾದಿದ್ದರು. ಅಲ್ಲಿಂದ ಪ್ರಚಾರ ಭಾಷಣ ಪ್ರಾರಂಭ.

ತಾ.13ರಂದು ಕಬ್ಬು ಬೆಳೆಯ ಕಣಜವಾದ ಸಂಕೇಶ್ವರ, ಚಿಕ್ಕೋಡಿ, ಅಥಣಿ ಮುಗಿಸಿ ರಾತ್ರಿ 8ಕ್ಕೆ ಬಿಜಾಪುರದಲ್ಲಿ 25 ಸಾವಿರಕ್ಕೂ ಮಿಕ್ಕಿದ್ದ ಜನ ಸ್ತೋಮದ ಮುಂದೆ ಭಾಷಣ. ತಾ14ರಂದು ಸಿಂದಗಿ(-ಬಿಜಾಪುರ ಜಿಲ್ಲೆ) ಗುಲ್ಬರ್ಗಾ ಜೇವರ್ಗಿ ಮುಗಿಸಿ ಬಿಜಾಪುರದಷ್ಟೇ ಜನಸ್ತೋಮದ ಮಧ್ಯೆ ಗುಲ್ಬರ್ಗ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ರಾತ್ರಿ 8 ಗಂಟೆಗೆ ಬೀದರಿನಲ್ಲಿ ಬೃಹತ್ ಸಾರ್ವಜನಿಕ ಸಭೆಯಲ್ಲಿ ಸ್ಫೂರ್ತಿದಾಯಕ ಭಾಷಣದ ಮೂಲಕ ಕರ್ನಾಟಕದಲ್ಲಿ ಮೊದಲ ಹಂತದ ಪ್ರಚಾರ ಭಾಷಣದ ಮುಕ್ತಾಯಗೊಳಿಸಿ ಮರುದಿವಸ ಹೈದರಾಬಾದಿಗೆ ಹೋಗಿ ಗಲಭೆ ಪೀಡಿತ ಪ್ರದೇಶಗಳನ್ನು ಸಂದರ್ಶಿಸಿ, ಗಲಭೆಗೊಳಗಾದವರಿಗೆ ಸಾಂತ್ವನ ನೀಡುವಿಕೆಯೊಂದಿಗೆ ಈ ಕಾರ್ಯಕ್ರಮದ ಅಂತ್ಯ.

ಬೆಳಗಾವಿ, ಬಿಜಾಪುರ, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ವಿ.ಪಿ.ಸಿಂಗ್ ಅವರು ಕೈಗೊಂಡ ಎರಡು ದಿನಗಳ ಸಂಚಾರದಲ್ಲಿ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದರಿಪ್ಪಾಡ್, ಜನತಾದಳದ ಅಧ್ಯಕ್ಷ ಎಸ್. ಆರ್.ಬೊಮ್ಮಾಯಿ, ಮಾಜಿ ಗೃಹ ಮಂತ್ರಿಮುಫ್ತಿ-ಮಹಮ್ಮದ್ ಸಯೀದ್‌ಹಾಗೂ ಜನತಾದಳದ ರಾಜ್ಯ ಮುಖಂಡರೂ ಅಲ್ಲದೆ, ಸಿಪಿಐ(ಎಂ) ಪಕ್ಷದ ಸೆಕ್ರೆಟಾರಿಯಟ್ ಸದಸ್ಯರಾದ ಎಸ್.ಕೆ.ಉಪಾಧ್ಯಾಯ, ರಾಜ್ಯಸಮಿತಿ ಸದಸ್ಯರಾದ ವಿ.ಎಸ್.ಹಳಕಟ್ಟಿ ಸಿಪಿಐ ಮುಖಂಡ ಸುಂದರೇಶ ಇದ್ದರು. ಎರಡು ದಿವಸ ಸಂಚಾರ ಮಾಡಿದ 700 ಕಿಲೋಮೀಟರ್ ಉದ್ದಕ್ಕೂ ಜನ ವಿ.ಪಿ.ಸಿಂಗ್ ಅವರನ್ನು ನೋಡಲು, ಅವರ ಮಾತುಗಳನ್ನು ಕೇಳಲು ಬಹಳ ಉತ್ಸುಕರಾಗಿದ್ದಂತೆ ಕಂಡುಬರುತ್ತಿತ್ತು. ಬಹಳಷ್ಟು ಸಂಖ್ಯೆಯಲ್ಲಿ ಮಹಿಳೆಯರಲ್ಲದೆ, ಮುಸಲ್ಮಾನರು, ಹಿಂದುಳಿದವರೂ ರಸ್ತೆಯುದ್ದಕ್ಕೂ, ಸಾರ್ವಜನಿಕ ಸಭೆಗಳಲ್ಲಿಯೂ ಭಾಗವಹಿಸಿದ್ದರು. ಹಳ್ಳಿಗಳಲ್ಲಿ ಕೂಡಾ ಸಾವಿರಾರು ಜನರು ಸ್ವಾಗತ ಕೋರಿದರು. ವಿ.ಪಿ.ಸಿಂಗ್ ಅವರು ಅಧಿಕಾರ ಕಳಕೊಂಡಿದ್ದರೂ ಕೂಡಾ, ಅವರ ಕುರಿತು ಜನರಲ್ಲಿ ಅಪಾರ ವಿಶ್ವಾಸ ಹುಟ್ಟಿಬಂದಿದೆಂಬ ವಿಷಯ ಎದ್ದು ಕಾಣುತ್ತಿತ್ತು. ವಿ.ಪಿ.ಸಿಂಗ್ ಮತ್ತು ಮುಫ್ತಿ ಮಹಮ್ಮದ್ ಸಯೀದ್ ಅವರು ರಾಮಜನ್ಮ ಭೂಮಿ-ಬಾಬ್ರಿ ಮಸೀದಿ ವಿಷಯವನ್ನು ವಿವರಿಸಿದಾಗ, ತನ್ನ ಸರಕಾರ ಉರುಳಲು ಬಿಜೆಪಿಯೇ ಕಾರಣವೆಂದು ಹೇಳಿದಾಗ, ಇಂಥ ಜಾತೀಯ ಶಕ್ತಿಗಳನ್ನು ವಿರೋಧಿಸಬೇಕೆಂದು ಕೇಳಿಕೊಂಡಾಗ ತನ್ನ ಸಂಕಷ್ಟ ಕಾಲದಲ್ಲಿ ಎಡ ಪಕ್ಷಗಳು ಸ್ಥಿರವಾಗಿ ತನ್ನ ಬೆಂಬಲಕ್ಕೆ ನಿಂತಿವೆ ಎಂದು ವಿವರಿಸಿದಾಗ ಕೇಳಿಬಂದ ಕರತಾಡನ, ವಿ.ಪಿಸಿಂಗ್ ಅವರ ಭಾಷಣವನ್ನು ಜನತೆ ಅರ್ಥೈಸಿಕೊಳ್ಳುತ್ತಿದ್ದಾರೆಂಬುದು ಸ್ಪಷ್ಟವಾಗುತ್ತಿತ್ತು.

ಯಾವ ಮೌಲ್ಯಗಳ ರಕ್ಷಣೆಗಾಗಿ ತಮ್ಮ ಸರಕಾರ ಬಲಿದಾನ ಮಾಡಿತೋ ಆ ಮೌಲ್ಯಗಳಿಗೆ ಅಂತಿಮವಾಗಿ ಜಯ ಖಚಿತ. ಕೋಮುಸೌಹಾರ್ದ ರಕ್ಷಣೆಗೆ, ಶತಮಾನಗಳಿಂದ ಶೋಷಿತರಾದ ದಲಿತರು ಮತ್ತು ಹಿಂದುಳಿದ ಜಾತಿ ವರ್ಗಗಳ ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವ ಕಾರ್ಯಕ್ಕೆ ತಮ್ಮನ್ನು ಮತ್ತು ಪಕ್ಷದ ಎಲ್ಲಾ ಕಾರ್ಯಕರ್ತರನ್ನೂ ಸಮರ್ಪಿಸಿಕೊಂಡಿರುವುದಾಗಿ ವಿ.ಪಿಸಿಂಗ್ ಹೇಳಿದಾಗ ಸಭಿಕರಲ್ಲಿ ಜಯ ಘೋಷ, ಕರತಾಡನ. ಕೋಮುವಾದಿ ಶಕ್ತಿಗಳು ರಾಜಕೀಯ ಲಾಭಕ್ಕಾಗಿ ರಾಮಜನ್ಮ ಭೂಮಿವಿವಾದವನ್ನು ಬಳಸಿಕೊಂಡು ಕೋಮು ದ್ವೇಷ ಹಬ್ಬಿಸಿದ್ದಾರೆ. ಆ ದಳ್ಳುರಿ ಹಲವಾರು ಜೀವಗಳನ್ನು ಬಲಿತೆಗೆದುಕೊಂಡಿದೆ ಎಂದು ವಿಷಾದದಿಂದ ವಿವರಿಸಿ, ಬಿಜೆಪಿ ಅಧ್ಯಕ್ಷ ಎಲ್.ಕೆ. ಅದ್ವಾಣಿಯವರು ಅಕ್ಟೋಬರ್ ತಿಂಗಳಲ್ಲಿ ಕೈಗೊಂಡ ರಥಯಾತ್ರೆಯನ್ನುಅಶ್ವಮೇಧ ಯಜ್ಞದ ಕುದುರೆಗೆ ಹೋಲಿಸಿ ಅಶ್ವಮೇಧ ಯಜ್ಞದ ಕುದುರೆಯನ್ನು ಯಾರು ಕಟ್ಟಿಹಾಕುತ್ತಾರೋ ಅವರ ಮೇಲೆ ಯುದ್ಧ ಹೂಡಲು ಅಶ್ವಮೇಧ ಯಜ್ಞಮಾಡಿದ ರಾಜನ ಸೈನ್ಯ ತಯಾರಾಗಿ ಹೋಗುತ್ತಿದ್ದಂತೆಯೇ ಅದ್ವಾಣಿ ತಮ್ಮ ರಥವನ್ನು ತಡೆದವರೊಂದಿಗೆ

ಜಿಲ್ಲಾ ಪರಿಷತ್ ತಿದ್ದುಪಡಿ ವಿರುದ್ಧ ಹೋರಾಟ
ಚುನಾಯಿತ ಪ್ರತಿನಿಧಿಗಳ ನಿರ್ಧಾರ

ಕೆಳಮಟ್ಟದಲ್ಲಿನ ಪ್ರಜಾಸತ್ತೆಯ ಉಸಿರುಗಟ್ಟಿಸುವ ಕಾಂಗ್ರೆಸ್ ಪ್ರಯತ್ನಕ್ಕೆ ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿಗಳ ಪ್ರತಿನಿಧಿಗಳು ತಮ್ಮ ತೀವ್ರ ವಿರೋಧ ವ್ಯಕ್ತಪಡಿಸಿ ಅದರ ವಿರುದ್ಧ ರಾಜ್ಯಾದ್ಯಂತ ಹೋರಾಟ ನಡೆಸಬೇಕೆಂದು ನಿರ್ಧರಿಸಿದ್ದಾರೆ.

ಡಿಸೆಂಬರ್ 17 ರಂದು ವಿರೋಧ ಪಕ್ಷಗಳಿಗೆ ಸೇರಿದ ಚುನಾಯಿತ ಪ್ರತಿನಿಧಿಗಳ ಬೃಹತ್ ಸಮಾವೇಶ ಬೆಂಗಳೂರಿನಲ್ಲಿ ನಡೆದು ಅಧಿಕಾರಿಗಳನ್ನು ಜಿಲ್ಲೆ ಹಾಗೂ ಕೆಳಮಟ್ಟಗಳಿಂದ ಕಿತ್ತುಕೊಂಡು ತಮ್ಮ ಕೈಯಲ್ಲಿ ಕೇಂದ್ರೀಕರಿಸಿಕೊಳ್ಳುವ ತಿದ್ದುಪಡಿ ಕಾಂಗ್ರೆಸ್ ಅಧಿಕಾರದಾಹದ ಪರಿಣಾಮ, ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ಇವನ್ನು ಪ್ರಜಾತಂತ್ರ-ವಿರೋಧಿ ವಿಧಾನದಲ್ಲಿ ತಮ್ಮ ಹಿಡಿತದಲ್ಲಿರಿಸುವಂತೆ ಮಾಡುವ ಕ್ರಮ ಎಂದು ಟೀಕಿಸಿತು.

ಈ ತಿದ್ದುಪಡಿಗಳ ಬಗ್ಗೆ ಕಾಂಗ್ರೆಸ್ ಒಳಗೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿರುವು- [illegible]

[illegible] ನಿಸಬೇಕು, ತಮ್ಮ ಪಕ್ಷ ಹಿತದೃಷ್ಟಿಯಿಂದಲೇ ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬೇಕೆಂದು ಇಲ್ಲವಾದರೆ ಜನ ನಿಮ್ಮನ್ನು ಅಧಿಕಾರದಿಂದ ಇಳಿಸುತ್ತಾರೆ ಎಂದು ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯಟ್ ಸದಸ್ಯ ಕಾಂ:ಎಸ್.-ಸೂರ್ಯನಾರಾಯಣ ರಾವ್ ಹೇಳುತ್ತಾ ಸಮಾಜವಾದಿ ಮುಖಂಡ ಗೋಪಾಲಗೌಡರಿಂದ ಪಡೆದ ತರಬೇತಿಯ ಲವಲೇಶವಾದರೂ ಇದ್ದರೆ ಇಂತಹ ತಿದ್ದುಪಡಿಯ ಯೋಚನೆ ಮಾಡಿರುದೂ ತಪ್ಪು ಎಂದು ಒಪ್ಪುವ ಧೈರ್ಯವನ್ನು ಬಂಗಾರಪ್ಪನವರು ತೋರಬೇಕು ಎಂದರು. ಐ.ಎ.ಎಸ್ ಅಧಿಕಾರಿಗಳನ್ನು ಸದಾ ಬದಲಿಸುತ್ತಲೇ ಇರುತ್ತೀರಿ. ಇದರಂತೆ ಆಡಳಿತದಲ್ಲಿ ಅಸ್ಥಿರತೆಯಿರುತ್ತದೆ. ಹಳ್ಳಿಗಳ ಬಗ್ಗೆ ಆಡಳಿತ ಅಧಿಕಾರಿಯ ಆಳ್ವಿಕೆ ಹೇರುವುದು ಅರ್ಥಹೀನ ಎಂದು ಕಾಂ. ಸೂರಿ.

ಈ ಸಂಸ್ಥೆಗಳ ಸಾರ್ವಭೌಮತ್ವ ಉಳಿಸಲು ಹೋರಾಟ ನಡೆಸಬೇಕು, ಇದು ಅಧಿಕಾರದ ಪ್ರಶ್ನೆಯಲ್ಲ, ತತ್ವದ ಪ್ರಶ್ನೆ ಎಂದರು [illegible]

ಜನರಿಗೆ ನೇರವಾಗಿ ಲೆಕ್ಕ ಕೊಡಬೇಕಾದೀತೆಂಬ ಏಕೈಕ ಭಯದಿಂದ ಕಾಂಗ್ರೆಸ್ ಈ ತಿದ್ದುಪಡಿ ತರಹೊರಟಿದೆ ಎಂದು ವಿರೋಧ ಪಕ್ಷಗಳ ನಾಯಕ ಚಂದ್ರೇಗೌಡರು ಹೇಳಿದರು. ಸಾಮಾಜಿಕ ಈ ತಿದ್ದುಪಡಿ ಪ್ರಯತ್ನದ ಹಿನ್ನೆಲೆಯಲ್ಲಿದ್ದಾರೆಂದು ಜನತಾ ದಳದ ಪ್ರದೇಶ ಅಧ್ಯಕ್ಷ ಜೆ.ಎಚ್.ಪಟೇಲ್ ಆಪಾದಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತಿನ ಅಧ್ಯಕ್ಷ ಸಿ.ನಾರಾಯಣ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಈ ಬೃಹತ್ ಸಭೆ ನಡೆಯಿತು.



ಬೆಲೆ ಏರಿಸಿದ ಕೋಮುವಾದ

ನೀವು ಇತ್ತೀಚೆಗೇನಾದರೂ ತರಕಾರಿ ಹಣ್ಣು ಹಂಪಲು ಕೊಳ್ಳಲು ಅಂಗಡಿಗೇನಾದರೂ ಹೋಗಿದ್ದೀರಾ? ಬೆಲೆ ಎಷ್ಟು ಎಂದು ವಿಚಾರಿಸಿ ಬೆರಗಾಗಿದ್ದೀರಾ? ಇದಕ್ಕೆ ಕಾರಣ ಏನು ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದೀರಾ?

ಇದಕ್ಕೆ ರಥಯಾತ್ರೆ ಮಂಡಲ ವರದಿ ವಿರೋಧಿ ಚಳುವಳಿಗಳದ್ದೇ ಮಹತ್ತರ ಪಾತ್ರ ಇದೆ. ಹೇಗೆ? ಎನ್ನುತ್ತೀರಾ. ಹಾಗಾದರೆ ಟೈಮ್ಸ್ ಆಫ್ ಇಂಡಿಯಾದ ಈ ವರದಿ ಓದಿ.

ಈ ಹಿಂದೆ ಬೆಲೆ ಏರಿಕೆಯಿಂದಾಗಿ ಚಳುವಳಿಗಳಾಗುತ್ತಿತ್ತು. ಆದರೆ ಈ ಬಾರಿ ಚಳುವಳಿಯಿಂದಾಗಿ ಬೆಲೆ ಏರಿಕೆಯಾಗುತ್ತಿದೆ. ಮಂಡಲ-ಮಂದಿರದ ದಳ್ಳುರಿ ಮುಂಗಾರಿನ ಸಮೃದ್ಧ ಬೆಳೆಯನ್ನು ನುಂಗಿ ನೀರು ಕುಡಿದಿದೆ. ವ್ಯಾಪಾರ ವಹಿವಾಟಿಗೆ ಭಾರಿ ಧಕ್ಕೆಯಾಗಿದೆ.

ಸೆಪ್ಟೆಂಬರ್ ಆಗುತ್ತಿದ್ದಂತೆ ಪ್ರತೀ ವರ್ಷ ಮಾಮೂಲಿಯಾಗಿ ಬೆಲೆ ಇಳಿಯಲು ಆರಂಭವಾಗುತ್ತದೆ. ಮುಂಗಾರು ಬೆಳೆ ಬರುತ್ತಿದ್ದಂತೆಯೇ ದವಸ ಧಾನ್ಯ ಹೆಚ್ಚಾಗಿ ಬೆಲೆ ಇಳಿಯಬೇಕು. ಆದರೆ ಈ ಬಾರಿ ಬೆಲೆ ಇಳಿಯುವುದರ ಬದಲು ಏರಿದೆ. ಸಮೃದ್ಧ ಬಂದ್, ಕರ್ಫ್ಯೂ ಸಮೃದ್ಧ ಬೆಳೆಯನ್ನು ನುಂಗಿದೆ.

ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದ್ದರಿಂದ ಐದು ಪ್ರಮುಖ ಪ್ರತಿಕೂಲ ಪರಿಣಾಮವಾಗಿದೆ. ಸರಕು ಸಾರಿಗೆ ವ್ಯವಸ್ಥೆ ಕುಸಿದಿದ್ದರಿಂದ ಕೃತಕಅಭಾವ ಸೃಷ್ಟಿಸಲಾಯಿತು. ಬೆಲೆ ಏರಿತು.ಎರಡನೆಯದಾಗಿ ಉತ್ಪಾದನೆಯ ಮೇಲೆ ನೇರ ಪರಿಣಾಮ-ಬೀರಿದ್ದರಿಂದ ಅದು ಮುಂದೆಯೂ ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತದೆ. ಮೂರನೆಯದಾಗಿ ಚುನಾವಣಾ ವೆಚ್ಚ ಏರುವುದರಿಂದ ಹಾಗೂ ತೆರಿಗೆ ಸಂಗ್ರಹದಲ್ಲಿ ಇಳಿಮುಖವಾಗುವುದರಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕೊರತೆ ಬಜೆಟ್ ಹೆಚ್ಚಾಗುತ್ತದೆ. ನಾಲ್ಕನೆಯದಾಗಿ ಕೊಳೆತು ಹೋಗುವ ವಸ್ತುಗಳು ಒಂದೇ ಕಡೆ ಕೂಡಿಡಬೇಕಾದ ಅನಿವಾರ್ಯತೆ ಉಂಟಾದ್ದರಿಂದ [illegible] ನಾಶವಾಗಿವೆ. ಇದರಿಂದ ಮತ್ತೆ ಬೆಲೆ ಏರುತ್ತದೆ. ಕೊನೆಯದಾಗಿ ಈ ಬಂದ್‌ಗಳು ರಪ್ತಿನ ಮೇಲೆ ಪರಿಣಾಮ ಬೀರುತ್ತವೆ. ಇದರಿಂದಾಗಿ ಸಿಗುವ ಹಣ ಕೊರತೆಯಿಂದಾಗಿ ಆಮದೂ ಸಹ ಕಡಿಮೆಯಾಗುತ್ತದೆ. ಇದು ಮತ್ತೆ ಅಭಾವ ಸೃಷ್ಟಿಸಿ ಬೆಲೆ ಏರಿಸುತ್ತದೆ.

"ಉತ್ತರ ಭಾರತದಲ್ಲಂತೂ ತಿಂಗಳುಗಟ್ಟಲೆ ರಸ್ತೆ ಸಂಚಾರವನ್ನು ನಿಷೇಧಿಸಲಾಯಿತು. ಉಳಿದ ಕಡೆ ಚಳುವಳಿಕಾರರ ಭಯದಿಂದ ಚಾಲಕರೇ ಹಿಂದೇಟಿದರು. ಇದರಿಂದಾಗಿ ಹಣ್ಣುಗಳ ಬೆಲೆ ಶೇ. 50 ರಷ್ಟು ಹೆಚ್ಚಿದೆ.'[ಎನ್ನುತ್ತಾರೆ ದೆಹಲಿಯ ವ್ಯಾಪಾರಸ್ಥರು.

ಪಾಟ್ನಾದ ರಾಮಕೃಷ್ಣ ಬಟ್ಟೆ ಅಂಗಡಿಗೆ ಮಾಲುಗಳೇ ಬರಲಿಲ್ಲ. ಟ್ರಕ್‌ಗಳು ನಿಂತಿದ್ದರಿಂದ ಅದಿಗೆಗೆ ಕಲ್ಲಿದ್ದಲೂ ಸಿಗಲಿಲ್ಲ. ಈರುಳ್ಳಿ ಬೆಲೆ 20 ರೂ ಆಯಿತು.

ಗುಜರಾತ್‌ನಲ್ಲಿ ಬಂದ್, ಕರ್ಫ್ಯೂ ಏನೂ ಇರದಿದ್ದರೂ 'ರಾಮಬಂಧು'ಗಳೇ ಬಲವಂತವಾಗಿ ದಿನಗಟ್ಟಲೇ ಅಂಗಡಿ ಬಾಗಿಲು ಮುಚ್ಚಿಸಿ ಅವರು ಕಂಗಾಲಾಗುವಂತೆ ಮಾಡಿದರು.

ರಥಯಾತ್ರೆ, ಮಂಡಲ ವಿರೋಧದ ಬಿಸಿ ಇಲ್ಲಿಗೆ ನಿಲ್ಲುವುದಿಲ್ಲ. ಬಜೆಟ್‌ನ ಹೆಚ್ಚು ಕೊರತೆಯಿಂದಾಗಿ ಇನ್ನೂ ರಸ್ತೆ ಸಾರಿಗೆ ಸಂಸ್ಥೆಗಳು 100 ಕೋಟಿ ರೂ. ನಷ್ಟ ಅನುಭವಿಸುವುದರಿಂದ ಜನಸಾಮಾನ್ಯನ ಪ್ರಯಾಣವೂ ದುಬಾರಿಯಾಗಲಿದೆ.

ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡಲು ಎಲ್ಲೆಡೆಯೂ ಬಿಗಿ ಬಂದೋಬಸ್ತು ಮಾಡಲು ಇಷ್ಟಷ್ಟು ವೆಚ್ಚ ಕೇವಲ ಅಯೋಧ್ಯೆಯಲ್ಲಿ 300 ಕೋಟಿ ರೂ. ಖರ್ಚುಮಾಡಲಾಗಿದೆ.

ಈ ಎಲ್ಲದರ ಜೊತೆ ಡೀಸೆಲ್ ಕೊರತೆಯೂ ತನ್ನ ಕಾಣಿಕೆ ಸಲ್ಲಿಸಿ ಪರಿಸ್ಥಿತಿ ಹದಗೆಡಲು ತಾನೂ ಕಾರಣವಾಗಿದೆ.

ವಿಡಿಯೋ, ಕ್ಯಾಸೆಟ್ಸ್ ಮೂಲಕ ಕೋಮುವಾದ

ದೇಶ ಮತೀಯ ಗಲಭೆಗಳ ಬೆಂಕಿಯಲ್ಲಿ ಉರಿಯುತ್ತಿರುವಾಗ ಹಿಂದೂ ಕೋಮುವಾದಿಗಳು ಅದಕ್ಕೆ ವಿವಿಧ ಮಾಧ್ಯಮಗಳ ಮೂಲಕ ಪೆಟ್ರೋಲ್ ಸುರಿಯುತ್ತಿದ್ದಾರೆ. ಅಕ್ಟೋಬರ್ 30 ರಂದು ಮತ್ತು ನವೆಂಬರ್ ಎರಡರಂದು ಅಯೋಧ್ಯೆಯಲ್ಲಿ ನಡೆಯಿತೆನ್ನಲಾದ ಘಟನೆಗಳನ್ನೊಳಗೊಂಡ ವಿಡಿಯೋ, ಕ್ಯಾಸೆಟ್ ಮತ್ತು ಪುಸ್ತಕಗಳನ್ನು ಪ್ರಸಾರ ಮಾಡಲಾಗುತ್ತಿದೆ. [illegible]ಗಳಲ್ಲಿ ಉದ್ರೇಕಕಾರಿ ದೃಶ್ಯಗಳೂ ಭಾಷಣಗಳೂ ಇವೆ. ಅಯೋಧ್ಯೆಯೊಂದರಲ್ಲೇ ಸುಮಾರು 3000 ಅಂಗಡಿಗಳು ಈ ಉದ್ದೇಶಕ್ಕಾಗೇ ಗುಪ್ತವಾಗಿ ಕಾರ್ಯಾಚರಿಸುತ್ತಿವೆ ಎಂದು ಸುದ್ದಿ.

ಸರಕಾರ ಇಂಥ ಸಾಮಗ್ರಿಗಳನ್ನು ನಿಷೇಧಿಸಿದೆ. ಆದರೆ ವಿಶ್ವ ಹಿಂದೂ ಪರಿಷತ್, ಬಿಜೆಪಿ, ಆರ್‌ಎಸ್‌ಎಸ್ ಕೂಟ ಅದನ್ನು ಉಲ್ಲಂಘಿಸಿ ಬಹಿರಂಗ ಸ್ವರೂಪಕ್ಕೆ ಸವಾಲು ಹಾಕುತ್ತಿದೆ. ರಾಜಧಾನಿ ಹೊಸ ದಿಲ್ಲಿಯಲ್ಲಿ ಬಿಜೆಪಿ ನಾಯಕರ ನೇತೃತ್ವದಲ್ಲಿ ಬಹಿರಂಗವಾಗಿ ವಿಡಿಯೋ ಪ್ರದರ್ಶನ ಯತ್ನ ನಡೆಯಿತು. ಹಲವರನ್ನು ಪೋಲೀಸರು ಬಂಧಿಸಿದರು.

ತನ್ನ ರಾಜಕೀಯ ಲಾಭಕ್ಕಾಗಿ ಜನಜೀವನವನ್ನು ಹಾಳು ಮಾಡಲು ಯಾವ ಮಾರ್ಗಗಳನ್ನಾದರೂ ಅನುಸರಿಸಲು ಸಿದ್ಧ ಎಂದು ಸಾಬೀತುಪಡಿಸಲು ಬಿಜೆಪಿ ಹೊರಟಂತಿದೆ. ರಾಜಕೀಯ ದೃಷ್ಟಿಯಿಂದ ಅದನ್ನು ಎದುರಿಸಬೇಕು.

ಕೇವಲ ದುಷ್ಟ ರಾಜಕಾರಣ”

ಮತೀಯವಾದದ ವಿರುದ್ಧ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ದೇಶದಲ್ಲಿ ನಡೆಸುತ್ತಿರುವ ಪ್ರಚಾರ-ಹೋರಾಟ ದಿನದಿಂದ ದಿನಕ್ಕೆ ಪ್ರಬಲವಾಗುತ್ತಿದೆ. ಉಡುಪಿಯ ನಾಗರೀಕರು ಇತ್ತೀಚೆಗೆ ಬೃಹತ್ ಸಭೆಯೊಂದನ್ನು ಸಂಘಟಿಸುವುದರ ಮುಖಾಂತರ ಈ ದೇಶವ್ಯಾಪಿ ಹೋರಾಟಕ್ಕೆ ತಮ್ಮ ದನಿಗೂಡಿಸಿದರು. ತಾರೀಖು 8-12-90 ಶನಿವಾರ ಸಂಜೆ ಉಡುಪಿಯ ರಥಬೀದಿಯಲ್ಲಿ ನಡೆದ ಈ ಬೃಹತ್ ಸಾರ್ವಜನಿಕ ಸಭೆಯನ್ನು ಉಡುಪಿಯ 'ಮತೀಯವಾದ ವಿರೋಧಿ ವೇದಿಕೆ' ಸಂಘಟಿಸಿತ್ತು. ಸಿಐಟಿಯು, ಎಐಟಿಯುಸಿ, ಬ್ಯಾಂಕ್ ನೌಕರರ ಸಂಘ, ವಿಮಾ ನೌಕರರ ಸಂಘ, ಬಂಡಾಯ ಸಾಹಿತ್ಯ ಸಂಘಟನೆ, ಸಮುದಾಯ , ಡಿವೈಎಫ್ಐ ಮತ್ತು ದಲಿತ ಸಂಘರ್ಷ ಸಮಿತಿಗಳು ಸಂಯುಕ್ತವಾಗಿ ರಚಿಸಿಕೊಂಡಿರುವ ಈ ವೇದಿಕೆ ಉಡುಪಿಯ ಹೆಚ್ಚಿನ ಅಧ್ಯಾಪಕರು, ಪತ್ರಕರ್ತರು, ಲೇಖಕರು ಮತ್ತು ಚಿಂತಕರ ಬೆಂಬಲವನ್ನು ಪಡೆದುಕೊಂಡಿದೆ. 'ಮತೀಯವಾದ ವಿರೋಧಿ ವೇದಿಕೆ'ಯ ಸ್ಥಾಪನೆಯಲ್ಲಿ ಉಡುಪಿಯ ವಿಮಾ ನೌಕರರ ಸಂಘ ಸಕ್ರಿಯ ಪಾತ್ರ ವಹಿಸಿತ್ತು.

ಉಡುಪಿಯ ರಥಬೀದಿ, ಮಠ ದೇವಾಲಯಗಳ ಕೇಂದ್ರವಾಗಿದ್ದು ಅಲ್ಲಿ ತಾ.8-12-90 ರಂದು ನಡೆದ ವೇದಿಕೆಯ ಸಾರ್ವಜನಿಕ ಸಭೆ, ಇತ್ತೀಚೆಗಿನ ವರ್ಷಗಳಲ್ಲಿ ಅಲ್ಲಿ ನಡೆದ ಅತಿ ದೊಡ್ಡ ಸಭೆಗಳಲ್ಲಿ ಒಂದಾಗಿತ್ತು. ಸ್ವಾಗತ ಭಾಷಣ ಮಾಡಿದ ಶ್ರೀ ಯು.ಆರ್.ಜಯವಂತ 'ಮತೀಯವಾದಕ್ಕೂ ಧರ್ಮಕ್ಕೂ ಯಾವ ಸಂಬಂಧ ಇಲ್ಲ, ಮತೀಯವಾದ ಕೇವಲ ದುಷ್ಟ ರಾಜಕಾರಣ' ಎಂದು ವಿವರಿಸಿ, ಸಭೆಯ ಉದ್ದೇಶಗಳನ್ನು ತಿಳಿಸಿದರು.

ಉಡುಪಿಯ ಬಳಕೆದಾರ ವೇದಿಕೆಯ ಸಂಚಾಲಕ ಪ.ನಾರಾಯಣ ರಾವ್ ಅವರು ಹಿಂದೂ ಪುನರುತ್ಥಾನ ವಾದವನ್ನು ಉಗ್ರವಾಗಿ ಖಂಡಿಸಿದರು.

ಹಿರಿಯ ಪತ್ರಕರ್ತ ಶ್ರೀ ಬನ್ನಂಜೆ ರಾಮಾಚಾರ್ಯರು ಇಂದಿನ ವಿಷ್ಣು ದೇವಾಲಯಗಳು ಹಿಂದೆ ಜೈನ ಬಸದಿಗಳಾಗಿದ್ದವು ಹಾಗೆಂದು ಅವುಗಳನ್ನು ನಾಶಪಡಿಸುವುದು ಸರಿ ಅಲ್ಲ ಎಂದು ಹೇಳಿ ಅನೇಕ ಉದಾಹರಣೆಗಳನ್ನು ಕೊಟ್ಟರು. ಯಕ್ಷಗಾನ ಅರ್ಥಧಾರಿ ಸದಾಶಿವ ಕಲ್ಮೂರರು ತಮ್ಮ ಭಾಷಣದಲ್ಲಿ ಮತೀಯವಾದಿಗಳು, ವಸಾಹತುಶಾಹಿಯ ಒಡೆದು ಆಳುವ ನೀತಿಯನ್ನೇ ಮುಂದುವರಿಸಿದ್ದಾರೆಂದು ಹೇಳಿದರು. ವ್ಯಾಪಾರಿಗಳು ಎಂದೂ ಧರ್ಮ ರಕ್ಷಕರಾಗಲಾರರು ಎಂಬ ಅವರ ಮಾತು ಸಭಿಕರ ಮೆಚ್ಚುಗೆಯನ್ನು ಗಳಿಸಿತು.

ವಿಮರ್ಶಕ ರಾಜಶೇಖರ, " ರಾಮ ಒಬ್ಬನೇ ರಾಷ್ಟ್ರ ಪುರುಷ ಅಲ್ಲ, ಧರ್ಮರಾಯ, ಬುದ್ಧ, ಮಹಾವೀರ, ಅಶೋಕ, ಮಹಾತ್ಮಾ ಗಾಂಧಿ-ಇವರೂ ನಮ್ಮ ರಾಷ್ಟ್ರ ಪುರುಷರು. ಚರಿತ್ರೆಯ ಹೊರೆಯನ್ನು ಮುಸ್ಲಿಮರ ಮೇಲೆ ಹೊರಿಸುವುದು ಬೇಡ. ಹಾಗೆ ಹೊರಿಸುವುದು ಸರಿ ಎಂದಾದರೆ ಮಹಾತ್ಮಾ ಗಾಂಧಿಯವರ ಕೊಲೆ, ಇಂದಿರಾ ಗಾಂಧಿಯವರ ಹತ್ಯೆಯ ನಂತರ ದೆಹಲಿಯಲ್ಲಿ ನಡೆದ ನರಮೇಧಗಳ ಹೊರೆಯನ್ನು ಹಿಂದೂಗಳು ಹೊರಬೇಕಾದೀತು" ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು.

ಸಿಐಟಿಯು ಮುಂದಾಳು ಕಾಮ್ರೇಡ್ ವಿಶ್ವನಾಥ ರೈ ಧರ್ಮ, ಭಾಷೆ, ಪ್ರಾದೇಶಿಕತೆಗಳ ಹೆಸರಿನಲ್ಲಿ ಜನರನ್ನು ಒಡೆದು ಹೊಟ್ಟೆ ವಸತಿಯೇ ಮೊದಲಾದ ಸಮಸ್ಯೆಗಳಿಂದ ಜನರ ಗಮನ ಬೇರೆಡೆಗೆ ಸೆಳೆಯುವುದೂ ರಾಜಕಾರಣದ ಒಂದು ಉದ್ದೇಶವಾಗಿದೆ. ದೇಶದ ಐಕ್ಯವನ್ನು ಕಾಪಾಡುವ ಹೊಣೆ ಈಗ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲೆ ಇದ್ದು, ಸಿಐಟಿಯು ಈ ನಿಟ್ಟಿನಲ್ಲಿ ಹೋರಾಟವನ್ನು ಮುಂದುವರಿಸುವುದು ಎಂದರು.

ಪುಟ 6→

ಅಯೋಧ್ಯೆ-1949: ಗಾಂಧೀವಾದಿಗಳು ಕಂಡಂತೆ

★ ನವೆಂಬರ್ 13, 1949. ಬಾಬ್ರಿ ಮಸೀದಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ಸಮಾಧಿಗಳನ್ನು ಅಗೆಯುವ ಸದ್ದು. ಕಣ್ಣಾರೆ ಕಂಡ ವೈಷ್ಣವ ಸಾಧು ಅಕ್ಷಯ ಬ್ರಹ್ಮಚಾರಿ ಬೇಸರಪಟ್ಟರು. ಈ ಸ್ಮಶಾನದ ಮಧ್ಯದಲ್ಲಿರುವ ಒಂದು ಅಡಿಪಾಯದ ಮೇಲೆ ವೇದಿಕೆ ನಿರ್ಮಿಸುವ ಕೆಲಸವೂ ಸಾಗಿತ್ತು. ಸುತ್ತಲಿನ ಮುಸ್ಲಿಮರು ಭಯಭೀತರಾದರು. ಕ್ರಿಮಿನಲ್ ಪ್ರೊಸೀಜರ್ ಕೋಡಿನ 145 ಕಲಮಿನ ಪ್ರಕಾರ ಅವರು ನಗರ ಮ್ಯಾಜಿಸ್ಟ್ರೇಟ್‌ಗೆ ಮನವಿಯೊಂದನ್ನು ಸಲ್ಲಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಇದನ್ನು ಕಂಡು ಅಕ್ಷಯ ಬ್ರಹ್ಮಚಾರಿ ಮ್ಯಾಜಿಸ್ಟ್ರೇಟರನ್ನು ವೈಯಕ್ತಿಕವಾಗಿ ಭೇಟಿಯಾಗಿ ಈ ಅನ್ಯಾಯ ಸರಿಪಡಿಸದೇಕೆಂದರು.

ನವೆಂಬರ್ 15 ರ ರಾತ್ರಿ. ಮೂವರು ಬಂದು ಅಕ್ಷಯ ಬ್ರಹ್ಮಚಾರಿ ಮೇಲೆ ಹಲ್ಲೆ ನಡೆಸಿದರು. ಮರುದಿನ ಕೊನೆಗೂ 144 ನೇ ಸೆಕ್ಷನ್ ಜಾರಿಯಾಯಿತು. ಆದರೆ ಅದನ್ನು ಬಳಸಿದ್ದು ಮುಸ್ಲಿಮರು ಆ ಸ್ಥಳಕ್ಕೆ ಹೋಗದಂತೆ ತಡೆಯಲು. ಹಿಂದೂಗಳಿಗೆ ಯಾವ ಅಡೆ-ತಡೆಯೂ ಇರಲಿಲ್ಲ! ಒಂಬತ್ತು ದಿನಗಳ ಕಾಲ ಅದೇ ಸ್ಮಶಾನದ ಜಾಗದಲ್ಲಿ ಅಖಂಡ ರಾಮಾಯಣ ಪಾಠ!

★ ಡಿಸೆಂಬರ್ 23, 1949. ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಅಕ್ಷಯ ಬ್ರಹ್ಮಚಾರಿಯವರಿಗೊಂದು ಸುದ್ದಿ. ಹಿಂದಿನ ರಾತ್ರಿ ಯಾರೋ ಬಾಬ್ರಿ ಮಸೀದಿಯೊಳಗೆ ನುಗ್ಗಿ ಶ್ರೀರಾಮನ ಮೂರ್ತಿ ಇಟ್ಟಿದ್ದಾರೆ. ಬೆಳಗ್ಗೆ 6 ಗಂಟೆಗೆ ತನಗೆ ತಿಳಿಯಿತು ಎಂದು. ಆಶ್ಚರ್ಯವೆಂದರೆ ಸೆಕ್ಷನ್ 144 ಇನ್ನೂ ಜಾರಿಯಲ್ಲಿತ್ತು. ಕಾವಲು ಕಾಯುತ್ತಿದ್ದ ಪೋಲೀಸರಿಗೂ ಅಧಿಕಾರಿಗೂ ಈ ವಿಚಾರ ತಿಳಿದೇ ಇರಲಿಲ್ಲ. ಹೊರಗಿನವರಿಗೆ ಮೊದಲೇ ತಿಳಿ... ಆದರೂ ಜಿಲ್ಲಾ ಮ್ಯಾಜಿಸ್ಟ್ರೇಟರು ಏನೂ ಮಾಡಲಿಲ್ಲ.

ಮರುದಿನ ಲೌಡ್ ಸ್ಪೀಕರ್‌ಗಳಲ್ಲಿ ಘೋಷಣೆ-'ಬಾಬ್ರಿ ಮಸೀದಿಯಲ್ಲಿ ರಾಮ ದೇವರ ಉದ್ಭವ-ಬನ್ನಿ, ದರ್ಶನ ಪಡೆಯಿರಿ!' ಜನಸಂದಣಿ. ಉದ್ರೇಕಕಾರಿ ಭಾಷಣಗಳು. ಗಾಂಧೀಜಿ, ನೆಹರೂ ಸರಕಾರದ ಟೀಕೆ. ಪಾಕಿಸ್ತಾನದಲ್ಲಿ ಒಂದೂ ದೇವಸ್ಥಾನ ಉಳಿದಿಲ್ಲ. ಅಯೋಧ್ಯೆಯಲ್ಲಿ ಒಂದೂ ಮಸೀದಿ, ಮುಸಲ್ಮಾನರ ಮಸಣ ಉಳಿಯಬಾರದು! ಕೆಲವು ಹಳೆಯ ಕಾಂಗ್ರೆಸ್ಸಿಗರೂ ಈ ಅಪಪ್ರಚಾರದಲ್ಲಿ ಶಾಮಿಲು!

ಮುಸ್ಲಿಮರು ನವೆಂಬರ್‌ನಲ್ಲಿ ಕೇಳಿದ್ದ ಸೆಕ್ಷನ್ 145ರಂತೆ ಕ್ರಮ ಕೈಗೊಳ್ಳಲಾಯಿತು. ಆದರೆ ಅವರು ಮನವಿ ಮಾಡಿಕೊಂಡಂತೆ ಅಲ್ಲ. ಅರ್ಜಿ ನ್ಯಾಯಾಲಯವೊಂದು ತೀರ್ಪು ಕೊಡುವವರೆಗೆ ಮುಸಲ್ಮಾನರು ನಮಾಜ್ ಮಾಡಲು ಅಲ್ಲಿಗೆ ಹೋಗಬಾರದು ಎಂದು ವಿಧಿಸಲಾಯಿತು!

★ 'ಸ್ಟಾರ್ ಹೋಟೆಲ್' ಅಯೋಧ್ಯೆಯ ಒಂದು ಹೋಟೆಲು. ಒಡೆಯ ಮುಸಲ್ಮಾನ. ರಾಷ್ಟ್ರೀಯವಾದಿ ಮುಸಲ್ಮಾನ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಮುಸ್ಲಿಂ ಲೀಗ್ ಬಹಿಷ್ಕರಿಸಿದ್ದ ರಾಷ್ಟ್ರೀಯ ವಾದಿ ಮುಸಲ್ಮಾನ. ಆ ಹೋಟೆಲಿನ ಮೇಲೆ ಧಾಳಿ. ಮದ್ದುಗುಂಡುಗಳನ್ನು ಅಡಗಿಸಿಡಲಾಗಿದೆ ಎಂಬ ವದಂತಿ ಮೇಲೆ. ಏನೂ ಸಿಗಲಿಲ್ಲ. ಆದರೆ ಹೋಟೆಲ್ ಜಾರಿ ಮಾಡಲು ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ಆದೇಶ. ಕೆಲವೇ ದಿನಗಳಲ್ಲಿ ಅಲ್ಲಿ 'ಗೋಮತಿ ಹೋಟೆಲ್' ಆರಂಭ. ಜಿಲ್ಲಾ ನ್ಯಾಯಾಧೀಶರಿಂದಲೇ ಅದರ ಉದ್ಘಾಟನೆ. 'ಸ್ಟಾರ್ ಹೋಟೆಲ್' ಒಡೆಯ ನ್ಯಾಯಾಲಯದ ಕಟ್ಟೆಹತ್ತಿದ. ಗೆದ್ದ ಕೂಡಾ. ಆದರೆ ಅಂಗಡಿ ಸುಪರ್ದಿಗೆ ಬರಲಿಲ್ಲ.

★ ಮುಸ್ಲಿ ಮಹಿಳೆಯೊಬ್ಬಳು ಸತ್ತಳು. ಸಂಬಂಧಿಕರು ಆಕೆಯ ದಫನಕ್ಕೆ ಸಮಾಧಿಗೆ ಸ್ಮಶಾನಕ್ಕೆ ಹೋದರೆ ಆಕೆಯ ದಫನ ಮಾಡಲು ಕೆಲವು ಹಿಂದೂಗಳು ಬಿಡಲಿಲ್ಲ. ಸಂಬಂಧಿಕರು ಮ್ಯಾಜಿಸ್ಟ್ರೇಟರ ಬಳಿ ಹೋದರು. ಹಿಂದೂಗಳು ಅಡ್ಡಿ ಮಾಡುವುದಾದರೆ ಇನ್ನೊಂದು ಸ್ಮಶಾನಕ್ಕೆ ಹೋಗಿ-ಆತನ ಸಲಹೆ! ಅಲ್ಲಿಯೂ ಅದೇ ಅಡ್ಡಿ. ಮ್ಯಾಜಿಸ್ಟ್ರೇಟ್ ಮತ್ತೊಂದೆಡೆ ಹೋಗಿ ಎಂದ. ಅಲ್ಲೂ ಅದೇ ಕಥೆ. ಮತ್ತೆಮ್ಯಾಜಿಸ್ಟ್ರೇಟ್‌ನದು ಅದೇ ರಾಗ. ಕೊನೆಗೂ ಸ್ಮಶಾನದಿಂದ ಸ್ಮಶಾನಕ್ಕೆ ಅಲೆದು 22 ಗಂಟೆಗಳ ನಂತರ ಅಯೋಧ್ಯೆಯ ಹೊರಗಡೆ ದಫನ ಕಾರ್ಯ ನಡೆಯಿತು. ಇನ್ನೂ ನಾಲ್ಕು ಹೆಣಗಳಿಗೆ ಇದೇ ಗತಿ.

ಅಕ್ಷಯ ಬ್ರಹಮಚಾರಿಯವರ ಸಹನೆ ಮೀರಿಸಿದ ಘಟನೆಗಳಿವು. ಈ ಅನ್ಯಾಯಗಳ ವಿರುದ್ಧ ಎಷ್ಟೇ ದನಿಯೆತ್ತಿದರೂ ಪ್ರಯೋಜನವಾಗಲಿಲ್ಲ. ಕೊನೆಯ ಅಸ್ತ್ರವಾಗಿ ಜನವರಿ 30, 1950 ರಂದು ಅವರು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಫೆಬ್ರವರಿ 4ರಂದು ಉತ್ತರ ಪ್ರದೇಶ ಗೃಹಮಂತ್ರಿಗಳ ಆಶ್ವಾಸನೆ ಮೇರೆಗೆ ಉಪವಾಸ ನಿಲ್ಲಿಸಿದರು. ಆದರೆ ಪರಿಸ್ಥಿತಿ ಸುಧಾರಿಸಲಿಲ್ಲ........

ಶ್ರೀ ಅಕ್ಷಯ ಬ್ರಹ್ಮಚಾರಿ ಆಗ ಫೈಜಾಬಾದ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಒಬ್ಬ ಕಾರ್ಯದರ್ಶಿ ಹಾಗೂ ಉತ್ತರ ಪ್ರದೇಶ ರಾಜ್ಯ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದ, ಪ್ರಾಮಾಣಿಕ ಕಾರ್ಯಕರ್ತನೆಂದು ಹೆಸರಾಗಿದ್ದ ವ್ಯಕ್ತಿ.

(ಇವು ಪ್ರಖ್ಯಾತ ಗಾಂಧೀವಾದಿ ಕೆ.ಜಿ. ಮಶ್ರೂವಾಲಾ 'ಹರಿಜನ ಸೇವಕ್' ಪತ್ರಿಕೆಯ ಆಗಸ್ಟ್ 19,1950 ರ ಸಂಚಿಕೆಯಲ್ಲಿ " ಅಯೋಧ್ಯೆಯ ಮುಸ್ಲಿಮರು" ಎಂಬ ಲೇಖನದಲ್ಲಿ ಉಲ್ಲೇಖಿಸಿದ ಘಟನೆಗಳು.)

ಪಾಳೆಗಾರಿ ವಿಚಾರಕ್ಕೆ ಸವಾಲಾಗಿ ನಿಂತ ಧೀಮಂತ ಮಹಿಳೆ

'ಹೋದ್ಯಾ ಪಿಶಾಚಿ ಅಂದ್ರೆ ಇಲ್ಲಾ ಬಂದೆ ಗವಾಕ್ಷೀಲಿ' ಅನ್ನುವ ರೀತಿ ವಿಜ್ಞಾನ ಸಾಕಷ್ಟು ಬೆಳೆಯುತ್ತಿರುವ ಈ ವೈಜ್ಞಾನಿಕ ದೃಷ್ಟಿಕೋನದ ಕೊರತೆಯಿರುವ ಈ ನಮ್ಮ ನಾಡಿನಲ್ಲಿ, ಪಳೆಯುಳಿಕೆಗಳಾಗಿ, ಬೂದಿಮುಚ್ಚಿದ ಕೆಂಡವಾಗಿ ಉಳಿದಿರುವ ಪಾಳೆಗಾರಿ ಮೌಲ್ಯಗಳು ಅಯೋಧ್ಯೆಯ ರಾಮದೇವಸ್ಥಾನ,ಮಧುರೆಯ ಕೃಷ್ಣದೇವಸ್ಥಾನ ಕಾಶಿಯಲ್ಲಿಯ ವಿಶ್ವನಾಥನ ದೇವಸ್ಥಾನಗಳ ನಿರ್ಮಾಣದ ಹೆಸರಿನಲ್ಲಿ,ರಾಜಕೀಯ ಚುಕ್ಕಾಣಿಯನ್ನು ಹಿಡಿದು ಇಡೀ ಪ್ರಗತಿಯ ವಾತಾವರಣವನ್ನೇ ಅಲ್ಲೋಲ ಕಲ್ಲೋಲ ಮಾಡುತ್ತಿರುವುದು ಜನತೆಯಗಮನಕ್ಕೆ ಬಂದಿದೆ.ಇದರ ಇನ್ನೊಂದು ಮಜಲಾಗಿ ಮಹಿಳೆಯರ ವಿಮೋಚನೆಗಾಗಿ,ಸಮಾನತೆಗಾಗಿ ನಡೆಯುತ್ತಿರುವ ಧೀಮಂತ ಹೋರಾಟಗಳಿಗೇ ಕೊಡಲಿ ಪೆಟ್ಟಾಗಿ ಬಂದ ದೇಶದ .ಶ್ರೇಷ್ಠನ್ಯಾಯಾಲಯದ ಮುಖ್ಯನ್ಯಾಯಾಧೀಶ ರಂಗನಾಥ ಮಿಶ್ರಾರವರ ಅಸಂಬದ್ಧ ವಾಗ್ಝರಿಯಲ್ಲಿ ಉರುಳಿಬಂದ ಅಣಿಮುತ್ತಿನ ನುಡಿಗಳು. ಪಾಳೆಗಾರಿ ಸಂಕೋಲೆಗಳನ್ನು ಒಂದೊಂದಾಗಿ ಕಳಚಿಕೊಳ್ಳಬೇಕೆಂಬ ಪ್ರಯತ್ನದಲ್ಲಿ ಮಹಿಳಾ ಚಳುವಳಿಗಳು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಒಂದೆಡೆ ಬೆಳೆದು ಬರುತ್ತಿದೆ, ಮತ್ತೊಂದೆಡೆ ಮಹಿಳೆಯರನ್ನು ಪುನಃನಾಲ್ಕುಗೋಡೆಗಳ ಮಧ್ಯೆ ಬಂಧಿಸುವ, ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲಾಗದ ಕೊಳೆತುನಾರುವ ಸಂಸ್ಕೃತಿಗೆ, ಮಾತೃದೇವೋಭವ, ಕ್ಷಮಯಾ ಧರಿತ್ರೀ ಎಂಬ ಬೂಟಾಟಿಕೆಗಳ ಸಕ್ಕರೆಯ ಮೇಲ್‌ಹೊದಿಕೆಯನ್ನು ಹೊದಿಸುವ ವಾತಾವರಣವನ್ನು ಪುನರುತ್ಥಾನಗೊಳಿಸಲು ಹೊರಟಿರುವ ಅನೇಕಾನೇಕ ವಿಚಾರವಾದಿ ತಲೆಗಳನ್ನು ಇಂತಹವರ ಮೂಲಕ ಗುರುತಿಸಬೇಕಾಗಿದೆ.ಈ ಬಗ್ಗೆ ಜಾಗ್ರತರಾಗಲು ಮಹಿಳೆಯರಿಗೊಂದು ದಾರಿ ದೀಪವಾಗಿದೆ.ಇದನ್ನು ಪ್ರತಿಭಟಿಸಿದ ಅ.ಭಾ.ಪ್ರ.ಮಹಿಳಾ ಸಂಘಟನೆಯ ಕೇಂದ್ರ ನಾಯಕತ್ವ.

ನ್ಯಾಯಾಲಯಗಳಿಗಾಗಿ ಆಗಸ್ಟ್ 30 ರಂದಿನ ತನ್ನ ಕಾರ್ಯಕ್ರಮದಲ್ಲಿ ಒತ್ತಾಯಿಸಿದ ಮುಖ್ಯಬೇಡಿಕೆಯೆಂದರೆ, ಈ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸುವಾಗ, ಆತ ಮಹಿಳೆಯರ ಸ್ಥಾನ ಮಾನ- ಗೌರವಾದಿಗಳನ್ನು ಎತ್ತಿಹಿಡಿಯುವ ಮನೋಭಾವನೆಗಳನ್ನು ಹೊಂದಿದವನಾಗಿರಬೇಕೆಂದು ಒತ್ತು ಕೊಟ್ಟಿತ್ತು. ಆದರೆ ಇಂದು ಕಾಣುತ್ತಿರುವುದಾದರೂ ಏನು? ದೇಶದ ಅತೀ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರೇ ಮಹಿಳೆಯರ ವಿಗತಿಯೆಡೆಗೆ ಬೊಟ್ಟುಮಾಡಿ ತೋರುತ್ತಿರುವುದೆಂದರೆ-ಬೇಲಿಯೇ ಎದ್ದು ಹೊಲ ಮೇಯಿದಂತಾಗಿಲ್ಲವೆ? ಸಂವಿಧಾನಾತ್ಮಕ ಸಮಾನತೆಗಾಗಿ ಹೋರಾಡುತ್ತಿರುವ ಮಹಿಳೆಯರಿಗೆ ಇಂತಹದರಿಂದ ಸರಿಯಾದ ನ್ಯಾಯ ಸಿಗಲು ಸಾಧ್ಯವೇ? ಆದರೆ ಅ.ಭಾ.ಪ್ರ.ಮಹಿಳಾ ಸಂಘಟನೆಯ ಧೀಮಂತ ಎದುರಿಸುವಿಕೆಯಿಂದಾಗಿ ಈ ವಿಚಾರವನ್ನು ನಿರ್ವೀರ್ಯಗೊಳಿಸಿ ಹಳ್ಳಿ-ದಿಲ್ಲಿಗಳ ಸಂದುಗೊಂದುಗಳಲ್ಲಿ ಈ ವಿಚಾರ ಹಬ್ಬುವಂತೆ ನಿಷ್ಕ್ರಿಯಗೊಳಿಸಲಾಯಿತು. ಈ ವಿಜಯ ಪ್ರಗತಿಯ ಹಾದಿಯಲ್ಲಿ ಮುಂದುವರಿಯಬೇಕೆನ್ನುವ ಸರ್ವ ಜನತೆಯ ಜಯ, ಆಡಿದ ತಪ್ಪ ವಿಚಾರದ ಮಾತುಗಳನ್ನು ಹಿಂತೆಗೆದುಕೊಂಡದ್ದು ಇಂತಹ ಕ್ಷುಲ್ಲಕ ವಿಚಾರವುಳ್ಳ ಪ್ರತಿಯೊಬ್ಬ ಪ್ರತಿಗಾಮಿಗೊಂದು ಸವಾಲು ಮತ್ತು ಎಚ್ಚರಿಕೆ, ಎಂಬುದನ್ನು ಚರಿತ್ರೆಯಲ್ಲಿ ದಾಖಲುಗೊಳಿಸುವ ವಿಷಯ ಎಂಬುದು ಈ ದೇಶದ ಸಮಸ್ತ ಜನತೆ ನೆನಪಿನಲ್ಲಿಡಬೇಕಾಗುತ್ತದೆ.

ಹರಣಿ ಕಕ್ಕೇರಿ
ರಾಜ್ಯಾಧ್ಯಕ್ಷೆ
ಜನವಾದಿ ಮಹಿಳಾ ಸಂಘಟನೆ

ಕುಟುಂಬ

ರಾಜ್ಯದ ಮೂಲೆ ಮೂಲೆಗಳಿಂದ ರೈತರ ಕಾಲು ಜಾಥಾ

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘ ಜಂಟಿಯಾಗಿ ರಾಜ್ಯದ ಬೀದರ್‌ನಿಂದ ಡಿಸೆಂಬರ್ 19 ರಿಂದಲೂ, ಬಿಜಾಪುರದಿಂದ ಡಿಸೆಂಬರ್ 28 ರಂದು ಮಂಗಳೂರುನಿಂದ ಜನವರಿ 4 ರಂದು, ಕೋಲಾರದ ಎಲ್ಲಾ ತಾಲೂಕುಗಳಿಂದ ಜನವರಿ 16 ರಿಂದಲೂ ರೈತ ಕೃಷಿ ಕೂಲಿಕಾರರ ಕಾಲು ಜಾಥವನ್ನು ನಡೆಸಲಾಗುವುದು. ಇವುಗಳಿಗೆ ತಯಾರಿಯಾಗಿ ಜಿಲ್ಲಾವಾರು ಜೀಪ್‌ಜಾಥಗಳನ್ನು ನಡೆಸಲಾಗುವುದು.ಈ ಜಾಥಾಗಳು ಜನವರಿ21 ರಂದು ರಾಜಧಾನಿಗೆ ತಲುಪಿ ಲಕ್ಷರೈತರು ಪ್ರದರ್ಶನವನ್ನು ನಡೆಸಿ ಮುಖ್ಯಮಂತ್ರಿಗಳಿಗೆ ರೈತರ ಲಕ್ಷಾಂತರ ಸಹಿಗಳೊಂದಿಗೆ ಹನ್ನೆರಡು ಬೇಡಿಕೆಗಳ ಅಂತಿಮ ಮನವಿಯನ್ನು ಸಲ್ಲಿಸಲಾಗುವುದು ಎಂದು ರೈತ ಸಂಘದ ಅಧ್ಯಕ್ಷರಾದ ಕಾಂ ಜಿ.ರಾಮಚಂದ್ರರಾವ್ ಇಂದು ಪತ್ರಿಕಾಗೋಷ್ಠಿಯೊಂದರಲ್ಲಿ ತಿಳಿಸಿದರು.

ಒಂದೆಡೆ ಜನತೆಯ ಐಕ್ಯತೆಗೆ ರಾಷ್ಟ್ರದ ಐಕ್ಯತೆಗೆ ಮಾರಕವಾದ ಕೋಮುವಾದ, ವಿಚ್ಛಿದ್ರಕಾರಿ ಶಕ್ತಿಗಳ ಕೈ ಮೇಲಾಗುತ್ತಿದೆ, ಇನ್ನೊಂದೆಡೆ ಜನರ ಸಮಸ್ಯೆಗಳ ಇನ್ನಷ್ಟು ಉಲ್ಬಣಗೊಂಡಿವೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳನ್ನು ಜನರಿಂದ ಬೇರ್ಪಡಿಸಲು, ರೈತಾಪಿ ದುಡಿಯುವ ಜನರ ಐಕ್ಯತೆಯನ್ನು ಅನುಸರಿಸಲು ಅವರನ್ನು ಬಾಧಿಸುವ ಹನ್ನೆರಡು ಬೇಡಿಕೆಗಳಿಗೆ ತೀವ್ರವಾದ ಚಳುವಳಿಗೆ ಪ್ರಾಂತ ರೈತಸಂಘ ಹಾಗು ಪ್ರಾಂತ ಕೃಷಿಕೂಲಿಕಾರ ಸಂಘಟನೆಗಳು ತೀರ್ಮಾನಿಸಿವೆ. ರಾಜ್ಯದ ಮೂಲೆ ಮೂಲೆಗಳಿಂದಕಾಲು ಜಾಥ, ಜೀಪ್ ಜಾಥಾ,ಸೈಕಲ್‌ಜಾಥಾಗಳ ಮುಕ್ತಾಂತರ ಬೃಹತ್ ಸಂಖ್ಯೆಯಲ್ಲಿ ಜನವರಿ 21 ರಂದು ರಾಜಧಾನಿಯಲ್ಲಿ ಬೃಹತ್ ಪ್ರದರ್ಶನವನ್ನು ನಡೆಸಲಾಗುವುದು.ಆಗಲೂ ಸರಕಾರ ತನ್ನ ಧೋರಣೆಯಲ್ಲಿ ಬದಲಾವಣೆಯನ್ನು ತರದಿದ್ದಲ್ಲಿ ರಾಜ್ಯವ್ಯಾಪಿ ತೀವ್ರತರವಾದ ಚಳುವಳಿಯನ್ನು ನಡೆಸಲಾಗುವುದು ಎಂದು ಅವರು ತಿಳಿಸಿದರು.



ಡಿ.ವೈ.ಎಫ್.ಐ.ನ ದಶಮಾನೋತ್ಸವ ಕಾರ್ಯಕ್ರಮ

ಮಾನವಸರಪಳಿ :ಹೊಸಪೇಟೆ

ಕಳೆದೊಂದು ವರ್ಷದ ಹಿಂದೆಯಷ್ಟೇ ಕೋಮುಗಲಭೆಯಲ್ಲಿ ತತ್ತರಿಸಿದ್ದ ಹೊಸಪೇಟೆ ನಗರದಲ್ಲಿ ಮಾನವ ಸರಪಳಿಗೆ ತುಂಬಾ ಉತ್ತಮ ಸ್ಪಂದನ ದೊರೆಯಿತು. ರಾಮಜನ್ಮ ಭೂಮಿ ಬಾಬ್ರಿ ಮಸೀದಿಯ ವಿವಾದದಲ್ಲಿ ಕೋಮುವಾದಿಗಳು ಅದೆಷ್ಟೇ ಪ್ರಚೋದಿಸಿದರೂ ಜನರು ಕಿವಿಗೊಡದೇ ಶಾಂತಿ ಕಾಪಾಡಿಕೊಂಡು ಬಂದಿದ್ದಾರೆ. ಈ ನೆನಪು ಸರಪಳಿ ರಚನೆಯ ಸಂದರ್ಭಕ್ಕೆ ಎಲ್ಲರಲ್ಲಿ...

ಸಂಜೆ ಮುಖ್ಯ ಬೀದಿಯ ನಡುವೆ ಸರಪಳಿಯಾಗಲು ತಯಾರಾಗಿ ನಿಂತಿದ್ದ ಜನ 6 ಗಂಟೆಯಾಗುತ್ತಿದ್ದಂತೆಯೇಎಲ್ಲರೂ ಕೈಹಿಡಿದು ಘೋಷಣೆ ಕೂಗುತ್ತಾ ಸರಪಳಿ ರಚಿಸಿದರು. ಪಾದಗಟ್ಟ ಆಂಜನೇಯನ ದೇವಸ್ಥಾನದಿಂದ ಆರಂಭಗೊಂಡು ಪರ್ಕಲ್ ಮಸೀದಿಯಿಂದ ಹಾದು ಪಕ್ಕದ ಚರ್ಚ್‌ವರೆಗೆ ಇತ್ತು. ಇದರಲ್ಲಿ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಕಾರ್ಯಕರ್ತರಲ್ಲದೇ ಲೇಖಕರೂ, ರತ್ರಕರ್ತರಾದ ಜೈನುಲ್ಲಾ.ಎಸ್.ಬಳ್ಳಾರಿ, ಮಧುಸೂಧನ ಕಾಡ್ಲೂರ್, ಪರಶುರಾಮ್ ಕಲಾಲ್, ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷ ಜಂಬಯ್ಯ ನಾಯಕ ಮುಂತಾದವರಿದ್ದರು. 350 ರಷ್ಟಿದ್ದ ಮಾನವ ಸರಪಳಿಯು ಘೋಷಣೆಗಳೊಂದಿಗೆ ಪ್ರಮುಖ ಬೀದಿಯಲ್ಲಿ ಹಾದು ಬಸ್ ನಿಲ್ದಾಣದೆದುರು ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಪ್ರತಿಜ್ಞೆ-
ಯನ್ನು ಎಸ್‌ಎಫ್‌ಐ ಮುಖಂಡ ಕಾಂ:ಎಲ್. ಮಂಜುನಾಥ್‌ರವರು ಬೋಧಿಸಿದರು. ಸಭೆಯನ್ನುದ್ದೇಶಿಸಿ ಎಸ್‌ಎಫ್‌ಐನ ಜಿಲ್ಲಾ ಸಹಕಾರ್ಯದರ್ಶಿ ಕಾಸಿಂ ಅಲಿ, ರಾಜ್ಯ ಸಮಿತಿ ಕಾರ್ಯದರ್ಶಿ ಎಸ್.ವೈ.ಗುರುಶಾಂತ್, ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಮಾತನಾಡಿದರು. ನಗರಸಭಾ ಸದಸ್ಯ ಚಂದ್ರಬಾಬು ವಂದಿಸಿದರು.

ದೊಡ್ಡಬಳ್ಳಾಪುರದಲ್ಲಿ

ಸಿಪಿಐ(ಎಂ) ಘಟಕದ ನೇತೃತ್ವದಲ್ಲಿ ಮಾನವ ಸರಪಳಿ ಕಾರ್ಯಕ್ರಮವನ್ನು ದಿನಾಂಕ 6 ರಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಪುರಭವನದ ಬಳಿಯಿಂದ ನಡೆಯಲಾಯಿತು. ಈ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಮಹಿಳೆಯರೂ ಸೇರಿದಂತೆ ಕಾರ್ಮಿಕರು, ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇದಕ್ಕೆ ಮೊದಲು ನಡೆದ ಬಹಿರಂಗ ಸಭೆಯಲ್ಲಿ ತಾಲೂಕಿನ ಶಾಸಕರಾದ ಆರ್.ಎಲ್.ಜಾಲಪ್ಪ, ಸಿಪಿಐ(ಎಂ) ಮುಖಂಡರಾದ ಹೆಚ್.ಮುಗವಾಳ-
ಪ್ಪನವರು, ಕನ್ನಡ ಪಕ್ಷದ ಡಾ.ವೆಂಕಟರೆಡ್ಡಿ, ಡಿಎಸ್‌ಎಸ್‌ನ ಮುನಿರಾಜ್, ಸಿಪಿಐ ನಾಯಕರಾದ ರಾಮಾಜಿನಪ್ಪ ಮಾತನಾಡಿ ಕೋಮು ಸೌಹಾರ್ದತೆಗೆ ಮನವಿ ಮಾಡಿದರು ಮತ್ತು ಸೌಹಾರ್ದತೆಗಾಗಿ ಹೋರಾಡಲು ರಚಿಸಿರುವ ಕೋಮು ಸೌಹಾರ್ದತೆ ಸ್ವಮನ್ವಯ ಸಮಿತಿಯನ್ನು ಇನ್ನಷ್ಟು ಕ್ರಿಯಾಶೀಲಗೊಳಿಸಲು ಕರೆ ನೀಡಿದರು.

ಡಿ.ವೈ.ಎಫ್.ಐ. ಘಟಕದ ಸ್ಥಾಪನೆ

ಬಸ್ರೂರು ಗ್ರಾಮದ ಕೋಳಕೆ ಜನತಾ ಕಾಲೋನಿಯಲ್ಲಿ ನವೆಂಬರ್ 25 ರಂದು ಶ್ರೀಯುತ ಅಬುಬಕರ್‌ರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲಾಯಿತು. ಶ್ರೀ ಗೋವಿಂದ ಮಾಗೋಳಿಯವರು ಸಂಘಟನೆಯ ಕಾರ್ಯಕ್ರಮ ಹಾಗೂ ಉದ್ದೇಶವನ್ನು ಸಭೆಗೆ ವಿವರಿಸಿದರು. ಮುಖ್ಯ ಅತಿಥಿಯಾಗಿ ಮಂಡಲ್ ಪಂಚಾಯಿತಿ ಸದಸ್ಯರಾದ ಕೆ.ರತ್ನಾಕರ ಶೆಟ್ಟಿ ಹಾಗೂ ಡಿವೈಎಫ್‌ಐ ತಾಲ್ಲೂಕು ಸಮಿತಿಯ ಸದಸ್ಯರಾದ ಗೋಪಾಲ್ ಶೆಟ್ಟಿಗಾರ್‌ರವರು ಭಾಗವಹಿಸಿದ್ದರು.

ಸಭೆಯಲ್ಲಿ 25 ಮಂದಿ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಬಿ.ನಾರಾಯಣ, ಉಪಾಧ್ಯಕ್ಷರಾಗಿ ಅಂಬಿಕ ಶೆಟ್ಟಿ ಹಾಗೂ ಇಸಾಕ್ ಸಾಹೇಬ, ಕಾರ್ಯದರ್ಶಿಯಾಗಿ ಅಬುಬಕರ್, ಸಹ ಕಾರ್ಯದರ್ಶಿಯಾಗಿ ಮಂಜು ಶೆಟ್ಟಿ ಹಾಗೂ ಗುಲ್ಜಾರ, ಕ್ರೀಡಾ ಕಾರ್ಯದರ್ಶಿಗಳಾಗಿ ಅಬ್ಬಾಸ್, ಗೌಸು, ರಂಗ, ಮತ್ತು ರಮೇಶ, ಕೋಶಾಧಿಕಾರಿಯಾಗಿ ನಾರಾಯಣ ಪೂಜಾರು ಅವರನ್ನು ಸಭೆಯು ಬಹುಮತದಿಂದ ಆಯ್ಕೆ ಮಾಡಿತು. ಸಭೆಯು ಗ್ರಾಮದ ಸಮಸ್ಯೆಗಳ ಬಗ್ಗೆ ನಿರ್ಣಯಗಳನ್ನು ಕೈಗೊಂಡು ಅವುಗಳನ್ನು ಬಗೆಹರಿಸಲು ಒತ್ತಾಯಿಸಲಾಯಿತು.

ಡಿ.ವೈ.ಎಫ್.ಐ.ನ ದಶಮಾನೋತ್ಸವ ಕಾರ್ಯಕ್ರಮ

ಡಿವೈಎಫ್‌ಐನ ದಶಮಾನೋತ್ಸವದ ಅಂಗವಾಗಿ ಬೆಂಗಳೂರಿನ ಡಿವೈಎಫ್‌ಐ ನ ಘಟಕದ ಆಶ್ರಯದಲ್ಲಿ ನವೆಂಬರ್ 25 ರಂದು "ಜಕ್ಕರಾಯನ ಕೆರೆ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆ"ಯ ವತಿಯಿಂದ ಫುಟ್‌ಬಾಲ್ ಪಂದ್ಯಾವಳಿಯನ್ನು ಏರ್ಪಡಿಸಲಾಗಿತ್ತು. ಈ ಪಂದ್ಯಾವಳಿಯಲ್ಲಿ 8 ತಂಡಗಳು ಭಾಗವಹಿಸಿದ್ದವು. ಜಿನುಗುವ ಜಡಿಮಳೆ, ಆಗಾಗ್ಗೆ ಬಿರುಸಾಗಿ ಸುರಿದ ಮಳೆಯನ್ನು ಲೆಕ್ಕಿಸದೆ ನಡೆದ ಈ ಪಂದ್ಯಾವಳಿಯ ಅಧ್ಯಕ್ಷತೆಯನ್ನು ಕಾ:ಗೋಪಾಲಕೃಷ್ಣ ವಹಿಸಿದ್ದರು. ಗಾಂಧಿನಗರದ ಶಾಸಕರಾದ ಆರ್.ದಯಾನಂದರಾವ್ ಈ ಪಂದ್ಯಾವಳಿಯನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶಿವರಾಂ, ಟಿ.ಶಿವಶಂಕರ್, ಶ್ರೀನಿವಾಸ್ ಹಾಗೂ ಬಹುಮಾನ ದಾನಿಗಳಾದ ಎ.ಜಿ.ಶೇಷಪ್ಪನವರು ಭಾಗವಹಿಸಿದ್ದರು.

ನಂತರ ನಡೆದ ಬಹುಮಾನ ವಿತರಣೆ ಸಮಾರಂಭದಲ್ಲಿ ಬೆಂಗಳೂರು ನಗರ ಸಭೆ ಉಪಮೇಯರ್ ಲಕ್ಷ್ಮೀದೇವಿಯವರು ಬಹುಮಾನ ವಿತರಣೆ ಮಾಡಿದರು. ಕಾ:ಶಂಕರಪ್ಪ ಅಧ್ಯಕ್ಷತೆ ವಹಿಸಿದ್ದರು. ಈ ಪಂದ್ಯಾವಳಿಯಲ್ಲಿ ಎಸ್.ಬಿ.ನೈಟ್ಸ್ ಫುಟ್‌ಬಾಲ್ ತಂಡ ಮೊದಲನೇ ಸ್ಥಾನವನ್ನು ಹಾಗೂ ಸುಂದರಂ ನೈಟ್ಸ್ ತಂಡ ದ್ವಿತೀಯ ಸ್ಥಾನವನ್ನು ಗಳಿಸಿತು.

ನಿಮ್ಮ ಪ್ರಶ್ನೆ-ನಮ್ಮ ಉತ್ತರ

ಪ್ರ: ಪರಿಷ್ಕರಣವಾದ, ಎಡ ಪಂಥವಾದ ಎಂದರೇನು?

-ಬಿ.ಮೋನಪ್ಪ ಬೆಲ್ಲದ. ಬೆಂಗಳೂರು

ದುಡಿಯುವ ವರ್ಗದ ಕ್ರಾಂತಿಕಾರಿ ಪಕ್ಷವನ್ನು, ಕ್ರಾಂತಿಕಾರಿ ಪಥದಿಂದ ದಾರಿತಪ್ಪಿಸುವ ಎರಡು ತಪ್ಪು ಧೋರಣೆಗಳು ಇವೆ. ಯಾವುದೇ ಕ್ರಾಂತಿಕಾರಿ ಪಕ್ಷ ಈ ಎರಡು ತಪ್ಪು ಧೋರಣೆಗಳತ್ತ ವಾಲದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ.

ಪರಿಷ್ಕರಣವಾದ ಎಂದು ಹೇಳುವುದು ಮಾರ್ಕ್ಸ್‌ವಾದದ ಮೂಲಭೂತ ನಿಲುಮೆಗಳನ್ನು ಪರಿಷ್ಕರಿಸುವ ತಪ್ಪು ಧೋರಣೆಗೆ. ಸಾಮಾನ್ಯವಾಗಿ ಪರಿಷ್ಕರಣೆಗೆ ಈಡಾಗುವ ಮೂಲಭೂತ ಮಾರ್ಕ್ಸ್‌ವಾದಿ ನಿಲುಮೆಗಳೆಂದರೆ -ವರ್ಗ ಹೋರಾಟ, ದುಡಿಯುವ ವರ್ಗದ ಸರ್ವಾಧಿಕಾರ, ಬಂಡವಾಳಶಾಹಿ ವ್ಯವಸ್ಥೆಯ ಪತನದ ಅನಿವಾರ್ಯತೆ ಇತ್ಯಾದಿ.. ಈ ತಪ್ಪು ನಿಲುವನ್ನು ಸುಧಾರಣಾವಾದ ಎಂದೂ ಹೇಳಬಹುದು. ಏಕೆಂದರೆ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯದೆ ಕೆಲವು ಸುಧಾರಣೆಗಳಿಂದ 'ಸಮಾಜವಾದ' ತರಲು ಸಾಧ್ಯ ಎಂಬ ತಪ್ಪು ತಿಳುವಳಿಕೆ ಇದು.

ಭಾರತದಲ್ಲಿ ಪರಿಷ್ಕರಣವಾದಿ ನಿಲುವು (ಮತ್ತು ಎಡ ಪಂಥವಾದ ಸಹ) ಕಾಣಿಸಿಕೊಳ್ಳಲು ಆರಂಭವಾದದ್ದು ಭಾರತ ಸ್ವತಂತ್ರವಾದ ಸಂದರ್ಭದಲ್ಲಿ. ಆಗಿನಿಂದ ಆರಂಭವಾಗಿ ಪಕ್ಷದೊಳಗೆ ಬೆಳೆಯುತ್ತಾ ಹೋದ ಈ ನಿಲುವು 1964 ರಲ್ಲಿ ಪಕ್ಷ ಇಬ್ಭಾಗವಾಗುವವರೆಗೆ ಹೋಯಿತು. ಪಕ್ಷದ ಕೇಂದ್ರ ಸಮಿತಿಯಲ್ಲಿ ಪರಿಷ್ಕರಣವಾದಿಗಳು ಬಹುಮತ ಪಡೆದಿದ್ದರೂ ಚಳುವಳಿಯಲ್ಲಿ, ಪಕ್ಷದ ಸದಸ್ಯತ್ವದಲ್ಲಿ ಅಷ್ಟಾಗಿರಲಿಲ್ಲ.

ಭಾರತ ಸ್ವತಂತ್ರವಾದ ನಂತರ ಹೊಸ ಪ್ರಭುತ್ವದ ಸ್ವರೂಪ, ಅಲ್ಲಿನ ವರ್ಗಗಳ ಗುರುತಿಸುವಿಕೆ ಮತ್ತು ಭಾರತದ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಪಥದ ಚರ್ಚೆಯಲ್ಲಿ ಎರಡು ಧೋರಣೆಗಳು ಕಂಡು ಬಂದವು. ಒಂದು ಪರಿಷ್ಕರಣವಾದಿ, ಇನ್ನೊಂದು ಸರಿಯಾದ ಕ್ರಾಂತಿಕಾರಿ ಧೋರಣೆ.ಇದರಿಂದ ಎರಡು ಕಾರ್ಯಕ್ರಮಗಳು ಹೊಮ್ಮಿದ್ದವು(ಇದರ ಬಗ್ಗೆ ವಿವರಗಳು ಕಾಂ. ಹರಿಕೃಷ್ಣ ಸಿಂಗ್ ಸುರ್ಜಿತ್ ರವರು ಬರೆದ ಲೇಖನಮಾಲೆಯಲ್ಲಿ ಸಿಗುತ್ತವೆ. ಐಕ್ಯರಂಗ 1985ರ ಸಂಚಿಕೆಗಳಲ್ಲಿ)

ಪರಿಷ್ಕರಣವಾದಿ ರಾಜಕೀಯ ನೀತಿ ಸಿಪಿಐ ಕಾಂಗ್ರೆಸನ್ನು ಬೆಂಬಲಿಸುವ ಅದರ ಜೂನಿಯರ್ ಪಾಲುದಾರನಾಗುವ ಮಟ್ಟಿಗೆ ಹೋಯಿತು. 1956ರ ಆವಡಿ ಸಮಾಜವಾದದ ನೆಹರೂ ಕಾಂಗ್ರೆಸ್‌ನ ಬಾಲ ಹಿಡಿದ ಈ ಧೋರಣೆ , ಇಂದಿರಾರವರ ತುರ್ತುಪರಿಸ್ಥಿತಿಗೆ ಬೇಷರತ್ ಬೆಂಬಲ ನೀಡುವ ಏಕೈಕ ವಿರೋಧ ಪಕ್ಷವಾಗುವ ದಿವಾಳಿ ರಾಜಕಾರಣದವರೆಗೆ ಹೋಯಿತು.

ಸಿಪಿಐನ ಪರಿಷ್ಕರಣವಾದದ ಮುಖ್ಯ ಲಕ್ಷಣವೆಂದರೆ -ವರ್ಗ ಹೋರಾಟದ ಬದಲು ಪ್ರಮುಖ ಆಳುವ ವರ್ಗ ಬೂರ್ಜ್ವಾ ವರ್ಗ ಮತ್ತು ಅದರ ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೆಸ್‌ನೊಂದಿಗೆ ವರ್ಗ ಸಹಕಾರ. ಇದಕ್ಕೆ ಆಧಾರ ಆಳುವ ಬೂರ್ಜ್ವಾ ವರ್ಗದಲ್ಲಿ ಗುತ್ತೇದಾರಿಗಳ ಅಧಿಪತ್ಯ ಗುರುತಿಸದೇ ಹೋದುದು. ಆ ವರ್ಗದ ಸಾಮ್ರಾಜ್ಯಶಾಹಿ-ವಿರೋಧಿ ಪಾತ್ರವನ್ನು ವಾಸ್ತವಕ್ಕಿಂತ ಅತಿಶಯವಾಗಿ ಭಾವಿಸಿದ್ದು. ಬೂರ್ಜ್ವಾ ವರ್ಗ ಪ್ರಭುತ್ವದಲ್ಲಿ ಪಾಳೆಯಗಾರಿ ವರ್ಗದೊಂದಿಗೆ ಅಧಿಕಾರ ಹಂಚಿಕೊಂಡದ್ದನ್ನು ಗುರುತಿಸದೇ ಹೋದದ್ದು. ಅಲ್ಲದೆ ಈ 'ರಾಷ್ಟ್ರೀಯ ಬೂರ್ಜ್ವಾ' ವರ್ಗದ ನಾಯಕತ್ವದಲ್ಲಿ ಪಾಳೆಯಗಾರಿ-ವಿರೋಧಿ, ಸಾಮ್ರಾಜ್ಯಶಾಹಿ-ವಿರೋಧಿ, ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿ ಆಗುತ್ತದೆ ಎಂಬ ತಪ್ಪು ಕಲ್ಪನೆ. ಮಾರ್ಕ್ಸ್‌ವಾದ-ಲೆನಿನ್‌ವಾದದ ಸಾರವಾದ ಕಾರ್ಮಿಕ ವರ್ಗದ ಅಧಿಪತ್ಯದಲ್ಲಿ ಎಲ್ಲಾ ದುಡಿಯುವ ವರ್ಗಗಳ ವರ್ಗ ಸಖ್ಯತೆಯ ಆಧಾರದ ಮೇಲೆ ಪ್ರಜಾಸತ್ತಾತ್ಮಕ ಕ್ರಾಂತಿಯ ಸುಳಿವೇ ಇರಲಿಲ್ಲ ಸಿಪಿಐನ ಪರಿಷ್ಕರಣವಾದಿ ಕಾರ್ಯಕ್ರಮದಲ್ಲಿ.

ಎಡ ಪಂಥವಾದದ ಮುಖ್ಯಲಕ್ಷಣಗಳೆಂದರೆ-ಜನ ಸಮೂಹಗಳ ಸಂಘಟನೆ ಕ್ರಾಂತಿಕಾರಿ ಚಳುವಳಿಯಲ್ಲಿ ಪಾಲ್ಗೊಳ್ಳುವಿಕೆಗಿಂತ
ಪಕ್ಷದ ಕಾರ್ಯಕರ್ತರ ಕಾರ್ಯಾಚರಣೆಗೆ ಹೆಚ್ಚಿನ ಒತ್ತು. ಕ್ರಾಂತಿಯತ್ತ ಕಾರ್ಯಾಚರಣೆಯಲ್ಲಿ ವಾಸ್ತವಿಕ ಪರಿಸ್ಥಿತಿಗಿಂತ ರಾಜಕೀಯ ಕಾರ್ಯಕರ್ತರ ಭಾವನಾತ್ಮಕ ಅನ್ನಿಸಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ, ಕ್ರಾಂತಿಯಲ್ಲಿ ಹಿಂಸೆಯ ಪಾತ್ರವನ್ನು ಅತಿಶಯಗೊಳಿಸುವುದು ಅದರಲ್ಲೂ ವರ್ಗ ವೈರಿಗಳ ನಿರ್ನಾಮ ವರ್ಗ ಸಂಘರ್ಷದ ಹೋರಾಟದ ಭಾಗ ಎಂದು ಪರಿಗಣಿಸುವುದು, ಕ್ರಾಂತಿಗೆ ಕಾರ್ಮಿಕ ವರ್ಗದ ಮಾನಸಿಕ ಸಿದ್ಧತೆ ಬಗ್ಗೆ ಅವಾಸ್ತವಿಕ ತಿಳುವಳಿಕೆ, ಆಳುವ ವರ್ಗ ಮತ್ತು ಪ್ರಭುತ್ವದ ದಮನ ಯಂತ್ರದ ಶಕ್ತಿಯನ್ನು ಪರಿಗಣಿಸದಿರುವುದು, ಕಾರ್ಮಿಕ ಮತ್ತು ರೈತ ವರ್ಗಗಳಲ್ಲದೆ ಇತರ ಮಧ್ಯಮ ವರ್ಗ ಮುಂತಾದ ಆಳುವ ವರ್ಗಕ್ಕೆ ಸೇರದ ಜನ ವಿಭಾಗಗಳನ್ನು ಕಾರ್ಮಿಕ ವರ್ಗದ ನಾಯಕತ್ವದ ಅಡಿಯಲ್ಲಿ ವರ್ಗ ಒಕ್ಕೂಟದೊಳಗೆ ಸೇರಿಸಿಕೊಳ್ಳುವ ಸೂಕ್ಷ್ಮ ಜವಾಬ್ದಾರಿ ಬಗ್ಗೆ ಅಲಕ್ಷ್ಯ ಇತ್ಯಾದಿ.

ಭಾರತದಲ್ಲಿ ಎಡ ಪಂಥವಾದದ ಆರಂಭವೂ ಭಾರತ ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿಯೇ. ತೆಲಂಗಾಣ ಸಶಸ್ತ್ರ ಹೋರಾಟ ಭಾರತದ ಸೈನ್ಯದ ವಿರುದ್ಧ ಮುಂದುವರಿಸುವುದು ಸಾಧ್ಯ ಮತ್ತು ಅದೇ ಭಾರತದ ಕ್ರಾಂತಿಯ ನಾಂದಿ ಎಂದು ಅವರ ವಾದವಾಗಿತ್ತು. ಇದೇ ವಾದ ಮುಂದುವರಿದು 1967-69ರಲ್ಲಿ ನಕ್ಸಲ್‌ವಾದಿ ಗುಂಪು ಮತ್ತು ಪಕ್ಷಗಳಾದವು. ಕಾಲಕ್ರಮೇಣ ಈ ಗುಂಪುಗಳು, ಪಕ್ಷಗಳು ಒಡೆಯುತ್ತಾ ಸುಮಾರು 64 ಗುಂಪುಗಳಾದವು. ಈ ಗುಂಪುಗಳು ಕಳೆದ 20 ವರ್ಷಗಳಲ್ಲಿ ಕಾರ್ಯಾಚರಣೆ ಅವರ ಎಡ ತಪ್ಪುಗಳು ಏನು ಎಂದು ಸ್ಪಷ್ಟ ಪಡಿಸಿದೆ ಆಂಧ್ರದ 'ಪೀಪಲ್ಸ್ ವಾರ್ ಗ್ರೂಪ್' ಗುಂಪಿನ ಚಟುವಟಿಕೆಗಳಂತೂ ಎಡ ಪಂಥವಾದ ಯಾವ ಅಧಃಪತನ ತಲುಪಬಹುದು ಎಂದು ಸೂಚಿಸುತ್ತದೆ.

ಪರಿ-
ಷ್ಕರಣವಾದ ಮತ್ತು ಎಡಪಂಥವಾದವನ್ನು ಬಲ ತಪ್ಪುಗಳು ಮತ್ತು ಎಡ ತಪ್ಪುಗಳು ಎಂದೂ ಕರೆಯಲಾಗುತ್ತದೆ. ಒಂದು ರೀತಿಯಲ್ಲಿ ಇವು ಒಂದೇ ನಾಣ್ಯದ ಮುಖಗಳಿದ್ದಂತೆ. ಈ ತಪ್ಪುಗಳು ಆಗುವುದು ಒಂದು ದೇಶದ ವಾಸ್ತವದ ವೈಜ್ಞಾನಿಕ ವಿಶ್ಲೇಷಣೆಯ ಅಭಾವದಿಂದ, ಸೈದ್ಧಾಂತಿಕ ಕಾರಣಗಳಿಂದ ಮಾತ್ರವಲ್ಲ. ಈ ತಪ್ಪುಗಳು ಆಗುವುದು ದುಡಿಯುವ ವರ್ಗದಲ್ಲಿ, ಕಾರ್ಯಕರ್ತರಲ್ಲಿ, ಚಳುವಳಿಯಲ್ಲಿ ಇತರ ವರ್ಗಗಳ (ಅದರಲ್ಲೂ ಬೂರ್ಜ್ವಾ ವರ್ಗದ) ದೃಷ್ಟಿಕೋನ, ಸಿದ್ಧಾಂತದ ದಟ್ಟ ಪ್ರಭಾವದಿಂದಲೂ ಆಗುತ್ತದೆ. ಕೆಲವೊಮ್ಮೆ ವಿಶಿಷ್ಟ ಸನ್ನಿವೇಶಗಳು ಈ ತಪ್ಪುಗಳಿಗೆ ಕಾರಣವಾಗುತ್ತವೆ. ಉದಾಹರಣೆಗೆ 'ಪರಿಷ್ಕರಣವಾದ ಪಕ್ಷದಲ್ಲಿ ತಲೆ ಎತ್ತುವುದಕ್ಕೆ ನೆಹರೂ ನಾಯಕತ್ವದಲ್ಲಿ ಮೊದಲ ದಶಕದಲ್ಲಿ ಆದ ಅಭಿವೃದ್ಧಿ, ಕಾರ್ಮಿಕ ವರ್ಗದ ಪ್ರಮುಖ ವಿಭಾಗಗಳ ಜೀವನ ಮಟ್ಟಕ್ಕೆ ಅನುಕೂಲವಾದ ಕಾನೂನುಗಳ ಜಾರಿ- ಇವೂ ಕಾರಣವಾಗಿರಬಹುದು ಎನ್ನಲಾಗಿದೆ. ಅದೇ ರೀತಿ ಎಡ ಪಂಥವಾದ 70 ರ ದಶಕದಲ್ಲಿ ಬಲವಾಗುವುದಕ್ಕೆ ಆಗ ಇದ್ದ ತೀವ್ರ ರಾಜಕೀಯ ಬಿಕ್ಕಟ್ಟು . ಹತಾಶ ಸ್ಥಿತಿಗಳೂ ಕಾರಣವಾಗಿರಬಹುದು. ಅದೇ ರೀತಿ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಎಡ-ಬಲ ತಪ್ಪುಗಳ ಪರಿಣಾಮವೂ ಬಿದ್ದಿರಬಹುದು.

ಸಿಪಿಐ(ಎಂ) ಅವಿಭಕ್ತ ಕಮ್ಯುನಿಸ್ಟ್ ಚಳುವಳಿಯಲ್ಲಿ ಎಡ ಮತ್ತು ಬಲ ತಪ್ಪುಗಳ ವಿರುದ್ಧ ನಿರಂತರ ಹೋರಾಟದ ಫಲ. ಒಟ್ಟಾರೆ ರಾಜಕೀಯ ಹಾದಿಯನ್ನು ಆರಿಸಿಕೊಳ್ಳುವುದರಲ್ಲಿ ಸ್ಥೂಲವಾಗಿ ಈ ಎರಡೂ ತಪ್ಪುಗಳನ್ನು ನಿವಾರಿಸಿಕೊಂಡು ಸರಿಯಾದ ಹಾದಿ ಹಿಡಿದಿದೆ. ಆದರೆ ಪಕ್ಷದ ವಿವಿಧ ಘಟಕಗಳು , ವ್ಯಕ್ತಿಗಳು ಎಡ ಮತ್ತು ಬಲ ತಪ್ಪುಗಳಿಂದ ಪೂರ್ಣವಾಗಿ ಮುಕ್ತರಾಗಿದ್ದಾರೆ ಎಂದು ಹೇಳುವುದು ತಪ್ಪು. ಏಕೆಂದರೆ ಪ್ರತಿಯೊಂದು ಬದಲಾದ ಸನ್ನಿವೇಶಗಳಲ್ಲೂ ರಾಜಕೀಯ ತಿರುವುಗಳಲ್ಲೂ ದೈನಂದಿನ ರಾಜಕೀಯ ಚಟುವಟಿಕೆಗಳಲ್ಲೂ ಎಡ-ಬಲ ತಪ್ಪುಗಳಿಗೆ ಅವಕಾಶವಿರುತ್ತದೆ. ಆದ್ದರಿಂದ ಕಮ್ಯುನಿಸ್ಟ್ ಸದಸ್ಯ , ಘಟಕ ಕೇಂದ್ರ ಸಮಿತಿಯ ಸ್ಥೂಲ ರಾಜಕೀಯ ನಿರ್ದೇಶನದ ಆಧಾರದಲ್ಲಿ ನಿರಂತರ ಎಚ್ಚರ ವಹಿಸುವುದು ಅಗತ್ಯ.



ಹಸುಳೆಗಳ ಹತ್ಯಾಕಾಂಡದ ಒಂದು ಉದಾಹರಣೆ! ಈ ಹೆಣ್ಣು ಕೂಸಿನ ಕುಟುಂಬದ ಎಲ್ಲರನ್ನೂ ಕೊಚ್ಚಿಹಾಕಿದರು. ಈಕೆ ಕೊಡಲಿ-ಯೇಟು ತಿಂದೂ ಬದುಕಿದಳು.

ಹೈದರಾಬಾದ್‌ನಲ್ಲಿ ಪಾಶವಿ ನೃತ್ಯ!

"ಈ ಹಲ್ಲೆಕೋರರಿಗೆ ಎಳೆ ವಯಸ್ಸಿನ ಮಕ್ಕಳಿಲ್ಲವೇ? ಈ ಹಸುಳೆಗಳನ್ನು ಮುಟ್ಟಲಾದರೂ ಅವರಿಗೆ ಹೇಗೆ ಮನಸ್ಸು ಬಂತು? ದೇವರು ಅವರನ್ನು ಕ್ಷಮಿಸಲಾರ"

ಧರ್ಮದ ಹೆಸರಿನಲ್ಲಿ ಯಾವ ಧರ್ಮವೂ ಇಲ್ಲದ ಕೊಲೆಗಾರರಿಗೆ ಕ್ರೂರವಾದ ರೀತಿಯಲ್ಲಿ ಬಲಿಯಾದ ತನ್ನ ಹಸುಳೆಗಳನ್ನು ಕಂಡು ಒಬ್ಬ ತಂದೆ ಎತ್ತಿದ ಉದ್ಗಾರವಿದು. ಈ ಮಕ್ಕಳ ತಾಯಿ ಕೂಡಾ ಇನ್ನೊಂದು ಮಗ್ಗಲಲ್ಲಿ ಜೀವನ್ಮರಣ ಹೋರಾಟದಲ್ಲಿ ತೊಡಗಿದ್ದಳು.

ಹೈದರಾಬಾದ್ ಉಸ್ಮಾನಿಯಾ ಆಸ್ಪತ್ರೆ ಹೃದಯ ವಿದ್ರಾವಕ ದೃಶ್ಯಗಳ ಆಗರವಾಗಿತ್ತು. ಆಗಾಗ ಕೋಮು ಗಲಭೆಗಳನ್ನು ಕಾಣುವ ಈ ನಗರಕ್ಕೆ ಕೂಡಾ ಇತ್ತೀಚಿನ ಘಟನೆಗಳು ಅಭೂತಪೂರ್ವ. ಮನುಷ್ಯ ಪಾಶವಿ ಬುದ್ದಿ ಅತ್ಯಂತ ರಸಾತಳಕ್ಕೆ ಇಳಿದಿತ್ತು. ಸರಕಾರದ ಪ್ರಕಾರವೇ ನಾಲ್ಕೈದು ದಿನಗಳಲ್ಲಿ 80 ಸಾವಿರಕ್ಕೂ ಹೆಚ್ಚು ಮುಗ್ಧರು ಈ ಪಾಶವೀ ಕೃತ್ಯಕ್ಕೆ ತುತ್ತಾಗಿದ್ದಾರೆ. ನಿಜವಾಗಿ ಸತ್ತವರ ಸಂಖ್ಯೆ 150ಕ್ಕೂ ಮೀರಿರಬಹುದೆಂದು ಅಂದಾಜು ಮಾಡಲಾಗಿದೆ.

ಈ ಪಾಶವೀ ಕೃತ್ಯಕ್ಕೆ ರಂಗ ಸಿದ್ಧತೆ ಮಾಡಿಕೊಟ್ಟದ್ದು 'ಸಂಸ್ಕೃತಿಯ', 'ಧರ್ಮದ' ಹೆಸರಿನಲ್ಲಿ ಮಾತನಾಡುವ ಅಡ್ವಾನಿಯವರ 'ರಥಯಾತ್ರೆ' ಎಂಬುದು ಎಲ್ಲರೂ ಒಪ್ಪುವ ಸಂಗತಿ. ಬಿಜೆಪಿ ಹಾಗೂ ಮಜ್ಲಿಸೇ ಇತ್ತೆಹಾದುಲ್ ಮುಸಲ್ಮೀನ್ ವ್ಯವಸ್ಥಿತವಾಗಿ ಯೋಜಿತವಾಗಿ ಕೋಮು ಭಾವೋದ್ರೇಕವೆಬ್ಬಿಸಿ ಜನರಲ್ಲಿ ಭಯದ ಭಾವನೆ ಹುಟ್ಟಿಸಿದ್ದರು. ಕಾಂಗ್ರೆ ಸರಕಾರದ ನಿಷ್ಕ್ರಿಯತೆ ಈ ಅಪಾರ ಅನಾಹುತಕ್ಕೆ ತುಪ್ಪ ಸುರಿಯಿತು.

ಕಾಂಗ್ರೆ ಮುಖಂಡರು ಆಸ್ಪತ್ರೆಗಳಿಗೆ, ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದಾಗ ದೊರೆತ ಬೈಗಳು, ತದ್ವಿರುದ್ಧವಾಗಿ ತೆಲುಗುದೇಶಂ, ಸಿಪಿಐ(ಎಂ), ಸಿಪಿಐ, ಎಂಸಿಪಿಐ ಕಾರ್ಯಕರ್ತರು ಮುಖಂಡರು ಶಾಂತಿ ರಕ್ಷಿಸುವ ಕೆಲಸದಲ್ಲಿ ತೊಡಗಿದಾಗ ಅವರಿಗೆ ದೊರೆತ ಸಹಕಾರ ಬೆಂಬಲ ಕಣ್ಣಿಗೆ ಕಟ್ಟುವಂತಿತ್ತು. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಆಂಧ್ರ ರಾಜ್ಯ ಸಮಿತಿ ಚೆನ್ನಾರೆಡ್ಡಿ ಸರಕಾರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿತು.

ಮಹಾರಾಷ್ಟ್ರ, ತಮಿಳುನಾಡು: ಜಾತ್ಯಾತೀತತೆ ಮತ್ತು ನ್ಯಾಯಕ್ಕಾಗಿ ಸಾಮಾಜಿಕ

ಜಾತ್ಯಾತೀತತೆ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ನವೆಂಬರ್ 24ರಂದು ಬಿಹಾರದಲ್ಲಿ ಆರಂಭವಾದ ಜನತಾದಳ ಹಾಗೂ ಎಡ ಪಕ್ಷಗಳ ಜಂಟಿ ಪ್ರಕ್ಷೋಭೆಗೆ ದೊರೆತ ಜನರ ಬೃಹತ್ ಸ್ಪಂದನ ಮಹಾರಾಷ್ಟ್ರ, ತಮಿಳುನಾಡಿನಲ್ಲೂ ಅದೇ ಹುರುಪು, ಅದೇ ಪ್ರೋತ್ಸಾಹ ಪಡೆದು ಮುಂದುವರಿದಿದೆ.

ನವೆಂಬರ್ 27 ಹಾಗೂ 28 ಮಹಾರಾಷ್ಟ್ರದಲ್ಲಿ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಮತ್ತಿತರು ಜನತಾದಳ ಮುಖಂಡರು, ಸಿಪಿಐ(ಎಂ), ಸಿಪಿಐ, ಆರ್‌ಪಿಐ, ದಲಿತ ಪ್ಯಾಂಥರ್ ಮುಖಂಡರು ಭಾಗವಹಿಸಿದ್ದ ಸಭೆ ಸಮಾರಂಭಗಳು ನಿರೀಕ್ಷೆ ಮೀರಿ ಜನತೆಯ ಬೆಂಬಲ ಗಳಿಸಿ ಯಶಸ್ವಿಯಾಯಿತು.

1984 ರಲ್ಲಿ ಅತ್ಯಂತ ಭೀಕರ ಕೋಮು ಗಲಭೆ ಕಂಡ ಭೀವಂಡಿಯಲ್ಲಿ ವಿ.ಪಿ. ಸಿಂಗ್‌ರವರಿಗೆ ದೊರೆತ ಸ್ವಾಗತ ಜನ ಎಡ ಪಕ್ಷಗಳ ದೃಢ ಬೆಂಬಲದಿಂದ ರಾಷ್ಟ್ರೀಯ ರಂಗ ಸರಕಾರ ತಳೆದ ಜಾತ್ಯಾತೀತ ನಿಲುವಿನ ಬಗ್ಗೆ ತಮ್ಮ ಸಂಪೂರ್ಣ ಸಮ್ಮತಿ ನೀಡಿದ್ದಾರೆ ಎಂಬುದನ್ನು ಪ್ರತಿಫಲಿಸುವಂತಿತ್ತು. ಮೂರು ಲಕ್ಷ ಜನವಸತಿ ಇರುವ ನೇಕಾರರೇ ಬಹುಮಂದಿ ಇರುವ ಈ ಪಟ್ಟಣದ ಸುಮಾರು ಎಲ್ಲರೂ ವಿ.ಪಿ.ಸಿಂಗ್‌ರನ್ನು ನೋಡಲು, ಜಾತ್ಯಾತೀತ ಮುಖಂಡರ ಮಾತುಗಳನ್ನು ಕೇಳಲು ಸಮಾಧಾನ ಪಡೆಯಲು ಗಂಟೆಗಟ್ಟಲೆ ಕಾದಿದ್ದರು ಎಂದು ಸ್ಥಳೀಯ ಪತ್ರಿಕೆಗಳು ವರದಿ ಮಾಡಿವೆ.

ಮರುದಿನ ಪುಣೆಯಲ್ಲಿ ಇದನ್ನು ಮೀರಿಸಿದ ಬೃಹತ್ ಸಾರ್ವಜನಿಕ ಸಭೆ ಹಾಗೂ ಭೀವಂಡಿಯಿಂದ ಪುಣೆಗೆ ಮುಖಂಡರನ್ನು ಒಯ್ದು 'ಡೆಕ್ಕನ್ ಎಕ್ಸ್‌ಪ್ರೆಸ್'ಗೆ ದಾರಿಯುದ್ದಕ್ಕೂ ಅನಿರೀಕ್ಷಿತ ಸ್ವಾಗತ. ಪುಣೆ ರೈಲ್ವೆ ನಿಲ್ದಾಣವನ್ನು ಅದು ತಲುಪಿದ್ದಂತೆ ಜನರ ಉತ್ಸಾಹ ಮೇರೆ ಮೀರಿತ್ತು.

"ಆರ್‌ಎಸ್‌ಎಸ್ ಕೋಟೆಯನ್ನು ವಿ.ಪಿ.ಸಿಂಗ್ ಭೇದಿಸಿದರು" ಎಂದು ಸಂಡೇ ಅಬ್ಸರ್‌ವರ್ ಪತ್ರಿಕೆಯ ಶಿರೋನಾಮೆ. ಶನಿವಾರವಾಡೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನ ನೆರೆದಿದ್ದರು. ಇದಕ್ಕೆ ಮೊದಲು ಮಹಾನ್ ಸಮಾಜ ಸುಧಾರಕ ಜ್ಯೋತಿಬಾ ಫುಲೆಯವರ ಅನುಯಾಯಿಗಳಾದ ಸತ್ಯಶೋಧಕ ಮಹಿಳಾ ಪರಿಷತ್ ಸಂಘಟಿಸಿದ ಹತ್ತು ಸಾವಿ ಮಹಿಳೆಯರ ಸಭೆಯಲ್ಲಿ ವಿ.ಪಿ.ಸಿಂಗ್ ಮಾತನಾಡಿದರು.

ಇದೇ ದಿನ ಜ್ಯೋತಿಬಾ ಫುಲೆ ಸ್ಮಾರಕ ಶತಾಬ್ದಿ ದಿನಾಚರಣೆಯನ್ನು ಆಚರಿಸಿದ್ದು ಗಮನಾರ್ಹವಾಗಿತ್ತು. ಜನತಾದಳ, ಸಿಪಿಐ(ಎಂ), ಸಿಪಿಐ, ಆರ್‌ಪಿಐ, ಪಿಡಬ್ಲ್ಯುಪಿ ಮತ್ತಿತರರು ಸೇರಿ ರಚಿಸಿಕೊಂಡಿದ್ದ 'ಫುಲೆ ಅಂಬೇಡ್ಕರ್ ವಿಚಾರ ಸಂವರ್ಧನ ಸಮಿತಿ' ಇದನ್ನು ಏರ್ಪಡಿಸಿತ್ತು. ಈ ಸಮಿತಿಯನ್ನು ಎರಡು ವರ್ಷಗಳ ಹಿಂದೆ ಆರ್‌ಎಸ್‌ಎಸ್ ಶಿವಸೇನೆ ಮತ್ತಿತರ ಕೋಮುವಾದಿಗಳು ಅಂಬೇಡ್ಕರ್ ಕೃತಿಯ ವಿರುದ್ಧ ವಿಷಪ್ರಚಾರ ನಡೆಸಿದ್ದಕ್ಕಾಗಿ ಪ್ರತಿರೋಧವಾಗಿ ರಚಿಸಲಾಗಿತ್ತು.

ತಮಿಳುನಾಡಿನಲ್ಲಿ ಚಾರಿತ್ರಿಕ ಯಶಸ್ಸು

ಮದ್ರಾಸ್ ವಿಮಾನ ನಿಲ್ದಾಣದಲ್ಲಿ ಇಳಿದಾಗ ವಿ.ಪಿ.ಸಿಂಗ್‌ರವರಿಗೆ, ಅದರ ಸ್ವಲ್ಪ ಮೊದಲು ಇ.ಎಂ.ಎಸ್.ರವರಿಗೆ ದೊರೆತ ಸ್ವಾಗತ ನಂತರ ಎರಡು ದಿನಗಳ ಕಾರ್ಯಕ್ರಮಗಳ ಯಶಸ್ಸಿನ ದ್ಯೋತಕವೇ ಆಗಿತ್ತು. ವಿಮಾನ ನಿಲ್ದಾಣದಿಂದಲೇ ಜಾತ್ಯಾತೀತತೆ, ಸಾಮಾಜಿಕ ನ್ಯಾಯದ ಘೋಷಣೆಗಳು, ಕೆಂಬಾವುಟಗಳ ಸಾಗರದ ನಡುವೆ ಕೇಳಿಬಂದದ್ದು ನಾಗರಕೋಯಿಲ್‌ನ ಕೊನೆಯ ಸಭೆಯವರೆಗೂ ಅವ್ಯಾಹತವಾಗಿ ಸಾಗಿದ್ದವು.

ಮದ್ರಾಸ್ ನಗರದ ತಾಂಬರಮ್‌ನಲ್ಲಿ ನಡೆದ ಮೊದಲ ಸಭೆ ತಮಿಳುನಾಡಿನ ಜನತೆಯ ಅಪಾರ ಉತ್ಸಾಹವನ್ನು ತೋರ್ಪಡಿಸಿತು. ನಂತರ ಚೆಂಗಲ್ ಪೇಟೆ, ಮಿಲ್ಲುಪುರಂನಲ್ಲಿ ನಡೆದ ಸಭೆಗಳು ಇನ್ನೂ ದೊಡ್ಡದಾಗಿದ್ದವು. ರಾಷ್ಟ್ರೀಯ ರಂಗ ಸರಕಾರದ ರಾಜೀನಾಮೆ ಪ್ರತಿಗಾಮಿಗಳು ಒಂದೆಡೆ, ಸಮಾಜಿಕ ಬದಲಾವಣೆ, ಜಾತ್ಯಾತೀತತೆ ರಕ್ಷಣೆ ಬಯಸುವ ಹೋರಾಟದ ಪರಿಣಾಮ ಎಂದು ಈ ಹೋರಾಟ ಮುಂದುವರಿಯುತ್ತಿದೆ ಎಂದು ವಿ.ಪಿ.ಸಿಂಗ್ ನುಡಿದಾಗ ಜನರ ಕರತಾಡನ ದೇಶದ ವಿವಿಧ ಭಾಗಗಳ ಜನತೆ ಕಾಂಗ್ರೆ, ಬಿಜೆಪಿ ಹಾಗೂ ಚಂದ್ರಶೇಖರ್ ಗುಂಪಿನ ಸಮಯಸಾಧಕತೆಯನ್ನು ಅರಿತುಕೊಳ್ಳಲಾರಂಭಿಸಿದ್ದಾರ ಎಂದು ಸೂಚಿಸುವಂತಿತ್ತು.

ಈ ಸಭೆಯೇ ರಾಷ್ಟ್ರೀಯ ರಂಗ ಹಾಗೂ ಎಡ ಪಕ್ಷಗಳು ತಳೆದ ನಿಲುವು ಸರಿ ಎಂಬುದಕ್ಕೆ ಜನರ ಸಮ್ಮತಿಯ ದ್ಯೋತಕ ಎಂದರು ಇ.ಎಂ.ಎಸ್.

ಮುಖಂಡರೆಲ್ಲಾ ತಿರುಚಿ ತಲುಪಿದಾಗ ಆರು ಗಂಟೆ ವಿಳಂಬವಾಗಿತ್ತು. ಆದರೂ ಲಕ್ಷಾಂತರ ಜನ ತಾಳ್ಮೆಯಿಂದ ಕಾದಿದ್ದರು. ಮದುರೈಗೆ ತಲುಪುವಾಗ ಮುಂಜಾವಿನ 4 ಗಂಟೆ. ಇಡೀ ನಗರವೇ ಹಬ್ಬದ ನಡಗರದಿಂದ ಕೂಡಿತ್ತು. ಬೆಳಗಿನ ಚಳಿಯಲ್ಲೇ ರೇಸ್‌ಕೋರ್ಸ್ ಮೈದಾನ ಲಕ್ಷಾಂತರ ಜನರಿಂದ ತುಂಬಿತ್ತು. ಮುಂಜಾವಿನ 4.30 ಕ್ಕೆ ಈ ಸಭೆ! ಮೂರು ಬಾರಿ ಅಧಿಕಾರ ಬಿಡಬೇಕಾಗಿ ಬಂದರೂ ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳಲಾರೆ ಎಂದು ಘೋಷಿಸಿದರು ವಿ.ಪಿ.ಸಿಂಗ್. ತನ್ನದೇ ಪಕ್ಷದ ಇಬ್ಬರು ಮುಖ್ಯಮಂತ್ರಿಗಳು ತಮ್ಮ ಕುರ್ಚಿ ಉಳಿಸಿಕೊಳ್ಳಲು ಪಕ್ಷಾಂತರ ಮಾಡಿದರೂ ಎಡ ಪಕ್ಷಗಳು ದೃಢವಾಗಿ ತಮ್ಮ ಜತೆ ನಿಂತವು ಎಂದು ಅವರು ಅಭಿನಂದಿಸಿದರು.

ಈ ಬೃಹತ್ ಜನಸಾಗರವನ್ನು ಉದ್ದೇಶಿಸಿ ಮಾತನಾಡುತ್ತಾ ಇ.ಎಂ.ಎಸ್, ಚಂದ್ರಶೇಖರ್-ರಾಜೀವ್ ಗಾಂಧಿ ಕೂಟವನ್ನು ಎಚ್ಚರಿಸಿದರು—ಡಿಎಂಕೆ ಸರಕಾರವನ್ನೇನಾದರೂ ಉರುಳಿಸಲು ಯತ್ನಿಸಿದರೆ ರಾಜ್ಯದ ಜನ ತಕ್ಕ ಉತ್ತರ ನೀಡುತ್ತಾರೆಂದು, ಜಾತಿ, ಧರ್ಮದ ಹೆಸರಿನಲ್ಲಿ ದೇಶ ಒಡೆಯುವ ಶಕ್ತಿಗಳು ಮುಂಚೂಣಿಗೆ ಬಂದಿವೆ, ಎಡ ಪಕ್ಷಗಳು ಹಾಗೂ ರಾಷ್ಟ್ರೀಯ ರಂಗ ಇವನ್ನು ಎದುರಿಸಿ ಸೋಲಿಸಲು ಮುಂದೆ ಬಂದಿವೆ ಎಂದರು.

ಉತ್ತರ ಪ್ರದೇಶ: ಡಿಸೆಂಬರ್ 21 ಪ್ರಚಾರ

ಜಾತ್ಯಾತೀತತೆ ಸಾಮಾಜಿಕ ನ್ಯಾಯಕ್ಕಾಗಿ ಎಡ ಪಕ್ಷಗಳು ಹಾಗೂ ಜನತಾದಳದ ಜಂಟಿ ಹೋರಾಟ ಉತ್ತರ ಪ್ರದೇಶದಲ್ಲಿ ಡಿಸೆಂಬರ್ 18 ರಿಂದ ಆರಂಭವಾಗಿವೆ. ಅಕ್ಟೋಬರ್ 12ರಿಂದ 50 ರ‍್ಯಾಲಿಗಳ ಮೂಲಕ. ಇಡೀ ರಾಜ್ಯದ ಜಾತ್ಯಾತೀತ ಶಕ್ತಿಗಳನ್ನೆಲ್ಲಾ ಒಟ್ಟುಗೂಡಿಸಿದ ನಂತರ ಈಗ ಮತ್ತೆ ಡಿಸೆಂಬರ್ 21 ರಿಂದ ಜನವರಿ 10ರವರೆಗೆ ರಾಜ್ಯಾದ್ಯಂತ ಪ್ರಚಾರ ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸಿದೆ. ಈ ನಡುವೆ ಕೋಮುವಾದ-ವಿರೋಧಿ ಹೋರಾಟಕ್ಕೆ ವಿಶ್ವಾಸಘಾತ ಮಾಡಿದವರನ್ನು ಜನರೆದುರು ಬಯಲಿಗೆಳೆಯುವ ಕೆಲಸವನ್ನು ಕೋಮುವಾದಿ-ವಿರೋಧಿ ಪ್ರಚಾರದೊಂದಿಗೆ ನಡೆಸಲು ನಿರ್ಧರಿಸಲಾಗಿದೆ.

ರಾಜ್ಯದ ಹಲವಾರು ಸಣ್ಣ ಪಟ್ಟಣಗಳು, ಹಳ್ಳಿಗಳಲ್ಲಿ ಎಡ ಪಕ್ಷಗಳು ಮತ್ತು ಜಾತ್ಯಾತೀತ ಶಕ್ತಿಗಳು ಕೋಮುಸೌಹಾರ್ದ ಕಾಪಾಡಲು ಪ್ರಶಂಸಾರ್ಹ ಕೆಲಸ ಮಾಡಿವೆ. ಆದರೆ ಅತ್ತ ಬಿಜೆಪಿ, ಆರ್‌ಎಸ್‌ಎಸ್, ಭಜರಂಗ ದಳ ವಾತಾವರಣದಲ್ಲಿ ವಿಷ ಹರಡಲು ಕೂಡಾ ಸತತ ಪ್ರಯತ್ನ ನಡೆಸುತ್ತಿವೆ. ಇದರ ಪರಿಣಾಮವಾಗಿ ಅಲ್ಲಲ್ಲಿ ಗಲಭೆಗಳು ನಡೆಯುತ್ತಲೇ ಇವೆ. ಇಂತಹ ವಿಶೇಷವಾಗಿ ಅಲ್ಪಸಂಖ್ಯಾತರು ಸಾಕಷ್ಟು ಸಂಖ್ಯೆಯಲ್ಲಿರುವ ಸ್ಥಳಗಳಲ್ಲಿ, ಇಂತಹ ಜಾಗಗಳಲ್ಲಿ ಪಕ್ಷ ಸಾಮೂಹಿಕ ಸಂಘಟನೆಗಳು ಇತರ ಜಾತ್ಯಾತೀತ ಶಕ್ತಿಗಳ ಜೊತೆಗೂಡಿ ಮಧ್ಯ ಪ್ರವೇಶಿಸಬೇಕೆಂದು ಸಿಪಿಐ(ಎಂ) ಉತ್ತರ ಪ್ರದೇಶ ರಾಜ್ಯ ಸಮಿತಿ ಕರೆ ನೀಡಿದೆ.



ವಿ.ಪಿ. ಯವರು ಕೆಳಗಿಳಿದಿದ್ದಾರೆ. ಆದ್ದರಿಂದ ಈ ಸಲ ಅಯೋಧ್ಯೆಯಲ್ಲಿ ಕೋಟಿ ತ್ರಿಶೂಲಗಳನ್ನು ಬದಿಗಿಟ್ಟು ಬರೀ ಸತ್ಯಾಗ್ರಹ ಮಾಡಲು ಕರೆಕೊಟ್ಟಿದ್ದೇನೆ... ಅಷ್ಟೆ.

ಗಾಂಧೀಜಿಯ ಹೆಸರಿನಲ್ಲಿ ಫೋರ್ಜರಿ !

ಡಿಸೆಂಬರ್ 3 ರ ಟೈಮ್ಸ್ ಆಫ್ ಇಂಡಿಯಾ ಒಂದು ಸುದ್ದಿಯನ್ನು ಪ್ರಕಟಿಸಿತ್ತು. ಬಿ.ಜೆ.ಪಿ. ಪ್ರಧಾನ ಕಾರ್ಯದರ್ಶಿ ಕೆ.ಎಲ್.-ಶರ್ಮಾ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದು "ಗಾಂಧೀಜಿ ಸೂತ್ರ" ಬಳಸಿ ಅಯೋಧ್ಯೆ ವಿವಾದವನ್ನು ಬಗೆಹರಿಸಿ ಎಂದು ಸೂಚಿಸಿ-ದ್ದಾರೆ-ಎಂದು.

ಏನದು 'ಗಾಂಧೀಜಿ ಸೂತ್ರ'? ಗಾಂಧೀಜಿ 1937 ರಲ್ಲಿ ಬರೆದಿದ್ದರೆನ್ನಲಾದ ಒಂದು ಲೇಖ-ನದ ಎರಡು ಪರಿಚ್ಛೇದಗಳನ್ನು ಕೆ.ಎಲ್.ಶರ್ಮ ತಮ್ಮ ಪತ್ರದಲ್ಲಿ ಉದ್ಧರಿಸಿದ್ದರಂತೆ.

"ಮೊಗಲ್ ಕಾಲದಲ್ಲಿ ಹಿಂದೂಗಳ ಹಲವಾರು ಪವಿತ್ರ ಪೂಜಾಸ್ಥಳಗಳನ್ನು ಕಸಿದುಕೊಂಡು ಲೂಟಿಮಾ-ಡಲಾಗಿದೆ, ನಾಶಮಾಡಲಾಗಿದೆ. ಹಲವನ್ನು ಮಸೀದಿಗಳಾಗಿ ಪರಿವರ್ತಿಸಲಾಗಿದೆ. ಮಂದಿರ, ಮಸೀದಿ ಎರಡೂ ಆರಾಧನಾ ಸ್ಥಳಗಳಾ-ದರೂ ಧಾರ್ಮಿಕ ದೃಷ್ಟಿಯಿಂದ, ಒಬ್ಬ ಮುಸ-ಲ್ಮಾನ ತಾನು ದೀರ್ಘಕಾಲದಿಂದ ಪ್ರಾರ್ಥನೆ ನಡೆಸುವ ಜಾಗದಲ್ಲಿ ಒಬ್ಬ ಹಿಂದೂ ಮೂರ್ತಿ ಇಡುವುದನ್ನು ಸಹಿಸುವುದಿಲ್ಲ. ಅದೇರೀತಿ ತಾನು ರಾಮ, ಕೃಷ್ಣ, ಶಂಕರ, ವಿಷ್ಣು, ಒಬ್ಬ ಹಿಂದೂ ದೇವಿಯನ್ನು ದೇವರನ್ನು ಪೂಜಿಸುತ್ತಾ ಬಂದಿದ್ದ ಮಂದಿರವನ್ನು ಮಸೀದಿಯಾಗಿ ಬದಲಿ-ಸುವುದನ್ನು ಸಹಿಸಲು ಸಾಧ್ಯವಿಲ್ಲ—ಹಿಂದೂಗಳ ಹತೋಟಿಯಲ್ಲಿರುವ ಮುಸ್ಲಿಮರ ಪೂಜಾಸ್ಥಳಗ-ಳನ್ನು ಅವರಿಗೆ ಹಿಂದಿರುಗಿಸಬೇಕು. ಅದೇ ರೀತಿ ಮುಸ್ಲಿಮರು ಕಸಿದುಕೊಂಡ ಹಿಂದೂ ಧಾರ್ಮಿಕ ಸ್ಥಳಗಳನ್ನು ಹಿಂದೂಗಳಿಗೆ ಹಿಂದಿರುಗಿಸಬೇಕು-."

ಹೀಗೆಂದು ಗಾಂಧೀಜಿ ಜುಲೈ 27, 1937 ರ 'ಹರಿಜನ ಸೇವಕ'ದಲ್ಲಿ ಬರೆದಿದ್ದರು. ತಾನೇ ಅದನ್ನು ನೋಡಿರುವುದಾಗಿ ಶರ್ಮಾ ತನ್ನ ಪತ್ರದಲ್ಲಿ ಹೇಳಿದ್ದರು. ಆದರೆ ಮರು-ದಿನ ಟೈಮ್ಸ್ ಇಂಡಿಯಾ ರಿಸರ್ಚ್ ಬ್ಯೂರೋ ಗಾಂಧೀಜಿ ಎಂದೂ ಇಂತಹ ಲೇಖನ ಬರೆದಿಲ್ಲ ಎಂದಾಗ ತಾನು ಸ್ಥಳೀಯ ಪತ್ರಿಕೆ "ವಿಶ್ವಾಸ್" ಅದನ್ನು ಮರುಮುದ್ರಿಸಿದುದನ್ನು ಓದಿದುದಾಗಿ ಮಾತು ಬದಲಿಸಿದರು. ಇನ್ನಷ್ಟು ಅವರನ್ನು ಈ ಬಗ್ಗೆ ಕೇಳಿದಾಗ ಅವರ ರಾಗವೇ ಬದಲಾಯಿತು–ಗಾಂಧೀಜಿ ಹಾಗೆ ಹೇಳಿದ್ದರೋ ಇಲ್ಲವೋ ಎಂದು ಪರಿಶೀಲಿಸುವುದು ಪ್ರಧಾನ-ಮಂತ್ರಿಗಳ ಹೊಣೆ ಎಂದು ಹೇಳಿ ತಪ್ಪಿಸಿಕೊ-ಳ್ಳಲು ಪ್ರಯತ್ನಿಸಿದರು.

ತಮಾಷೆಯ ಸಂಗತಿಯೆಂದರೆ ಈ ತರದ ವಂಚನೆಯಲ್ಲಿ ಕೂಡ ಬಿ.ಜೆ.ಪಿ. ಮುಖಂಡರ ಸ್ವಂತಿಕೆ ಇಲ್ಲ!

ನಲ್ವತ್ತು ವರ್ಷಗಳ ಹಿಂದೆ, ಈ ವಿವಾದ ಎದ್ದಾಗ ಅಯೋಧ್ಯೆಯ ರಾಮ್‌ಗೋಪಾಲ್ ಪಾಂಡೆ 'ಶರದ್' ಎಂಬಾತ ಹೀಗೇ ಹೇಳಿಕೊಂ-ಡಿದ್ದ. ಆಗ ಗಾಂಧೀಜಿಯ ಕೃತಿಗಳ ಪ್ರಕಾ-ಶಕರಾದ 'ನವ ಜೀವನ ಟ್ರಸ್ಟ್'ನ ಜೀವನ್‌ಜೀ ದೇಸಾಯಿ ಜುಲೈ 13, 1950 ರ 'ಹರಿ-ಜನ ಸೇವಕ'ದಲ್ಲಿ "ಸುಳ್ಳು ಸೃಷ್ಟಿಯಾದ ಪತ್ರ ಹಾಗೂ ಲೇಖನ" ಎಂಬ ಲೇಖನ ಬರೆದು ಪಾಂಡೆಯ ಮೋಸವನ್ನು ಬಯಲಿಗೆಳೆದಿದ್ದರು. ಬಿ.ಜೆ.ಪಿ. ಮುಖಂಡ ಶರ್ಮಾ ಅದೇ ಸುಳ್ಳು 'ಲೇಖನ'ವನ್ನು ಈಗ ಉದ್ಧರಿಸಿದ್ದಾರೆ. ಆದರೆ ಶರ್ಮಾ ಈ ಮೋಸದಲ್ಲೂ ಹೆಚ್ಚು 'ಬುದ್ಧಿ-ವಂತಿಕೆ' ತೋರಲು ಪ್ರಯತ್ನಿಸಿದ್ದಾರೆ. ಪಾಂಡೆ 1950 ರಲ್ಲಿ ಬರೆದಾಗ ಈ ಲೇಖನ ಜುಲೈ 27, 1937 ರಲ್ಲಿ 'ನವ ಜೀವನ್' ಪತ್ರಿಕೆಯಲ್ಲಿ ಪ್ರಕ-ಟವಾಗಿತ್ತು ಎಂದು ಹೇಳಿಕೊಂಡಿದ್ದರು. ಆದರೆ ಈ ಪತ್ರಿಕೆಯ ಪ್ರಕಟಣೆ 1932 ರಲ್ಲೇ ನಿಂತು ಹೋಗಿತ್ತು. ಬಿ.ಜೆ.ಪಿ. ಮುಖಂಡರು ಈಗ ಹೇಳಿರುವ 'ಹರಿಜನ ಸೇವಕ್' 1937 ರಲ್ಲಿ ಇನ್ನೂ ಪ್ರಕಟವಾಗುತ್ತಿತ್ತು. ಆದರೆ ಜುಲೈ 27, 1937 ರ ದಿನಾಂಕದ ಸಂಚಿಕೆಯೇ ಇಲ್ಲ. ಈ ದಿನಕ್ಕೆ ಹತ್ತಿರದ ಸಂಚಿಕೆಯೆಂದರೆ ಜುಲೈ 24 ಅಥವಾ ಜುಲೈ 31. ಅಂದರೆ ಶರ್ಮಾರ ಈ 'ಬುದ್ಧಿವಂತಿಕೆ'ಯೂ ಅವರ ಮೋಸವನ್ನು ಮುಚ್ಚಿಡುವಲ್ಲಿ ವಿಫಲವಾಯಿತು.

ಮೇಲೆ ಹೇಳಿದ ರಾಮ್ ಗೋಪಾಲ್ ಪಾಂಡೆ ಬರೆದ 'ಶ್ರೀರಾಮ ಜನ್ಮ ಭೂಮಿ ವಿರೋಧಿಗಳ ಕರಾಳ ಕೃತ್ಯಗಳು' ಎಂಬ ಪುಸ್ತಕದಲ್ಲಿ ತಾನು ಗಾಂಧೀಜಿಗೆ ಒಂದು ಪತ್ರ ಬರೆದುದಾಗಿಯೂ ಅದಕ್ಕೆ ಉತ್ತರ-ವಾಗಿ ಗಾಂಧೀಜಿಯ ಕಾರ್ಯದರ್ಶಿ ಮಹ-ದೇವ ದೇಸಾಯಿಯವರು ವರ್ಧಾದಿಂದ ಉತ್ತರ ಬರೆದು ಗಾಂಧೀಜಿ ಈ ಬಗ್ಗೆ ತನ್ನ ಅಭಿಪ್ರಾಯವನ್ನು 'ನವಜೀವನ'ದಲ್ಲಿ ಪ್ರಕಟ-ಸುತ್ತಾರೆ ಎಂದು ತಿಳಿಸಿದುದಾಗಿಯೂ ಹಾಗೂ 27.7.37 ರ 'ನವಜೀವನ'ದಲ್ಲಿ ಬಾಪೂರವರ ಲೇಖನ ಪ್ರಕಟವಾಯಿತು ಎಂದೂ ಬರೆದಿದ್ದ. ಗಾಂಧೀಜಿ ಬರೆದರೆನ್ನಲಾದ 'ಲೇಖನ'ವನ್ನು ಆ ತನ್ನ ಪುಸ್ತಕದಲ್ಲಿ 'ಪ್ರಕಟಿಸಿ'ದ್ದ.

'ನವಜೀವನ'ಪತ್ರಿಕೆಯೇ ಪ್ರಕಟವಾಗು-ತ್ತಿರಲಿಲ್ಲ, ಗಾಂಧೀಜಿ ಅಥವಾ ಮಹದೇವ ದೇಸಾಯಿ ಆ ದಿನಗಳಲ್ಲಿ ವರ್ಧಾದಲ್ಲಿ ಇರಲೇ ಇಲ್ಲ, ಹಾಗೂ ಗಾಂಧೀಜಿ ಎಂದೂ ಪಾಂಡೆ ಪ್ರಕಟಿಸಿದಂತೆ 'ಎಂ.ಕೆ.ಗಾಂಧಿ' ಎಂದು ಹಿಂದಿ-ಯಲ್ಲಿ ಸಹಿ ಹಾಕುತ್ತಿರಲಿಲ್ಲ, ಅಲ್ಲದೆ ಲೇಖ-ನದ ಶೈಲಿಯೂ ಗಾಂಧೀಜಿಯದಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತದೆ ಎಂದು ಜೀವನ್‌ಜಿ ದೇಸಾಯಿ ಈ 'ಲೇಖನ'ದ ಮೋಸವನ್ನು ಬಯ-ಲಿಗೆಳೆಯುತ್ತಾ ಹೇಳಿದ್ದರು.

ನಲ್ವತ್ತು ವರ್ಷಗಳ ನಂತರ ಜನ ಇವ-ನ್ನೆಲ್ಲಾ ಮರೆತು ಬಿಟ್ಟಿರುತ್ತಾರೆ ಎಂದು ಭಾವಿ-ಸಿದ ಬಿ.ಜೆ.ಪಿ. ಮುಖಂಡರು 'ಗಾಂಧೀಜಿ'ಯ ಹೆಸರಿನಲ್ಲಿ ಫೋರ್ಜರಿ ನಡೆಸಲೂ ಹೇಸುತ್ತಿಲ್ಲ.

ದೇಶಾದ್ಯಂತ 30 ಸಾವಿರ ಮಸೀದಿಗಳನ್ನು ಕೆಡಹುವ ಬಿ.ಜೆ.ಪಿ.-ವಿ.ಹೆಚ್.ಪಿ. ಧೋರಣೆಗೆ ಜನರ ಒಪ್ಪಿಗೆ ಪಡೆಯಲು ಗಾಂಧೀಜಿಯ ಹೆಸರಿನಲ್ಲಿ ಫೋರ್ಜರಿ ಮಾಡಲೂ ಹೇಸಲಿಲ್ಲ. ಗಮನಿಸಬೇಕಾದ ಸಂಗ-ತಿಯೆಂದರೆ ಕೋಮುವಾದಿಗಳು ಇದೇ ಪ್ರಯತ್ನವನ್ನು ಸರಿಯಾಗಿ ನಲ್ವತ್ತು ವರ್ಷಗಳ ಹಿಂದೆ ನಡೆಸಿ ವಿಫಲರಾಗಿದ್ದರು.

'ರಾಮಜನ್ಮ ಭೂಮಿ'ಯ ವಿವಾದದಲ್ಲಿ
ಗೋಬೆಲ್ಸ್ ಅಪಪ್ರಚಾರದಲ್ಲಿ ತೊಡಗಿರುವ
ಕೋಮುವಾದಿಗಳು
ಇತ್ತೀಚೆಗೆ ಇನ್ನೆರಡು ತಂತ್ರ ಬಳಸಿದರು.
ಒಂದು–"ಗಾಂಧೀಜಿ ಸೂತ್ರ".
ಇನ್ನೊಂದು–ಪುರಾತತ್ವ ಶಾಸ್ತ್ರದ "ಪುರಾವೆ".
ಇವೆರಡೂ ತಂತ್ರಗಳು
ಅವರಿಗೇ ಈಗ ತಿರುಗುಬಾಣವಾಗಿದೆ.
ಅವರ "ಹಿಂದೂ ರಾಷ್ಟ್ರ" ಸಾಕಾರಗೊಂಡರೆ
ಎಂತಹ ವಂಚನೆ,
ಮೋಸದ ಮೇಲೆ
ಅದು ನಿಲ್ಲಲಿದೆ ಎಂದೂ
ಇನ್ನೂ ಅವರ ಬಗ್ಗೆ ಸಹಾನುಭೂತಿ ಇರುವ ಜನರಿಗೆ
ಸ್ಪಷ್ಟಗೊಳಿಸಿದೆ.

ಪುರಾತತ್ವ ಶಾಸ್ತ್ರದ ಸೋಗಿನಲ್ಲಿ ಮತ್ತೊಂದು ವಂಚನೆ?

ಗಾಂಧೀಜಿ ಲೇಖನದ ಫೋರ್ಜರಿಯ ಪ್ರಯತ್ನದ ಸುದ್ದಿಯ ನಂತರ ಡಾ:ಎಸ್.ಪಿ. ಗುಪ್ತ ಎಂಬ ಪುರಾತತ್ವ ಶಾಸ್ತ್ರಜ್ಞರು ವಿ.ಹೆಚ್.ಪಿ.ಯ ವಾದವನ್ನು ಪುಷ್ಟೀಕರಿಸುವ 'ಪುರಾವೆ'ಯನ್ನು ಹದಿನೈದು ವರ್ಷಗಳ ಹಿಂದೆ ಕಂಡುಹಿಡಿದಿದ್ದರು ಎಂಬ ಸುದ್ದಿ ಪ್ರಕಟವಾ-ಯಿತು.

ಈಗ ಬಾಬ್ರಿ ಮಸೀದಿ ಇರುವ ಸ್ಥಳ-ದಿಂದ ಒಂದು ಕಿ.ಮೀ.ದೂರದ ಸ್ಮಶಾನವೊಂ-ದರಲ್ಲಿ ಎರಡು ಸ್ತಂಭಗಳು ದೊರೆತವು. ಕಪ್ಪು ಬಸಾಲ್ಟ್ ಕಲ್ಲಿನ ಈ ಕಂಬಗಳು ರಚನೆಯಲ್ಲಿ ಬಾಬ್ರಿ ಮಸೀದಿಯೊಳಗಿರುವ 14 ಕಂಬಗ-ಳನ್ನು ಹೋಲುತ್ತವೆ. ಈ ಎರಡು ಕಂಬಗ-ಳಲ್ಲಿ ಯಕ್ಷರು, ದೇವಕನ್ಯೆಯರು, ಪೂರ್ಣಕಲ-ಶಗಳ ಕೆತ್ತನೆಗಳಿವೆ. ಅಲ್ಲದೆ ರಾಮಜನ್ಮ ಭೂಮಿ ಪ್ರದೇಶದಲ್ಲಿ ಭೂಖನನ ನಡೆಸಿ-ದಾಗ ಎರಡು ಸಾಲುಗಳಲ್ಲಿ ಕಂಬಗಳ ಅಡಿ-ಪಾಯ ಕಂಡು ಬಂದಿದೆ. 1975 ರಿಂದ 1980 ರಲ್ಲಿ ನಡೆಸಿದ ಭೂಖನನ ಸಮ-ಯದಲ್ಲಿ ಇದು ಬೆಳಕಿಗೆ ಬಂತು. ಇದ-ಲ್ಲದೆ ಬಾಬ್ರಿ ಮಸೀದಿಯಲ್ಲಿ ಅದನ್ನು 1528 ರಲ್ಲಿ ಬಾಬರನ ಆಣತಿಯಂತೆ ಕಟ್ಟಲಾಯಿತು ಎಂಬ ಪರ್ಶಿಯನ್ ಶಿಲಾಲೇಖವೂ ಇದೆ. ಈ ಎಲ್ಲದರ ಮೂಲಕ ಡಾ:ಎಸ್.ಪಿ.ಗುಪ್ತಾರ ತೀರ್ಮಾನವೆಂದರೆ ಹನ್ನೊಂದನೇ ಶತಮಾನ-ದಿಂದ ಆ ಸ್ಥಳದಲ್ಲಿ ರಾಮ ದೇವಸ್ಥಾನವಿತ್ತು. ಬಾಬರ್ ಅದನ್ನು ಕೆಡವಿ ಅದರದೇ ಕಂಬ-ಗಳಿಂದ ಬಾಬ್ರಿ ಮಸೀದಿ ಕಟ್ಟಿಸಿದ!

ಡಾ:ಎಸ್.ಪಿ.ಗುಪ್ತಾರವರ ಈ ಹೇಳಿಕೆ ಸರಿಯೇ? ಪ್ರಸಿದ್ಧ ಪುರಾತತ್ವ ಶಾಸ್ತ್ರಜ್ಞರು ಹಾಗೂ ಇತಿಹಾಸಕಾರರು ಇದು ಆಧಾರಹೀನ ತೀರ್ಮಾನವೆಂದು ಪ್ರತಿಕ್ರಿಯಿಸಿದ್ದಾರೆ.

ಏಕೆ? 1975 ರಿಂದ 1980 ರವರೆಗೆ ಭಾರತ ಪುರಾತತ್ವ ಸರ್ವೇಕ್ಷಣೆಯ ವರದಿ 'ಇಂಡಿಯನ್ ಆರ್ಕಿಯಾಲಜಿ' ಎಂಬ ಪತ್ರಿ-ಕೆಯಲ್ಲಿ ಪ್ರಕಟವಾಗಿದೆ. ಅದರ ಪ್ರಕಾರ ಡಾ: ಗುಪ್ತಾ ಹೇಳಿದ ಸ್ತಂಭಗಳ ಅಡಿಗಲ್ಲುಗಳ ಪ್ರಸ್ತಾಪವೇ ಇಲ್ಲ. ಹನ್ನೊಂದನೇ ಶತಮಾ-ನದಿಂದ ಬಹಳ ಸಮಯದವರೆಗೆ ವಿಶೇಷ ಆಸಕ್ತಿ ಹುಟ್ಟಿಸುವ ಯಾವುದೇ ವಿಷಯ ಈ ಭೂಖನನಗಳಿಂದ ತಿಳಿದು ಬಂದಿಲ್ಲ. ಈ ಎಲ್ಲಾ ಅವಧಿಯಲ್ಲಿ ಶುಂಗ, ಕುಷಾಣ, ಗುಪ್ತರ ರಾಜ್ಯಭಾರದಲ್ಲಿ ಇಲ್ಲಿ ಯಾವುದೇ ದೇವಸ್ಥಾ-ನದ ಪ್ರಸ್ತಾಪ ಪುರಾತತ್ವ ಶಾಸ್ತ್ರ ದಾಖಲೆ-ಗಳಲ್ಲಿಲ್ಲ.

ಅಯೋಧ್ಯೆಯ ಭೂಖ-ನನವನ್ನು 1969-70 ರಲ್ಲಿ ಪ್ರೊ: ಎ.ಕೆ.-ನಾರಾಯಣ್ ನೇತೃತ್ವದಲ್ಲಿ ಹಾಗೂ 1975-80 ರಲ್ಲಿ ಪ್ರೊ: ಬಿ.ಬಿ.ಲಾಲ್‌ರವರ ನೇತೃತ್ವ-ದಲ್ಲಿ ನಡೆಸಲಾಗಿತ್ತು. ಈ ಎರಡೂ ತಂಡಗ-ಳಲ್ಲಿ ಡಾ:ಎಸ್.ಪಿ.ಗುಪ್ತಾ ಇರಲಿಲ್ಲ. ಅವರು ಸ್ವಂತವಾಗಿ ಈ ಬಗ್ಗೆ ಸಂಶೋಧನೆ ನಡೆ-ಸಿದ್ದರೆ ಅದಕ್ಕೆ ದಾಖಲೆಗಳಿಲ್ಲ. ಆದ್ದರಿಂದ ಅವರ ಈಗಿನ 'ಪುರಾವೆ' ಕೇವಲ ಸುಳ್ಳು ಸೃಷ್ಟಿ ಹಾಗೂ ನಿರಾಧಾರ ಎಂದು ಖ್ಯಾತ ಇತಿ-ಹಾಸಕಾರ ಪ್ರೊ.ಆರ್.ಎಸ್.ಶರ್ಮಾ ಹೇಳಿ-ದ್ದಾರೆ. ಈ ಸಂಶೋಧನೆ ಹದಿನೈದು ವರ್ಷಗಳ ನಂತರ ಈಗಲೇ ಡಾ:ಗುಪ್ತಾರ-ವರಿಗೆ ಏಕೆ ನೆನಪಾಯಿತೆಂದು ವ್ಯಂಗವಾಗಿ ಪ್ರಶ್ನಿಸಿದ್ದಾರೆ.

ವಾಸ್ತವವಾಗಿ 'ರಾಮ ಜನ್ಮ ಭೂಮಿ' ಎನ್ನುವ ಜಾಗ ಬೌದ್ಧ ಕ್ಷೇತ್ರವಾಗಿರಬ-ಹುದು ಎಂದು ಸಂಶಯಪಡಲು ಆಧಾರಗಳಿ-ವೆಎಂದು ಪ್ರೊ:ಶರ್ಮಾ ಅಭಿಪ್ರಾಯಪಡುತ್ತಾ ಭೂಖನನದಿಂದ ಕಂಡು ಬಂದ ಅವಶೇಷ-ಗಳು ಬ್ರಾಹ್ಮಣರು ಹಾಳುಗೆಡವಿದ ಬೌದ್ಧ ಮಠಗಳ ಅವಶೇಷಗಳಾಗಿರಬಹುದು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಹನ್ನೊಂದನೇ ಶತಮಾನದಿಂದ ಇದ್ದ ರಾಮದೇವಸ್ಥಾನ ಕೆಡವಿ ಬಾಬರ್ ಮಸೀದಿ ಕಟ್ಟಿಸಿದ ಎನ್ನುವುದಕ್ಕೆ ಡಾ:ಎಸ್.ಪಿ.ಗುಪ್ತಾ ನೀಡುವ 'ಪುರಾವೆ' ಆಧಾರಹೀನ ಬದಲಾಗಿ ಅವರ 'ಪುರಾವೆ' 'ರಾಮಜನ್ಮ ಭೂಮಿ' ಒಂದು ಬೌದ್ಧ ಕ್ಷೇತ್ರವಾಗಿದ್ದು, ಅದನ್ನು ಬ್ರಾಹ್ಮಣ ಧರ್ಮದ ಪ್ರಭಾವ ಹರಡಿದಾಗ ಕೆಡವಿರಬಹುದು ಎಂಬ ಸಂಶಯ ಮೂಡಿಸುತ್ತದೆ!

ಪುಣೆಯ ಡೆಕ್ಕನ್ ಕಾಲೇ-ಜಿನ ನಿರ್ದೇಶಕ ಹಾಗೂ ಇನ್ನೊಬ್ಬ ಪ್ರತಿಷ್ಠಿತ ಇತಿಹಾಸಕಾರ ಪ್ರೊ:ಎ.ಎನ್.ಮಿಶ್ರಾ ಕೂಡಾ ಡಾ:ಗುಪ್ತಾ ನೀಡಿರುವ ಪುರಾವೆಗಳು ನಂಬ-ಲರ್ಹವಲ್ಲ, ಅಪೂರ್ಣ ಎಂದಿದ್ದಾರೆ. ಉತ್ತ-ರಪ್ರದೇಶದಲ್ಲಿ ಎಲ್ಲಿಯೂ ರಾಮ ದೇವ-ಸ್ಥಾನ ಇದ್ದ ಬಗ್ಗೆ ಪುರಾತತ್ವ ದಾಖಲೆಗಳಿಲ್ಲ ಎಂದೂ ಅವರು ಹೇಳಿದ್ದಾರೆ. ವಾಸ್ತವವಾಗಿ ಇಡೀ ಉತ್ತರ ಭಾರತದಲ್ಲಿ ರಾಮದೇವಸ್ಥಾ-ನದ ಪ್ರಸ್ತಾಪ 16ನೇ ಶತಮಾನದ ನಂತ-ರವೇ ಕಾಣುತ್ತದೆ.

ಡಾ:ಗುಪ್ತ ಹೇಳಿರುವ ಸ್ತಂಭಗಳ ಅಡಿ-ಪಾಯಗಳ ಎರಡು ಸಾಲುಗಳು ಯಾವುದೇ ದೇವಸ್ಥಾನದ ಶಿಲ್ಪ ಯೋಜನೆಯ ಅನುಗು-ಣವಾಗಿಲ್ಲ, ಅದು ಹೊರಾಂಗಣದ ಅಥವಾ ಒಂದು ಶೆಡ್ಡಿನ ಅಡಿಪಾಯವಾಗಿರಬಹುದು ಎಂದೂ ಇತಿಹಾಸಕಾರರು ಹಾಗೂ ಪುರಾ-ತತ್ವ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಡಾ:ಗುಪ್ತಾ, ಸ್ತಂಭಗಳ ಅಡಿಪಾಯದ ಜೊತೆ ಬಿಳಿ, ನೀಲಿ ಹೂವಿನ ಚಿತ್ತಾ-ರದ ಮಧ್ಯಕಾಲೀನ ಇಸ್ಲಾಮಿಕ್ ಬೋಗುಣಿ-ಲ್ಲಿನ ತುಣುಕುಗಳು ದೊರೆಯಿತು ಎಂದಿದ್ದಾರೆ. ಇಂತಹ ತುಣುಕುಗಳು ಮಥುರಾದಲ್ಲಿ ಕಂಡು ಬಂದಿದ್ದು 15 ನೇ ಶತಮಾನದ ನಂತ-ರವೇ. ಆದ್ದರಿಂದ ಇವು 11 ಶತಮಾನದಲ್ಲಿ ಕಟ್ಟಲಾಯಿತು ಎನ್ನುವ ದೇವಸ್ಥಾನದ ಕಂಬ-ಗಳ ಅಡಿಪಾಯದಲ್ಲಿ ದೊರೆಯಲು ಸಾಧ್ಯ-ವಿಲ್ಲ ಎಂದು ಇನ್ನೊಬ್ಬ ಇತಿಹಾಸಕಾರರಾದ ಡಾ:ರೋಮಿಲಾ ಥಾಪರ್ ಹೇಳಿದ್ದಾರೆ.

ಇತಿಹಾಸಕಾರರು ಹಾಗೂ ಪುರಾ-ತತ್ವ ಶಾಸ್ತ್ರಜ್ಞರು ಗಮನಿಸಿರುವ ಇನ್ನೊಂದು ಸಂಗತಿಯೆಂದರೆ ಡಾ:ಗುಪ್ತಾ ತನಗೆ ದೊರೆತ ಎರಡು ಕಂಬಗಳ ಬಗ್ಗೆ ವರ್ಣಿಸಿದುದನ್ನು ಕಂಡರೆ ಅಲ್ಲಿ ದೇವಸ್ಥಾನವಿದ್ದಿದ್ದರೆ ಅದು ರಾಮನ ದೇವಸ್ಥಾನವೇಕೆ, ವೈಷ್ಣವ ದೇವಸ್ಥಾ-ನವೂ ಆಗಲಿಕ್ಕಿಲ್ಲ, ಏಕೆಂದರೆ ವೈಷ್ಣವ ದೇವ-ಸ್ಥಾನಗಳಲ್ಲಿ ಶಿವನ ಗಣಗಳ ಕೆತ್ತನೆಗಳಿರುವು-ದಿಲ್ಲ.

ಮತ್ತೊಂದು ಕುತೂಹಲಕರ ಸಂಗತಿ-ಯೆಂದರೆ ಡಾ:ಗುಪ್ತಾರ ತೀರ್ಮಾನಕ್ಕೆ ಆಧಾರ-ವಾದ ಭೂಖನನಗಳ ಪ್ರಕಾರ ಅಯೋಧ್ಯೆ-ಯಲ್ಲಿ ಮಾನವ ವಾಸ್ತವ್ಯ ಆರಂಭವಾದದ್ದು ಕ್ರಿ.ಪೂ.7 ಶತಮಾನದ ನಂತರವೇ. ಅಂದರೆ ಶ್ರೀರಾಮ ಇದೇ ಅಯೋಧ್ಯೆಯಲ್ಲಿ ಹುಟ್ಟಿ-ದ್ದರೆ ಅದು ಈ ಕಾಲದ ನಂತರವೇ. ಅಂದರೆ ಮಹಾಭರತ ಕಾಲದ ನಂತರವೇ ಎಂದಾಗು-ತ್ತದೆ. ಹಿಂದೂ ಪುರಾಣಗಳ ಪ್ರಕಾರ ಇದೂ ತಪ್ಪಾಗುತ್ತದೆ.

ಪ್ರೊ: ಎ.ಎನ್.ಮಿಶ್ರಾ ಎಂದಂತೆ ರಾಮಜನ್ಮ ಭೂಮಿ ಪ್ರಶ್ನೆ ಧಾರ್ಮಿಕ ನಂಬಿ-ಕೆಯ ಪ್ರಶ್ನೆಯೇ ಹೊರತು ಚಾರಿತ್ರಿಕ ಪುರಾ-ತತ್ವ ದಾಖಲೆಗಳ ವಿಷಯವಲ್ಲ.

ಆದ್ದರಿಂದ 11ನೇ ಶತಮಾನದಿಂದ ಇದ್ದ ರಾಮದೇವಸ್ಥಾನ ಕೆಡವಿ 1528 ರಲ್ಲಿ ಬಾಬರನ ಆದೇಶದ ಮೇರೆಗೆ ಈ ಮಸೀದಿ ಕಟ್ಟಲಾಯಿತು ಎಂಬ 'ಪುರಾವೆ' ಗಾಂಧೀ-ಜಿಯ 'ಲೇಖನ'ದಂತೆಯೇ ಕೋಮುವಾದಿಗಳ ಸುಳ್ಳು ಸೃಷ್ಟಿ ಎಂಬುದು ಸ್ಪಷ್ಟ.

ಭಯೋತ್ಪಾದಕರಿಗೆ ಸರಕಾರ ಮಣಿಯಿತೇ?

ಒಂದು ಕಡೆ ಕೋಮುವಾದಿಗಳು.. ಧಾರ್ಮಿಕ ಮೂಲಭೂತವಾದಿಗಳ ಅಟ್ಟಹಾಸ. ಇನ್ನೊಂದೆಡೆ ಭಯೋತ್ಪಾದಕರ ರುದ್ರ ನರ್ತನ. ಜನರ ನೈಜ ಸಮಸ್ಯೆಗಳಿಂದ ಬೇರೆಡೆ ಗಮನ ಹರಿಯುವಂತೆ ಮಾಡುತ್ತಿರುವ ಎರಡು ಪ್ರಮುಖ ವಿಚಾರಗಳಿವು.

ಪಂಜಾಬ್‌ನಲ್ಲಿ ಸಿಖ್ ಭಯೋತ್ಪಾದಕರು ಮುಗ್ಧ ಜನರನ್ನು ಅಧಿಕಾರಿಗಳನ್ನು ಕೊಲ್ಲುತ್ತಿರುವ ಸುದ್ದಿ ಮಾಧ್ಯಮಗಳಿಗೆ ಬೆದರಿಕೆ ಒಡ್ಡುತ್ತಿರುವ ಕಳವಳಕಾರಿ ಬೆಳವಣಿಗೆಗಳನ್ನು ಕಂಡಿದ್ದೇವೆ. ವಿದೇಶಿ ನೆರವು ಪಡೆದು ನಡೆಸುತ್ತಿರುವ ಇಂಥ ಕೃತ್ಯಗಳಿಗೆ ಸೂಕ್ತ ಉತ್ತರವನ್ನು ಜನರ ನೆರವಿನಿಂದ ರಾಜಕೀಯವಾಗಿಯೇ ನೀಡಬೇಕಾದ ಸರಕಾರವೇ ಭಯೋತ್ಪಾದಕರ ಬಗ್ಗೆ ಮೃದು ನಿಲುವು ತಾಳುತ್ತಾ ಅವರ ಬೆದರಿಕೆ ಮಣಿಯತೊಡಗಿದೆಯೋ ಎಂಬ ಅನುಮಾನ ಬರುತ್ತಿದೆ.

12-12-90 ಚಂಡೀಗಢದ ಆಕಾಶವಾಣಿ ಕೇಂದ್ರದಿಂದ ಹಿಂದಿ ವಾರ್ತೆಗಳು ಪ್ರಸಾರವಾಗಲಿಲ್ಲ. ಈಗಲೂ ಆಗುತ್ತಿಲ್ಲ. ಪ್ರಾದೇಶಿಕ ಭಾಷೆಗೆ ಪ್ರಾಧಾನ್ಯ ಕೊಡಲಿಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂಬಂಥ ಹೇಳಿಕೆಯೊಂದನ್ನು ಆಕಾಶವಾಣಿಯಲ್ಲಿ ಅಧಿಕಾರಿಗಳು ಹೊರಡಿಸಿದ್ದಾರೆ. ಪ್ರಾದೇಶಿಕ ಭಾಷೆ ಅದರ ಕಾರ್ಯಕ್ರಮಗಳಿಗೆ ಪ್ರಾಧಾನ್ಯ ನೀಡುವ ಬಗ್ಗೆ ಯಾರದ್ದೇ ಆಕ್ಷೇಪವಿರಲು ಸಾಧ್ಯವಿಲ್ಲ. ಬಹುಶಃ ಎಲ್ಲರೂ ಅದನ್ನು ಪ್ರತಿಪಾದಿಸುತ್ತಾರೆ. ಆದರೆ ಚಂಡೀಗಢ ನಿಲಯಕ್ಕೆ ಈ ವಿಚಾರದಲ್ಲಿ ಇದೀಗ ತಾನೇ ಜ್ಞಾನೋದಯವಾಯಿತೇ ಎನ್ನುವುದು ಪ್ರಶ್ನೆ.(ಜಲಂಧರ್ ನಿಲಯದಿಂದಲೂ ಹಿಂದಿ ವಾರ್ತೆ ಪ್ರಸಾರವಾಗುತ್ತಿಲ್ಲ)

ಇಲ್ಲ. ಈ ತತ್ವಕ್ಕೂ, ಹಿಂದಿ ವಾರ್ತೆ ಬಿತ್ತರಿಸದಿರಲಿಕ್ಕೂ ಸಂಬಂಧವೇ ಇಲ್ಲ. ಪಂಥೀಯ ಸಮಿತಿ ಇತ್ತೀಚೆಗೆ ಸುದ್ದಿ ಮಾಧ್ಯಮಗಳಿಗೆ ವಿಧಿಸಿದ್ದ 'ನೀತಿ ಸಂಹಿತೆ', ಹಿಂದಿ ವಿರುದ್ಧ ರೇಡಿಯೋ, ದೂರದರ್ಶನಗಳಿಗೂ ಹಾಕಿದ್ದ ಬೆದರಿಕೆಯ ಹಿನ್ನೆಯಲ್ಲಿ ಈ ಅಂಶವನ್ನು ಪರಿಶೀಲಿಸಬೇಕಾಗಿದೆ.(ದಿಲ್ಲಿ ಟಿವಿಗೆ ಕೂಡ ಹಿಂದಿ ವಿರೋಧಿ ಬೆದರಿಕೆಯನ್ನು ವಿಸ್ತರಿಸಲಾಗಿದೆ)

ಭಯೋತ್ಪಾದಕರ ನೀತಿ ಸಂಹಿತೆಯನ್ನು ಧಿಕ್ಕರಿಸಿ ಒಂದು ಸಂದರ್ಶನ ಪ್ರಸಾರ ಮಾಡಿದ ಆಕಾಶವಾಣಿ ಚಂಡೀಗಢ ನಿಲಯ ನಿರ್ದೇಶಕ ಆರ್.ಕೆ. ತಾಲಿಬ್‌ರನ್ನು ಭಯೋತ್ಪಾದಕರು ಕೆಲದಿನಗಳ ಹಿಂದೆ ಕೊಂದಿದ್ದರು. ಯಾರು ಈ ಹೇಯ ಕೃತ್ಯ ನಡೆಸಿದ್ದರು ಎನ್ನುವುದು ತಕ್ಷಣಕ್ಕೆ ತಿಳಿದು ಬಂದಿರಲಿಲ್ಲ. ಈ ಕೃತ್ಯಕ್ಕೆ ತಾವೇ ಹೊಣೆ ಎಂದು ಐದು ಸಂಘಟನೆಗಳು ಈಗ ಹೇಳಿವೆ.

ಬಬ್ಬರ್ ಖಾಲ್ಸಾ, ಖಲಿಸ್ತಾನ್ ವಿಮೋಚನಾ ಪಡೆ(ಕೆ.ಎಲ್.ಎಫ್), ಖಲಿಸ್ತಾನ್ ಕಮಾಂಡೋ ಫೋರ್ಸ್(ಕೆ.ಸಿ.ಎಫ್), ಸಿಖ್ ವಿದ್ಯಾರ್ಥಿ ಫೆಡರೇಷನ್ ಮತ್ತು ಭಿಂದ್ರನ್ ವಾಲೆ ಟೈಗರ್ಸ್ ಫೋರ್ಸ್ ಅವೇ ಈ ಸಂಘಟನೆಗಳು. ತಮ್ಮ 'ಮಾತೃ ಭಾಷಾ ಕಾರ್ಯಾಚರಣೆ'(Operation Mother Language) ಯ ಆರಂಭದ ಕ್ರಮವಾಗಿ ತಾಲಿಬ್‌ರನ್ನು ಕೊಂದಿದ್ದಾಗಿ ಅವು ಹೇಳಿವೆ.

ಈ ಅಂಶವನ್ನು ಗಮನಿಸುವಾಗ ಭಾರತ ಸರಕಾರ ಭಯೋತ್ಪಾದಕರ ಬೆದರಿಕೆಗೆ ಇರಿದಾಗಿ ಎಲೆಕ್ಟ್ರಾನಿಕ್ ಮಾಧ್ಯಮಗಳ(ರೇಡಿಯೋ, ಟಿವಿ) ಸಿಬ್ಬಂದಿಗಳಿಗೆ ರಕ್ಷಣೆ ಕೊಟ್ಟು ನೈತಿಕ ಸ್ಥೈರ್ಯ ಹೆಚ್ಚಿಸುವ ಬದಲು ಭಯೋತ್ಪಾದಕರೆದುರು ಮಂಡಿಯೂರುವಂಥ ಪರಿಸ್ಥಿತಿಗೆ ಹೋಗಿದೆ ಎಂದು ಯಾರಾದರೂ ಅನುಮಾನಿಸಿದರೆ ಅದು ತಪ್ಪಾಗದು.

ಸರಕಾರಿ ಸಿಬ್ಬಂದಿಗಳು ಮಾತ್ರವಲ್ಲ ಜನ ಸಾಮಾನ್ಯರು ಕೂಡ ಸರಕಾರದ ಇಂಥ ಕ್ರಮದಿಂದ ಧೈರ್ಯ ಕಳೆದುಕೊಳ್ಳಲಾರರೇ? ಈ ವಿಚಾರದಲ್ಲಿ ಸರಕಾರ ತನ್ನ ನೀತಿಯನ್ನು ಸಂಪೂರ್ಣವಾಗಿ ಪುನರ್‌ಪರಿಶೀಲಿಸಿ, ದೃಢ ನಿಲುವನ್ನು ತಳೆಯಬೇಕು.

ಸಿಪಿಐ(ಎಂ) ಖಂಡನೆ:

ಚಂಡೀಗಢ ಆಕಾಶವಾಣಿ ನಿಲಯದಿಂದ ಹಿಂದಿ ವಾರ್ತೆ ಪ್ರಸಾರ ನಿಲ್ಲಿಸಿದ್ದನ್ನು ಪಕ್ಷದ ಪಾಲಿಟ್ ಬ್ಯೂರೋ ಖಂಡಿಸಿದೆ.

ಪಂಜಾಬ್‌ಗೆ ಹೊಸ ರಾಜ್ಯಪಾಲರು

ಪಂಜಾಬ್ ಸಮಸ್ಯೆ ಪರಿಹಾರಕ್ಕೆ ಶೀಘ್ರವೇ ಹೊಸ ಕ್ರಮಗಳನ್ನು ಕೈಗೊಳ್ಳುವುದಾಗಿ ಪ್ರಧಾನಿ ಚಂದ್ರಶೇಖರ್ ಹೇಳುತ್ತಲೇ ಬಂದಿದ್ದಾರೆ. ರಾಜೀವ್- ಲೋಂಗೋವಾಲ್ ಒಪ್ಪಂದ ಜಾರಿಯ ಅವಶ್ಯಕತೆಯನ್ನು ಪ್ರತಿಪಾದಿಸಿದ್ದಾರೆ. ನಿರ್ದಿಷ್ಟವಾದ ಕ್ರಮಗಳು ಮಾತ್ರ ಇನ್ನೂ ಹೊರಹೊಮ್ಮಿಲ್ಲ.

ಈ ಮಧ್ಯೆ ಆಗಿರುವ ಒಂದೇ ಬದಲಾವಣೆಯೆಂದರೆ ಪಂಜಾಬ್‌ಗೆ ಹೊಸ ರಾಜ್ಯಪಾಲರ ನೇಮಕ. ಇದುವರೆಗೆ ಅಲ್ಲಿದ್ದ ವೀರೇಂದ್ರ ವರ್ಮಾರನ್ನು ಹಿಮಾಚಲ ಪ್ರದೇಶಕ್ಕೆ ವರ್ಗಾಯಿಸಿ ನಿವೃತ್ತ ಸೇನಾ ಮುಖ್ಯಸ್ಥ ಓ.ಪಿ. ಮಲ್ಹೋತ್ರ ಅವರನ್ನು ನೇಮಿಸಲಾಗಿದೆ. ಪಂಜಾಬ್ ಪೋಲೀಸ್ ಮುಖ್ಯಸ್ಥ ಕೆ.ಪಿ.ಎಸ್.ಗಿಲ್‌ರನ್ನು ಕೇಂದ್ರೀಯ ಮೀಸಲು ಪೋಲೀಸ್ ಪಡೆಯ(ಸಿಆರ್‌ಪಿಎಫ್) ಮಹಾ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಪ್ರತ್ಯೇಕತಾವಾದಿಗಳ ಕುಕೃತ್ಯ

ಇತ್ತ ಪಂಜಾಬ್‌ನಲ್ಲಿ ಭಯೋತ್ಪಾದಕರ ಕೃತ್ಯ ಸಾಗಿದ್ದು, ಅತ್ತ ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ ಶಕ್ತಿಗಳ ಚಟುವಟಿಕೆಗಳು ತೀವ್ರಗೊಂಡಿದೆ. ಡಿಸೆಂಬರ್ 13 ರಂದು ಈ ಶಕ್ತಿಗಳಿಂದ ಒಂದು ಆಘಾತಕರ ಕೃತ್ಯ ನಡೆಯಿತು.

ಆ ದಿನ ಮಧ್ಯಾಹ್ನ ಕೆಲವು ಅಜ್ಞಾತ ವ್ಯಕ್ತಿಗಳು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮೌಲಾನಾ ಸೈಯದ್‌ಮಹಮದ್ ಮಸೂದಿಯವರನ್ನು ಅವರ ನಿವಾಸದಲ್ಲೇ ಗುಂಡಿಟ್ಟು ಕೊಂದರು. 'ಹಿಜ್ ಬುಲ್ಲಾ' ಎಂಬ ಕಾನೂನು ಬಾಹಿರ ಸಂಘಟನೆ ಈ ಹತ್ಯೆಗೆ ತಾನೇ ಹೊಣೆಯೆಂದು ಹೇಳಿಕೊಂಡಿದೆ.

87 ವರ್ಷ ಪ್ರಾಯದ ಮಸೂದಿ ಸ್ವಾತಂತ್ರ್ಯ ಸಮರದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರಲ್ಲದೆ ಕಾಶ್ಮೀರಿ ಕಣಿವೆಯಲ್ಲಿ ಕೋಮು ಸಾಮರಸ್ಯಕ್ಕಾಗಿ ದಿಟ್ಟತನದಿಂದ ಹೋರಾಡಿದ್ದರು. 1947ರಲ್ಲಿ ಪಾಕಿಸ್ತಾನದಿಂದ ನುಸುಳಿ ಬರುತ್ತಿರುವವರ ವಿರುದ್ಧ ಆಂದೋಲನ ಸಂಘಟಿಸುತ್ತಿದ್ದ ಸಂದರ್ಭದಲ್ಲಿ ಮಸೂದಿಯವರು ಒಮ್ಮೆ ಗುಂಡಿನ ದಾಳಿಯಿಂತ ಬಚಾವಾಗಿದ್ದರು. ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರವಾಗುವುದನ್ನು ಪ್ರಬಲವಾಗಿ ವಿರೋಧಿಸಿದ ಅವರು ಪಾಕ್ ಪರ ಬಂದುಕೋರರಿಂದ ಅನೇಕ ಬಾರಿ ಹಲ್ಲೆಗೊಳಗಾಗಿದ್ದರು. ಭಾರತ-ಪಾಕಿಸ್ತಾನ ಯುದ್ಧಗಳು ನಡೆದಾಗ ಕಾಶ್ಮೀರಿ ಕಣಿವೆಯಲ್ಲಿ ಭಾರತದ ಪರವಾಗಿ ಜನಜಾಗೃತಿ ಉಂಟು ಮಾಡಿದ್ದಾರೆ.

1932ರಲ್ಲಿ ಮಸೂದಿ 'ಮುಸ್ಲಿಂ ಕಾನ್ಫರೆನ್ಸ್' ಸ್ಥಾಪಿಸಿ ಅದರ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಮುಸ್ಲಿಂ ಕಾನ್ಫರೆನ್ಸ್ ಅನಂತರ ಈಗಿನ 'ನ್ಯಾಷನಲ್ ಕಾನ್ಫರೆನ್ಸ್' ಆಗಿ ಪರಿವರ್ತನೆಗೊಂಡ ಮೇಲೆ 1953ರವರೆಗೂ ಅದರ ಪ್ರಧಾನ ಕಾರ್ಯದರ್ಶಿಯಾಗಿದ್ದರು.

ಶ್ರೀ ಲಂಕಾ ಉಗ್ರಗಾಮಿಗಳ ಹಾವಳಿ, ಬಂಧನ

ಪಂಜಾಬ್, ಅಸ್ಸಾಂ, ಜಮ್ಮು ಮತ್ತು ಕಾಶ್ಮೀರದಲ್ಲಿ ಒಂದು ರೀತಿಯಾದರೆ ತಮಿಳುನಾಡಿನಲ್ಲಿ ಇನ್ನೊಂದು ರೀತಿಯಲ್ಲಿ ಉಗ್ರಗಾಮಿಗಳ ಚಟುವಟಿಕೆಯು ಶ್ರೀಲಂಕಾದ ಜನಾಂಗೀಯ ಸಮಸ್ಯೆ ಭಾರತದ ಅದರಲ್ಲೂ ವಿಶೇಷವಾಗಿ ತಮಿಳುನಾಡಿನ ಮೇಲೆ ಪರಿಣಾಮ ಬೀರುತ್ತಿದೆ. ಪ್ರಾಣ ಉಳಿಕೊಳ್ಳಲಿಕ್ಕಾಗಿ ಬಂದ ಸಾವಿರಾರು ನಿರಾಶ್ರಿತರು ಮಾತ್ರವಲ್ಲ ಶ್ರೀಲಂಕಾದಲ್ಲಿ ಪ್ರತ್ಯೇಕ ತಮಿಳ 'ನಾಡಿ'ಗಾಗಿ ಚಳುವಳಿ ನಡೆಸುತ್ತಿರುವ ವಿವಿಧ ಗುಂಪುಗಳಿಗೆ ಸೇರಿದ ಉಗ್ರಗಾಮಿಗಳೂ ತಮಿಳುನಾಡಿನಲ್ಲಿ ಬೀಡುಬಿಟ್ಟಿದ್ದಾರೆ.

ಪರಸ್ಪರ ವಿರೋಧಿ ತಮಿಳು ಉಗ್ರಗಾಮಿಗಳ ಸಂಘಟನೆಗಳ ನಡುವಣ ವೈರ, ಮಾರಾಮಾರಿ ರಾಜ್ಯದಲ್ಲಿ ಆತಂಕದ ವಾತಾವರಣ ಮೂಡಿಸುವುದು. ಇದನ್ನೇ ನೆಪವಾಗಿಟ್ಟುಕೊಂಡು ರಾಜ್ಯ ಡಿಎಂಕೆ ಸರಕಾರವನ್ನು ಕಿತ್ತೊಗೆಯಲು ಸಾಧ್ಯವೆಂದು ಕಾಂಗ್ರೆಸ್(ಐ), ಎಐಎಡಿಎಂಕೆ ಜೊಲ್ಲು ಸುರಿಸುತ್ತಿವೆ. ಸರಕಾರ ವಜಾಕ್ಕೆ ಕೇಂದ್ರದ ಮೇಲೆ ಒತ್ತಡವನ್ನು ತರುತ್ತಿವೆ.

ರಾಜ್ಯದ 'ಕಾನೂನು ಮತ್ತು ಸುವ್ಯವಸ್ಥೆಯ ಅಧ್ಯಯನಕ್ಕೆ' ಎಂದು ಕೇಂದ್ರ ಸಚಿವ ಡಾ. ಸುಬ್ರಹ್ಮಣ್ಯಂ ಸ್ವಾಮಿ ಇತ್ತೀಚೆಗೆ ಪ್ರವಾಸ ಕೈಗೊಂಡಿದ್ದರು. ಈ ಪ್ರವಾಸ ತಮಿಳುನಾಡಿನಲ್ಲಿ ರಾಷ್ಟ್ರಪತಿ ಆಡಳಿತಕ್ಕೆ 'ಮುನ್ನುಡಿ' ಎನ್ನಬಹುದೇನೋ. ಆದರೆ, ಡಿಎಂಕೆ ಸರಕಾರದ ಸಂಭಾವ್ಯ ವಜಾ ವಿರುದ್ಧ ಈಗಾಗಲೇ ಬಲವಾದ ಪ್ರತಿಭಟನೆಯ ಅಲೆ ಎದ್ದಿದೆ. ಇತ್ತೀಚೆಗೆ ತಮಿಳುನಾಡಿನಲ್ಲಿ ಪ್ರವಾಸ ಮಾಡಿದಸಂದರ್ಭದಲ್ಲಿ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಈ ಬಗ್ಗೆ ಕಟುವಾದ ಎಚ್ಚರಿಕೆ ನೀಡಿದ್ದಾರೆ. ತಮಿಳುನಾಡು ಸರಕಾರದ ವಜಾಕ್ಕೆ ಕೇಂದ್ರ ಮುಂದಾದರೆ ಜೇನುಗೂಡಿಗೆ ಕಲ್ಲೆಸೆದಂತೆ ಆಗಬಹುದು.

ಆ ಮಧ್ಯೆ ಕೇಂದ್ರ ಮತ್ತು ರಾಜ್ಯ ಸರಕಾರದ ಮಧುವೆ ಅರ್ಧ ಒಪ್ಪಂದದನ್ವಯ , ತಮಿಳುನಾಡಿನಲ್ಲಿ ಶ್ರೀ ಲಂಕಾ ಉಗ್ರಗಾಮಿಗಳ ವಿರುದ್ಧ ವ್ಯಾಪಕವಾದ ಕಾರ್ಯಾಚರಣೆ ನಡೆಯುತ್ತಿದೆ. ಎಲ್‌ಟಿಟಿಇ, ಈರೋಸ್, ಪ್ಲಾಟ್, ಇಎನ್‌ಟಿಎಲ್‌ಎಫ್, ಟೆಲೋ-ಹೀಗೆ ವಿವಿಧ ಗುಂಪುಗಳಿಗೆ ಸೇರಿದ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಈ ಲೇಖನ ಬರೆಯುವವರೆಗೆ ದೊರೆತ ಮಾಹಿತಿಯಂತೆ ಸೆರೆಯಾದವರ ಸಂಖ್ಯೆ ಸುಮಾರು 200.

ಗೋವಾದಲ್ಲಿ ರಾಷ್ಟ್ರಪತಿ ಆಡಳಿತ

ಸುಮಾರು ಎರಡು ವಾರ ಕಾಲ ರಾಜಕೀಯ ಅಸ್ಥಿರತೆ ಎದುರಿಸಿದ ಪಶ್ಚಿಮ ಕರಾವಳಿಯ ಪುಟ್ಟ ರಾಜ್ಯ ಗೋವಾ, ರಾಷ್ಟ್ರಪತಿ ಆಡಳಿತಕ್ಕೆ ಒಳಪಟ್ಟಿದೆ. ಡಿಸೆಂಬರ್ 14 ರಂದು ರಾಷ್ಟ್ರಪತಿಯವರು ಈ ಬಗ್ಗೆ ಆಜ್ಞೆ ಹೊರಡಿಸಿದರು. ವಿಧಾನ ಸಭೆಯನ್ನು ಸಧ್ಯ ಅಮಾನತಿನಲ್ಲಿಡಲಾಗಿದ್ದು ಅದನ್ನು ವಿಸರ್ಜಿಸುವ ಸಾಧ್ಯತೆಗಳೂ ಇವೆ ಎನ್ನಲಾಗಿದೆ.

ಈ ಮಧ್ಯೆ ಬಹುಮತ ಸಾಬೀತು ಪಡಿಸಬೇಕಿದ್ದ ಅಧಿವೇಶನಕ್ಕೆ ಸ್ವಲ್ಪವೇ ಮುನ್ನ ಮುಖ್ಯಮಂತ್ರಿ ಡಾ. ಲೂಯಿಸ್ ಬಾರ್ಬೋಸಾ ರಾಜೀನಾಮೆ, ಬಾರ್ಬೋಸಾ ಮತ್ತಿಬ್ಬರು ಸದಸ್ಯರ ಅನರ್ಹತೆ ಮೊದಲಾದ ಘಟನೆಗಳು ರಾಜ್ಯದಲ್ಲಿ ನಡೆದಿವೆ.

ಯಾವುದೇ ಪಕ್ಷ ಸರಕಾರ ರಚಿಸುವ ಸ್ಥಿತಿಯಲ್ಲಿ ಇಲ್ಲದಿರುವ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಕ್ರಮ ಕೈಗೊಳ್ಳಲಾಯಿತು ಎನ್ನಲಾಗಿದೆ. ವಾಸ್ತವವಾಗಿ ಇದು ಕಾಂಗ್ರೆಸ್(ಐ)ಗೆ ಅನುಕೂಲಕರವಾದ ಸನ್ನಿವೇಶ ಸೃಷ್ಟಿಗೆಂದು ಸೃಷ್ಟಿಸಲಾದ ಪರಿಸ್ಥಿತಿ ಎನ್ನಬಹುದಾಗಿದೆ.

ಎನ್‌ಪಿಸಿ ಹೋಳು ವಿಶ್ವಾಸಮತ ಇತ್ಯಾದಿ

ರಾಜಕೀಯ ಅಸ್ಥಿರತೆ ಕಂಡ ಇನ್ನೊಂದು ರಾಜ್ಯ ಈಶಾನ್ಯದ ನಾಗಾಲ್ಯಾಂಡ್. ಅಲ್ಲಿನ ಆಳುವ ನಾಗಾ ಪೀಪಲ್ಸ್ ಕೌನ್ಸಿಲ್(ಎನ್‌ಪಿಸಿ)ನಿಂದ ಹಲವರು ಹೊರಬಂದು ಎನ್‌ಪಿಸಿ(ಒರಿಜಿನಲ್) ಎಂಬ ಪಕ್ಷ ರಚಿಸಿಕೊಂಡರು. ಅದರಿಂದಾಗಿ ಸರಕಾರ ಬಹುಮತ ಕಳೆದುಕೊಂಡಿತು. ಈ ಮಧ್ಯೆ ಪಕ್ಷಾಂತರ ನಡೆಸಿದ್ದಾಗಿ 15 ಸದಸ್ಯರನ್ನು ಸ್ಪೀಕರ್ ಅನರ್ಹಗೊಳಿಸಿದರು. ವಿಧಾನಸಭೆಯ ಸದಸ್ಯರ ಸಂಖ್ಯೆ 60 ಇದ್ದದ್ದು 45ಕ್ಕಿಳಿಯಿತು. ವಿಶ್ವಾಸಮತ ಕೋರಲಿಕ್ಕಾಗಿ ಮುಖ್ಯಮಂತ್ರಿ ವಮುಜೊ ಡಿ.18ರಂದು ಕರೆದಿದ್ದ ವಿಧಾನ ಸಭೆ ಅಧಿವೇಶನದಲ್ಲಿ ಅವರಿಗೆ ವಿಶ್ವಾಸಮತ ದೊರೆಯಿತು. ಪ್ರತಿಪಕ್ಷದವರು ಅಧಿವೇಶನ ಬಹಿಷ್ಕರಿಸಿದ್ದರು.

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸದನದಲ್ಲಿ ಹಾಜರಿದ್ದವರ ಪೈಕಿ ಬಹುಮತ ದೊರೆತರೆ ವಿಶ್ವಾಸಮತ ಗೆದ್ದಂತೆಯೇ ಬಿಟ್ಟು ಸದಸ್ಯರ ಸಂಖ್ಯೆಯನ್ನು ಪರಿಗಣಿಸುವುದಿಲ್ಲ.

ಆಂಧ್ರಕ್ಕೆ ಹೊಸ ಮುಖ್ಯಮಂತ್ರಿ

ನೂರಾರು ಜನರ ಪ್ರಾಣಾಹುತಿಯಾದ ಭಾರಿ ಮತೀಯ ಗಲಭೆಗಳ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ ಡಾ. ಚೆನ್ನಾರೆಡ್ಡಿಯವರ ಸ್ಥಾನದಲ್ಲಿ ಎನ್.ಜನಾರ್ಧನ ರೆಡ್ಡಿ ಆಂಧ್ರಪ್ರದೇಶದ ಹೊಸ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡಿದ್ದಾರೆ. ಡಿಸೆಂಬರ್ 17 ರಂದು ಅವರು ಅಧಿಕಾರ ಸ್ವೀಕರಿಸಿದರು.

ಚೆನ್ನಾರೆಡ್ಡಿ ರಾಜೀನಾಮೆ ನೀಡಬೇಕೆಂದು ಸಿಪಿಐ(ಎಂ) ಬಲವಾಗಿ ಒತ್ತಾಯಿಸಿದ್ದನ್ನು ಸ್ಮರಿಸಬಹುದಾಗಿದೆ.

'ಭಾರತ ಭವನ' ನಿಯಂತ್ರಣಕ್ಕೆ ಬಿಜೆಪಿ ಯತ್ನ

ಇದು ದೇಶದ ಸಾಂಸ್ಕೃತಿಕ ರಂಗದಲ್ಲಿ ಒಂದು ಪ್ರಮುಖ ಸಂಸ್ಥೆ. ಮಧ್ಯಪ್ರದೇಶ ರಾಜಧಾನಿ ಭೋಪಾಲ್‌ನಲ್ಲಿ ಇದೆ. ಅದೊಂದು ಸ್ವಾಯತ್ತ ಸಾಂಸ್ಕೃತಿಕ ಸಂಸ್ಥೆ. ಅದನ್ನೀಗ ತನ್ನ ವಶಕ್ಕೆ ತೆಗೆದುಕೊಳ್ಳಲು ಬಿಜೆಪಿ ನೇತೃತ್ವದ ಮಧ್ಯಪ್ರದೇಶ ಸರಕಾರ ಪ್ರಯತ್ನಿಸುತ್ತಿದೆ.

ಮುಖ್ಯಮಂತ್ರ ಸುದರಲಾಲ್ ಪಟ್ವಾರನ್ನು ಅಧಿಕಾರೇತರ ಅಧ್ಯಕ್ಷರನ್ನಾಗಿ ಮಾಡುವ ನಿಟ್ಟನಲ್ಲಿ ಭಾರತ ಭವನ ಟ್ರಸ್ಟ್ ಕಾಯಿದೆಗೆ ತಿದ್ದುಪಡಿ ತರಲು ಸರಕಾರ ಕ್ರಮ ಕೈಗೊಂಡಿದೆ. ವಿಧಾನ ಸಭೆಯ ಅಧಿವೇಶನ ನಡೆಯುತ್ತಿದ್ದು ತೀವ್ರ ಪ್ರತಿಭಟನೆಯ ನಡುವೆಯೂ ಈ ಬಗ್ಗೆ ಒಂದು ಮಸೂದೆ ಮಂಡಿಸಲು ಸರಕಾರ ಸಜ್ಜಾಗಿದೆ.

ಮಧ್ಯಪ್ರದೇಶ ಸರಕಾರದ ಕ್ರಮವನ್ನು 43 ಪ್ರಮುಖ ಕಲಾವಿದರು ಖಂಡಿಸಿದ್ದಾರೆ. ಅಧ್ಯಕ್ಷೆ ಪುಪುಲ್ ಜಯಕರ್ ಮತ್ತಿತರು ರಾಜೀನಾಮೆ ನೀಡಿದ್ದಾರೆ. ಹಿರಿಯ ಪ್ರಸಿದ್ಧ ಕಲಾವಿದರೊಬ್ಬರನ್ನು ಭಾರತ ಭವನದ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಒತ್ತಾಯಿಸಲಾಗಿದೆ.

ಭಾರತ ಭವನದಂಥ ಒಂದು ಅಗ್ರಮಾನ್ಯ ಸಂಸ್ಥೆಯ ಸ್ವಾಯತ್ತೆಯನ್ನು ನಾಶಮಾಡಿ ಸಾಂಸ್ಕೃತಿಕ ರಂಗವನ್ನು ರಾಡಿ ಮಾಡುವ ಬಿಜೆಪಿ ಪ್ರಯತ್ನಗಳು ಕೈಗೂಡದಂತೆ ಮಾಡಬೇಕಾದ ಅವಶ್ಯಕತೆ ತುಂಬಾ ಇದೆ.

ಸೂತ್ರಧಾರಿಯ ಕೆಲಸ ಆರಂಭ

ಕೇಂದ್ರ ಸರಕಾರದ (ಮತ್ತು ಗುಜರಾತ್, ಉತ್ತರ ಪ್ರದೇಶ) ಮೂಗುದಾರ ಹಿಡಿದಿರುವ ಸೂತ್ರಧಾರಿಯ ಕೈಗಳ ಚಲನೆ ಆರಂಭವಾಗಿದೆ. ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್‌ರನ್ನು ಬದಲಾಯಿಸಬೇಕೆಂದು ಕಾಂಗ್ರೆಸ್(ಐ) ಒತ್ತಾಯಿಸಿದೆ. ಗುಜರಾತ್ ಬಗ್ಗೆ ಕೂಡ ಇದೇ ಮಾತು.

ಆದರೆ ಮುಲಾಯಂ ಸಿಂಗ್‌ರನ್ನು ಬದಲಿಸುವ ಪ್ರಶ್ನೆ ಇಲ್ಲವೆಂದು 'ಆಳುವ' ಜನತಾದಳ(ಎಸ್) ಹೇಳಿದೆ. ಅದು ಪಕ್ಷದ ಆಂತರಿಕ ವಿಚಾರ ಎಂದಿದೆ. ಜನತಾದಳ (ಎಸ್) ವ್ಯವಹಾರಗಳಲ್ಲಿ ಕಾಂಗ್ರೆಸ್(ಐ) ಹಸ್ತಕ್ಷೇಪ ಮಾಡುತ್ತಿದೆ ಎಂದು ಅದು ಆರೋಪಿಸಿದೆ.

ಕೇಂದ್ರ ಸರಕಾರದ ಜೀವಾವಧಿ ರಾಜೀವ್‌ಗಾಂಧಿ ಬಯಸಿದಷ್ಟು ದಿನ ಎಂದು ಪ್ರಚಲಿತವಾಗಿರುವ(ವಾಸ್ತವ) ಮಾತಿಗೆ ಉ.ಪ್ರ. ಪುಷ್ಟಿ ನೀಡಿದೆ. ಈ ಮಾತು ಉತ್ತರ ಪ್ರದೇಶ ಮತ್ತು ಗುಜರಾತ್‌ಗೂ ಅನ್ವಯವಾಗುತ್ತದೆ.

ಭೋಪಾಲ್ ದುರಂತ ತೀರ್ಪು ಮುಂದಕ್ಕೆ

ಭೋಪಾಲ್ ವಿಷಾನಿಲ ದುರಂತ ಪ್ರಕರಣಕ್ಕೆ ಸಂಬಂಧಿಸಿದ 47 ಕೋಟಿ ಡಾಲರ್ ಪರಿಹಾರ ಧನ ಇತ್ಯರ್ಥವನ್ನು ಪ್ರಶ್ನಿಸಿ ಸಲ್ಲಿಲಾಗಿದ್ದ ಪುನರ್ ಪರಿಶೀಲನಾ ಅರ್ಜಿಯ ಮೇಲಿನ ತೀರ್ಪನ್ನು ಸುಪ್ರಿಂ ಕೋರ್ಟ್ ಕಾಯ್ದಿರಿಸಿದೆ. ಡಿ.18 ರಂದು ಸರ್ವೋಚ್ಚ ನ್ಯಾಯಾಲಯ ಎರಡನೇ ಬಾರಿಗೆ ಈ ಕ್ರಮ ಕೈಗೊಂಡಿತು.

ಭೋಪಾಲ್ ಅನಿಲ ಪೀಡಿತ ಮಹಿಳಾ ಉದ್ಯೋಗ ಸಂಘಟನೆ ಹಾಗೂ ವಕೀಲ ಚರಣ್ ಸಾಹು ಸಲ್ಲಿಸಿದ್ದ ಈ ಅರ್ಜಿಯನ್ನು ಕೇಂದ್ರ ಸರಾರ ಬೆಂಬಲಿಸಿದೆ.

ಅನಿಲ ದುರಂತದಲ್ಲಿ ಹಾನಿಗೀಡಾದವರಿಗೆ ನೋಟಿಸ್ ನೀಡಿ ಅವರ ಅಭಿಪ್ರಾಯ ಪಡೆಯದಿರುವುದರಿಂದ ಪರಿಹಾರಧನಕ್ಕೆ ಕುರಿತಂತೆ ಮಾಡಿಕೊಂಡಿರುವ ಒಪ್ಪಂದ ಕಾನೂನುಬಾಹಿರ. ನಾಗರೀಕ ಸಂಹಿತೆಯ ಉಲ್ಲಂಘನೆ ಎಂದು ಬಹುರಾಷ್ಟ್ರೀಯ ಯೂನಿಯನ್ ಕಾರ್ಬೈಡನ್ನು-ಅರ್ಜಿದಾರರು ದೂಷಿಸಿದ್ದಾರೆ.

ಉಡುಪಿ ಸಭೆ [illegible]

ಆ ಬಳಿಕ ಮಾತನಾಡಿದ ಎಐಟಿಯುಸಿ ಮುಂದಾಳು ಕಾಮ್ರೇಡ್ ಬಿ.ಕೆ. ಕೃಷ್ಣಪ್ಪನವರು ಮಾತನಾಡಿ ಮತೀಯವಾದ ಕರಾಳ ಶಕ್ತಿಯ ವಿರುದ್ಧ ಹೋರಾಡಬೇಕು ಎಂದು ಕರೆ ಕೊಟ್ಟರು.

ಉಪನ್ಯಾಸಕ ಶ್ರೀ ಸುಬ್ರಮಣ್ಯ ಕೆದ್ಲಾಯ, ಪತ್ರಕರ್ತ ರಾಘವ ನಂಬಿಯಾರ್, ದಲಿತ ಸಂಘರ್ಷ ಸಮಿತಿಯ ಗುರುವಪ್ಪ, ಮಾಸ್ತರ್ ಹಾಗೂ ಲೇಖಕ ಮುರಾರಿ ಬಲ್ಲಾಳ್ ಮಾತನಾಡಿ ಮತೀಯವಾದವನ್ನು ಖಂಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕದ ಹಿರಿಯ ರಂಗತಜ್ಞ-ಲೇಖಕ ಕೆ.ವಿ. ಸುಬ್ಬಣ್ಣ ಭಾಷಣ ಮಾಡುತ್ತಿದ್ದಾಗ ಕಲ್ಲು ತೂರಿ, ಘೋಷಣೆ ಕೂಗಿ ಸಭೆಗೆ ಅಡ್ಡಿ ಮಾಡಲು ಪ್ರಯತ್ನಿಸುತ್ತಿದ್ದ ಕೆಲವರನ್ನು ಸುಬ್ಬಣ್ಣ ತರಾಟೆಗೆ ತೆಗೆದುಕೊಂಡು, 'ಸಹಿಷ್ಣುತೆಯನ್ನು ಪ್ರತಿಪಾದಿಸುವ ನಾನು ಯಥಾರ್ಥ ಹಿಂದೂ, ನೀವಲ್ಲ, ನಿಮಗೆ ಧರ್ಮದ ಮಾತೆತ್ತಲು ಅಧಿಕಾರವೇ ಇಲ್ಲ, ನಾನು ನಿಮಗೆ ಹೆದರುವುದಿಲ್ಲ. ನಿಮ್ಮಂತಹವರ ವಿರುದ್ಧ ನನ್ನ ಹೋರಾಟವನ್ನು ಮುಂದುವರಿಸುತ್ತೇನೆ' ಎಂದು ಏರು ಧ್ವನಿಯಲ್ಲಿ ಹೇಳಿದರು. ಅವರ ದಿಟ್ಟ ನಿಲುವು ಎಲ್ಲರ ಮೆಚ್ಚುಗೆ ಗಳಿಸಿತು.

ಜಿಲ್ಲಾ ಪರಿಷತ್ ಸದಸ್ಯ ಶ್ರೀ ಹರೀಶ್ ಹೆಗ್ಡೆ ಕಾರ್ಯಕ್ರಮದ ಕೊನೆಯಲ್ಲಿ ಸಹಕರಿ-

ನೈತಿಕ ದಿವಾಳಿಕೋರರ ಮತ್ತೊಂದು ಕೃತ್ಯ

ಅಲ್ಪ ಬೆಂಬಲದ ವಾಪಸಿನಿಂದ ಸರಕಾರ ಉರುಳಿದರೂ ರಾಷ್ಟ್ರೀಯರಂಗದ ಮುಖಂಡರು ರಾಷ್ಟ್ರಾದ್ಯಂತ ಪಡೆಯುತ್ತಿರುವ ಭಾರಿ ಜನ ಬೆಂಬಲವನ್ನು ಸಹಿಸದ ಬಿಜೆಪಿ 'ಗೂಂಡಾಗಿರಿ'ಗೆ ಇಳಿದಿರುವುದನ್ನು ಭೋಪಾಲ್ ಘಟನೆ ತೋರಿಸಿಕೊಟ್ಟಿದೆ. ಮಾಜಿ ಪ್ರಧಾನಿ ವಿ.ಪಿ.ಸಿಂಗ್‌ರ ಸಹಿತ ಅನೇಕ ಜನತಾದಳದ ಮತ್ತು ಸಿಪಿಐ(ಎಂ) ಮುಖಂಡರ ಮೇಲೆ ಆರೆಸ್ಸೆಸ್, ಬಿಜೆಪಿ ವಿಎಚ್‌ಪಿಯವರು ದಾಳಿ ನಡೆಸಿ ತಮ್ಮ ನೀಚತನವನ್ನು ಬಹಿರಂಗಪಡಿಸಿದ್ದರು. ರಾಜಕೀಯದಲ್ಲಿ ಧರ್ಮ ಮಾತ್ರವಲ್ಲದೆ ಗೂಂಡಾಗಿರಿ ಬೆರಕೆಯ ಪ್ರವೃತ್ತಿಯನ್ನು ಅವರು ಆರಂಭಿಸಿದ್ದಾರೆ.

ಭೋಪಾಲ್ ಘಟನೆ ಪುನರಾವರ್ತನೆಗೊಂಡಿದೆ. ಡಿಸೆಂಬರ್ 18 ರಂದು ಉತ್ತರಪ್ರದೇಶದ ಗೋರಖ್‌ಪುರದಲ್ಲಿ ಜನತಾದಳ ನಾಯಕರಾದ ಅಜಿತ್‌ಸಿಂಗ್ ಮತ್ತು ಶರದ್‌ಯಾದವ್‌ರ ಮೇಲೆ ಹಲ್ಲೆ ನಡೆದಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರು ಈ ಆಕ್ರಮಣ ನಡೆಸಿದ್ದಾರೆ. ಪತ್ರಿಕೆಗಳು ವಿವಿಧ ರಾಜಕೀಯ ಪಕ್ಷಗಳು ಭೋಪಾಲ್‌ಘಟನೆ ಬಗ್ಗೆ ಛೀ.. ಥೂ ಎಂದು ಉಗಿದರೂ ಮರ್ಯಾದಾ ಪುರುಷೋತ್ತಮನ ಆರಾಧಕರಿಗೆ ಮರ್ಯಾದೆ ಇಲ್ಲ ಎನ್ನುವುದನ್ನು ಈ ಘಟನೆ ತೋರಿಸಿದೆ.

ಪೋಲೆಂಡಿನ ಅಧ್ಯಕ್ಷರಾಗಿ ಸಾಲಿಡಾರಿಟಿ ನಾಯಕ ಲೆಕ್ ವಲೇಸಾ ಚುನಾಯಿತರಾಗಿದ್ದಾರೆ. ಅತ್ಯಂತ ಕೀಳುಮಟ್ಟದ ಪ್ರಚಾರ ಕಂಡ ಈ ಚುನಾವಣೆ ಸಾಲಿಡಿರಿಟಿಯ ಒಡಕು, ಎರಡನೆಯ ಸ್ಥಾನದಲ್ಲಿ ಅಪರಿಚಿತ ಅಭ್ಯರ್ಥಿಯೊಬ್ಬ ಮೂಡಿಬಂದದ್ದು ವಿಶೇಷವಾಗಿತ್ತು.

31 ವರ್ಷಗಳ ನಂತರ ಎ.ಎನ್.ಸಿ.ಯ ಸಮ್ಮೇಳನ ದ.ಆಫ್ರಿಕದ ಒಳಗೆ ನಡೆಯಿತು. ಅದು ದ.ಆಫ್ರಿಕಾದ ವಿರುದ್ಧ ಅಂತರರಾಷ್ಟ್ರೀಯ ದಿಗ್ಬಂಧನ ಮುಂದುವರಿಸಬೇಕೆಂಬ ನಿರ್ಣಯ ಕೈಗೊಂಡಿತು.

ಬಾಂಗ್ಲಾ ದೇಶದಲ್ಲಿ ಹಂಗಾಮಿ ಸರ್ಕಾರ ರಾಜಕೀಯ ಒತ್ತಡದಿಂದಾಗಿ ಮಾಜಿ ಅಧ್ಯಕ್ಷರನ್ನು ಬಂಧಿಸಿ, ಅವರ ಆಡಳಿತದ ಕಾಲಾವಧಿಯಲ್ಲಿನ ಕ್ರಿಮಿನಲ್ ಕಾರ್ಯಾಚರಣೆಗಳಿಗಾಗಿ ವಿಚಾರಣೆ ಮಾಡಲಾಗುವುದು ಎಂದು ನಿರ್ಧರಿಸಲಾಗಿದೆ.

ಕೊಲ್ಲಿ ಬಿಕ್ಕಟ್ಟಿನ ಶಾಂತಿಯುತ ಪರಿಹಾರದ ಸಾಧ್ಯತೆಗಳು ಪುನ: ಇರಾಕ್-ಅಮೇರಿಕಾ ನೇರ ಮಾತುಕತೆಗಳ ದಿನಾಂಕದ ಬಗ್ಗೆ ವಿವಾದದಲ್ಲಿ ಮುಳುಗಿ ಹೋಗುತ್ತಿವೆ.

ಅದೇ ರೀತಿ 3ನೇ ವರ್ಷಕ್ಕೆ ಕಾಲಿಟ್ಟಿರುವ ಪ್ಯಾಲೆಸ್ತೇನ್ನರ ಇಂತಿಫದಾ, ವಿಶ್ವ ಸಂಸ್ಥೆ ಮತ್ತು ಭದ್ರತಾ ಸಮಿತಿ ಈ ಬಗ್ಗೆ ಮಧ್ಯಪ್ರವೇಶ ಮತ್ತು ಕಾರ್ಯಾಚರಣೆ ತತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿ ಉಂಟು ಮಾಡಿದೆ.

ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಅಧಿವೇಶನ ಕೇಂದ್ರ ಸರ್ಕಾರ ಹೊಸ ಒಕ್ಕೂಟದ ರಚನೆ ಬಗ್ಗೆ ರಚಿಸಿರುವ ಒಪ್ಪಂದದ ಬಗ್ಗೆ ಚರ್ಚಿಸಿ, ಅದನ್ನು ಅನುಮೋದಿಸುವ ನಿರ್ಣಯ ತೆಗೆದುಕೊಂಡಿದೆ.



ಕಾಂ: ಟಾಂಬೋ ಲಾಲ್ ಸಲಾಂ- ಮೂರು ದಶಕಗಳ ನಂತರ ತಾಯ್ನಾಡಿಗೆ ಮರಳಿದಾಗ

ವಲೇಸಾ ವಿಜಯ

ಸಾಲಿಡಾರಿಟಿ ನಾಯಕ ಲೆಕ್ ವಲೇಸಾ ಪೋಲೆಂಡ್‌ನ ಅಧ್ಯಕ್ಷೀಯ ಚುನಾವಣೆಯಲ್ಲಿ ಎರಡನೆಯ ಸುತ್ತಿನಲ್ಲಿ ಬಹುಮತ ಪಡೆದು ಗೆದ್ದಿದ್ದಾರೆ. ಮೊದಲನೆಯ ಸುತ್ತಿನಲ್ಲಿ ಅವರಿಗೆ ಶೇಕಡಾ 50 ಮತ ಪಡೆಯಲು ಸಾಧ್ಯವಾಗಿರಲಿಲ್ಲ. ಅಲ್ಲದೆ ಎರಡನೆಯ ಸ್ಥಾನದಲ್ಲಿ ಅವರಿಗೆ ತೀವ್ರ ಪ್ರತಿಸ್ಪರ್ಧಿಯಾಗುವರು ಎಂದು ಹೇಳಲಾಗಿದ್ದ ಸಾಲಿಡಾರಿಟಿ ಪ್ರಧಾನಿ ಮೂರನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದರು. ಎರಡನೆಯ ಸ್ಥಾನದಲ್ಲಿ ಕೆನಡಾದಿಂದ ಹಿಂತಿರುಗಿ ಬಂದ ಅಪರಿಚಿತ ಉದ್ಯಮಿ ಟಿಮಿನ್‌ಸ್ಕಿ ಬಂದಿದ್ದರು. ಇದು ಹೆಚ್ಚು ಕಡಿಮೆ ಸಾಲಿಡಾರಿಟಿ ಸರ್ಕಾರದ ವಿರುದ್ಧ ವಿಶ್ವಾಸಮತ ಎನ್ನುವಂತಿತ್ತು. ಎರಡನೆಯ ಸುತ್ತಿನಲ್ಲಿ ವಲೇಸಾ ಶೇಕಡಾ 75 ರಷ್ಟು ಮತ ಪಡೆದರೆ, ಟಿಮಿನ್‌ಸ್ಕಿ ಶೇಕಡಾ 25 ರಷ್ಟು ಮತ ಪಡೆದರು.

ಅಧ್ಯಕ್ಷ ಚುನಾವಣೆ ನಡೆಯುವ ಮೊದಲೇ ಸಾಲಿಡಾರಿಟಿ ಎರಡಾಗಿ ಹೋಳಾದಂತೆ ಆಗಿತ್ತು. ಮರ್ಶೋವೆಸ್ಕಿ ಅವರ ಸರ್ಕಾರವನ್ನು ಲೆಕ್ ವಲೇಸಾ ಬಹಿರಂಗವಾಗಿ ಟೀಕಿಸುತ್ತಿದ್ದರು. ಇವರಿಬ್ಬರ ನಡುವೆ ಭಾರಿ ಭಿನ್ನಾಭಿಪ್ರಾಯಗಳಿಲ್ಲ. ಅಮೇರಿಕಾದ ಧನಸಹಾಯದಿಂದ ಆರಂಭವಾದ ಸಾಲಿಡಾರಿಟಿ ಚಳುವಳಿಯ ನಾಯಕ ಲೆಕ್ ವಲೇಸಾಗೆ ಮರ್ಶೋವೆಸ್ಕಿ ಸಲಹಾಕಾರರಾಗಿದ್ದರು. ಇಬ್ಬರೂ ಬಂಡವಾಳಶಾಹಿ ಕಟ್ಟಬಯಸುತ್ತಾರೆ. ಏನಾದರೂ ವ್ಯತ್ಯಾಸವಿದ್ದರೆ ವಲೇಸಾ ಈ ಬಂಡವಾಳಶಾಹಿಯನ್ನು ಇನ್ನೂ ರಭಸದಿಂದ ಕಟ್ಟಬಯಸುತ್ತಾರೆ. ಈ ವರ್ಷದ ಜನವರಿ 1 ರಿಂದ ಆಚರಣೆಗೆ ಬಂದಿದ್ದ ಐ.ಎಮ್.ಎಫ್.ನ 'ಮಿತವ್ಯಯ'ದ ಕಾರ್ಯಕ್ರಮದ ಪರಿಣಾಮಗಳಿಂದ ಜನ ತತ್ತರಿಸುತ್ತಿದ್ದಾರೆ. ನಿರುದ್ಯೋಗ ಶೇಕಡಾ 7.5 ರಷ್ಟಿದ್ದು ವರ್ಷದ ಕೊನೆಯೊಳಗೆ ಶೇಕಡಾ 10 ರಷ್ಟು ಮುಟ್ಟಲಿದೆ. ಒಂದೇ ವರ್ಷದಲ್ಲಿ ಉತ್ಪಾದನೆ ಶೇಕಡಾ 30 ರಷ್ಟು ಜೀವನಮಟ್ಟ ಶೇಕಡಾ 40 ರಷ್ಟು ಕುಸಿದಿದೆ.

ಆದರೆ ವಲೇಸಾ ಐಎಮ್‌ಎಫ್‌ನ ಈ ಕಾರ್ಯಕ್ರಮವನ್ನೇನೂ ವಿರೋಧಿಸಲಿಲ್ಲ. ಅದರ ಬದಲು ಈ ಪರಿಣಾಮಗಳಿಗೆ ಪ್ರಧಾನಮಂತ್ರಿಯನ್ನು ಟೀಕಿಸುತ್ತಿದ್ದರು. ವಲೇಸಾ ಸರ್ಕಾರದಲ್ಲಿ ಯಾವುದೇ ಭಾಗವಹಿಸಿದ್ದನ್ನು ಉಪಯೋಗಿಸಿಕೊಂಡು, ಇದನ್ನು ಈ ಪ್ರಧಾನಿ ವಿರುದ್ಧ ಚುನಾವಣೆಯಲ್ಲಿ ಬಳಸಿಕೊಂಡರು. ಆದರೆ ಇದರ ಬದಲಾಗಿ ತಮ್ಮ ಆರ್ಥಿಕ ಕಾರ್ಯಕ್ರಮವೇನು ಎಂದು ಹೇಳಿಲ್ಲ. ಪೋಲೆಂಡಿನ ವಿದೇಶೀ ಸಾಲ ಮರುಪಾವತಿ ತಡೆಹಿಡಿಯಬೇಕು ಎಂಬುದು ಬಿಟ್ಟರೆ ಖಾಸಗೀಕರಣ ಮಾತ್ರ ಇನ್ನೂ ವೇಗವಾಗಿ ಮುಂದುವರಿಯಬೇಕೆಂದು ಅವರ ನಿಲುವು.

ವಲೇಸಾರವರ ಚುನಾವಣಾ ಪ್ರಚಾರ ಅತ್ಯಂತ ಕೀಳುಮಟ್ಟಕ್ಕೆ ತಲುಪಿತ್ತು ಎಂದು ಅವರ ಪಾಶ್ಚಿಮಾತ್ಯ ಸಮರ್ಥಕರೂ ಒಪ್ಪಿಕೊಂಡಿದ್ದಾರೆ. ಯೆಹೂದಿ-ವಿರೋಧಿ ಭಾವನೆಗಳನ್ನು ಚುನಾವಣೆಗಳಿಗಾಗಿ ಬಡಿದೆಬ್ಬಿಸಲು ಅವರು ಹೇಸಲಿಲ್ಲ ಎಂಬುದು ಈಗ ಜನಜನಿತವಾಗಿದೆ. ವಲೇಸಾರವರ ಅಧಿಕಾರಶಾಹಿ ವರ್ತನೆಯೂ ಮೊದಲಿನಿಂದಲೂ ಸ್ಪಷ್ಟವಾಗಿ ಕಾಣಬರುತ್ತಿತ್ತು. ತಾನು ಚುನಾವಣೆ ಸೋತರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ ಎಂದು ಎಚ್ಚರಿಸಿದ್ದರು. ಕಳೆದ ವರ್ಷದ ಚುನಾವಣೆಗಳು ನಡೆದಾಗ ಅಧಿಕಾರದಿಂದ ಹೊರಗುಳಿದ ವಲೇಸಾರವರ ಅಧಿಕಾರ ದಾಹವೇ ಈ ಅಧ್ಯಕ್ಷೀಯ ಚುನಾವಣೆಗೆ ಕಾರಣವಾಗಿತ್ತು. ಅವರ ಕುರುಡು ಕಮ್ಯುನಿಸ್ಟ್ -ವಿರೋಧವೂ ಗಮನಾರ್ಹವಾದದ್ದು. ಚುನಾವಣಾ ಪ್ರಚಾರದಲ್ಲಿ ಉಚ್ಚ ಅಧಿಕಾರಗಳಲ್ಲಿರುವ ಕಮ್ಯುನಿಸ್ಟರನ್ನು ಈ ಸರ್ಕಾರ ಒದ್ದೋಡಿಸುವುದರಲ್ಲಿ ನಿಧಾನ ಮಾಡುತ್ತಿದೆ ಎಂದು ಟೀಕಿಸುತ್ತಿದ್ದರು. ಆದರೆ ಸಾಲಿಡಾರಿಟಿ ಈ ಈರ್ವರ ಜಗಳದಲ್ಲಿ ಬಡವಾಗಿದೆ. ಪೋಲೆಂಡ್ ತತ್ತರಿಸುತ್ತಿದೆ. ಸಾಲಿಡಾರಿಟಿ ಸದಸ್ಯತ್ವ 1 ಕೋಟಿಯಿಂದ 15 ಲಕ್ಷಕ್ಕೆ ಇಳಿದಿದೆ.ಆಳುವ ಪಕ್ಷ ಸಾಲಿಡಾರಿಟಿಗೆ ಈಗ ಸ್ಪಷ್ಟ ಕಾರ್ಯಕ್ರಮ ಇದ್ದಂತಿಲ್ಲ. ಇದು ಪೋಲಾಂಡ್ ಬಿಕ್ಕಟ್ಟನ್ನು ಇನ್ನಷ್ಟು ಗಂಭೀರಗೊಳಿಸಲಿದೆ.

ಎಎನ್‌ಸಿ ಸಮ್ಮೇಳನ- 30 ವರ್ಷಗಳ ನಂತರ ಸ್ವದೇಶದಲ್ಲಿ.

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇಧದ ವಿರುದ್ಧದ ಹೋರಾಟ ಒಂದು ನಿರ್ಣಾಯಕ ಹಂತದತ್ತ ಹೋಗುವ ಸೂಚನೆಗಳು ಕಂಡು ಬಂದಿವೆ. ಜೋಹಾನ್ಸ್‌ಬರ್ಗ್‌ನಲ್ಲಿ ಡಿಸೆಂಬರ್ 14 ರಿಂದ 16 ರವರೆಗೆ 3 ದಿನಗಳ ANC ಸಮ್ಮೇಳನ ನಡೆಯಿತು. ಸುಮಾರು 1600 ಪ್ರತಿನಿಧಿಗಳು 36 ದೇಶಗಳಿಂದ ಈ ಸಮ್ಮೇಳನಕ್ಕೆ ಬಂದಿದ್ದರು. ಸುಮಾರು 30 ವರ್ಷಗಳ ನಂತರ ದಕ್ಷಿಣ ಆಫ್ರಿಕಾದ ಒಳಗೆ ANC ಬಹಿರಂಗವಾಗಿ ಈ ಪ್ರಮಾಣದಲ್ಲಿ ಸಮ್ಮೇಳನ ನಡೆಸಲು ಸಾಧ್ಯವಾಗಿದೆ. ಇದರಲ್ಲಿ ANC ಅಧ್ಯಕ್ಷ 73 ವರ್ಷದ ಒಲಿವರ್ ಟಾಂಬೊ ಭಾಗವಹಿಸಿದರು. ಈ ಸಮ್ಮೇಳನದಲ್ಲಿ ಭಾಗವಹಿಸಲು ಹಾಗೂ ಶಾಶ್ವತವಾಗಿ ದ.ಆಫ್ರಿಕಾಕ್ಕೆ 30 ವರ್ಷಗಳ ನಂತರ ಹಿಂದಿರುಗಿದ್ದಾರೆ. ಅವರಿಗೆ ಅತ್ಯಂತ ಭಾವಪೂರಿತ ಸ್ವಾಗತ ನೀಡಲಾಯಿತು. ಇತ್ತೀಚಿನ ಹೃದಯಾಘಾತದಿಂದ ಇನ್ನೂ ಚೇತರಿಸಿಕೊಳ್ಳುತ್ತಿರುವ ಟಾಂಬೊರ ವಾಪಸಾತಿಯೊಂದಿಗೆ ANC ಯ ಹೆಚ್ಚಿನ ನಾಯಕರು, ಕಾರ್ಯಕರ್ತರು ಹಿಂದಿರುಗಿದಂತಾಗಿದೆ. ಈವರೆಗೆ ಭೂಗತವಾಗಿ ವಿದೇಶಗಳಿಂದ ರಹಸ್ಯವಾಗಿ ಕೆಲಸ ಮಾಡುತ್ತಿದ್ದ ANC ದ.ಆಫ್ರಿಕಾದಿಂದಲೇ ಕೆಲಸ ಮಾಡಲು ಸಂಘಟನಾ ಬದಲಾವಣೆಗಳನ್ನು ಮಾಡಬೇಕಾಗಿದೆ. ವರ್ಣಭೇಧ ರಹಿತ ದ.ಆಫ್ರಿಕಾ ರಚಿಸಲು ರಣ ನೀತಿ ನಿರ್ಧರಿಸಬೇಕಾಗಿದೆ.

ದ.ಆಫ್ರಿಕಾದ ಡಿಕ್ಲಾರ್ಕ್ ಸರಕಾರ ಇನ್ನೂ ಎಎನ್‌ಸಿ ಜೊತೆ ಮಾತುಕತೆ ನಡೆಸುತ್ತಿದ್ದರೂ, ANC ವಿರುದ್ಧ ಸರ್ಕಾರಿ ಮತ್ತು ಖಾಸಗಿ ಮಾಧ್ಯಮಗಳಲ್ಲಿ ಭಾರಿ ಪ್ರಚಾರ ನಡೆಸುತ್ತಿದೆ. ANC ತನ್ನ ಸಂಘಟನೆಗಳನ್ನು ಬೆಳೆಸದಂತೆ ನಾಟಾಲ್ ಪ್ರಾಂತ್ಯಕ್ಕೆ ಸೀಮಿತವಾಗಿದ್ದ ಹಿಂಸಾಚಾರವನ್ನು ಜೋಹಾನ್ಸ್‌ಬರ್ಗ್‌ನ ಸುತ್ತಮುತ್ತಲ ಪಟ್ಟಣಗಳಿಗೆ ಹಬ್ಬಿಸಲಾಗಿದೆ. ಭದ್ರತಾಪಡೆಗಳ ಒಳಗಿರುವ ಗುಂಪೊಂದು ಝೂಲು ನಾಯಕ ಬುತೆಲೆಜಿಯನ್ನು ಕರಿಯರ ನಾಯಕನಾಗಿ ಹೊರಿಸುವ, ANC ಸರಕಾರ ನಡುವೆ ಮಾತುಕತೆಗಳನ್ನು ಬುಡಮೇಲು ಮಾಡುವ ಉದ್ದೇಶದಿಂದ ಈ ಹಿಂಸಾಚಾರ ಪ್ರಚೋದಿಸುವುದರಲ್ಲಿ ತೊಡಗಿದೆ. ಇದಕ್ಕೆ ಅಜ್ಞಾತ 'ಮೂರನೆಯ ಶಕ್ತಿ'ಯೊಂದು ನೆರವಾಗುತ್ತಿದೆ ಎಂದು ANC ಮಾತುಕತೆಗಳಲ್ಲಿ ಸರಕಾರಕ್ಕೆ ಸ್ಪಷ್ಟವಾಗಿ ತಿಳಿಸಿದೆ. ಕರಿಯರ ವಿವಿಧ ಪಂಗಡಗಳ ನಡುವೆ ಹಿಂಸಾಚಾರ ತಡೆಯಲು ದ.ಆಫ್ರಿಕಾ ಚರ್ಚ್ ಮಂಡಳಿ ಸಂಘಟಿಸಿದ ANC, ಝೂಲು, ಸರಕಾರ ಇತ್ಯಾದಿಗಳ ಸಂಯುಕ್ತ ನಿಯೋಗವೊಂದು ಹಿಂಸಾಚಾರ ಹೆಚ್ಚಿರುವ ಪ್ರದೇಶಗಳಿಗೆ ಭೇಟಿ ನೀಡಿತು.

ANC, PAC, AZAPO ಮತ್ತು ಇತರ ವರ್ಣಭೇಧ ವಿರೋಧಿ ಸಂಘಟನೆಗಳ ಐಕ್ಯ ರಾಷ್ಟ್ರೀಯ ರಂಗವೊಂದನ್ನು ರೂಪಿಸಲು ಪ್ರಯತ್ನಿಸುತ್ತಿದೆ. ತನ್ನ ಸಂಘಟನೆಗಳನ್ನು ಎಲ್ಲಾ ಭಾಗಗಳಲ್ಲೂ ಬಲವಾಗಿ ಬೆಳೆಸಲು ಧರಣಿ, ಸತ್ಯಾಗ್ರಹ, ಬಳಕೆದಾರರ ಬಹಿಷ್ಕಾರ, ಮುಷ್ಕರ ಮುಂತಾದ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತಿದೆ. ANC ಕಾರ್ಯಕರ್ತರು ದ.ಆಫ್ರಿಕಾಕ್ಕೆ ಹಿಂದಿರುಗಿ, ರಾಜಕೀಯ ಕಾರ್ಯಾಚರಣೆ ಕೈಗೊಳ್ಳುವಂತೆ, ದೇಶದಲ್ಲಿ ಸಂಘಟನೆಯನ್ನು ಬಲವಾಗಿ ಬೆಳೆಸಲು ಧನ ಸಂಗ್ರಹ ಮಾಡಲು ಮಂಡೇಲಾ ಪ್ರವಾಸದಲ್ಲಿ ತೊಡಗಿದ್ದಾರೆ. ವರ್ಣಭೇಧದ ಆಧಾರದ ಮೇಲೆ ರಚಿತವಾದ ಈಗಿನ ಪಾರ್ಲಿಮೆಂಟಿನ ಸದಸ್ಯತ್ವಕ್ಕೆ ರಾಜಿನಾಮೆ ಕೊಡುವಂತೆ ಭಾರತೀಯ ಮತ್ತು ಮಿಶ್ರ ಜನಾಂಗದ ಸದಸ್ಯರಿಗೆ ಕರೆ ನೀಡಿದೆ. ವರ್ಣಭೇಧದ ವಿರುದ್ಧ ತಮ್ಮ ಬೆಂಬಲ ತಿಳಿಸಲು, ಭವಿಷ್ಯದ ಕರೆ ದೊರೆ ಮಾಡಲು ಇದು ಕೊನೆಯ ಅವಕಾಶ ಎಂದಿದೆ.

ದ.ಆಫ್ರಿಕಾದ ವರ್ಣಭೇಧ ಕೊನೆಗೊಳ್ಳುವವರೆಗೆ ಅದರ ವಿರುದ್ಧ ಆರ್ಥಿಕ ದಿಗ್ಬಂಧನ ಮುಂದುವರಿಯಬೇಕೆಂದು ANC ಸಮ್ಮೇಳನ ನಿರ್ಧರಿಸಿದೆ.

ಅಕ್ಟೋಬರ್ ಕ್ರಾಂತಿಯ 73 ನೇ ವಾರ್ಷಿಕೋತ್ಸವ: ವಿಶಿಷ್ಟ ಆಚರಣೆ

ಅಕ್ಟೋಬರ್ ಕ್ರಾಂತಿ ಸೋವಿಯತ್ ಒಕ್ಕೂಟದಲ್ಲಿ ಜನತೆ ಆಚರಿಸುವ ಪ್ರಮುಖ ಹಬ್ಬ. ರಾಷ್ಟ್ರೀಯ ರಜಾದಿನ. ಈವರೆಗೆ ಅಕ್ಟೋಬರ್ ಕ್ರಾಂತಿಯ ಮಹತ್ವದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿರಲಿಲ್ಲ. ಆದರೆ ಈ ವರ್ಷ ಕಮ್ಯುನಿಸ್ಟ್ ವಿರೋಧಿ ಬಂಡವಾಳಶಾಹಿ ಸಮರ್ಥಕರು ಈ ಬಾರಿಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಈ ಭಿನ್ನಾಭಿಪ್ರಾಯಗಳನ್ನು ಎಬ್ಬಿಸಿ ಮಹಾನ್ ಪರಂಪರೆಯನ್ನು ಪ್ರಶ್ನಿಸುವ ಸಾಹಸ ಮಾಡಿದರು. ಆದರೆ ಕಮ್ಯುನಿಸ್ಟ್ ಪಕ್ಷ, ಸಾಮೂಹಿಕ ಸಂಘಟನೆಗಳು, ಜನತೆ ಇದಕ್ಕೆ ತಕ್ಕ ಉತ್ತರ ನೀಡಿದರು- ಈ ಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುವ ಮೂಲಕ ವಿವಾದವನ್ನು ಆರಂಭಿಸಿದ್ದು ಮಾಸ್ಕೋ ಮತ್ತು ಲೆನಿನ್‌ಗ್ರಾಡ್ ಮೇಯರ್‌ಗಳು.

ಸಾಮಾನ್ಯವಾಗಿ ಪ್ರತಿವರ್ಷ ಅಕ್ಟೋಬರ್ ಕ್ರಾಂತಿ ಮಿಲಿಟರಿ ಪರೇಡ್ ಜತೆ ನಾಗರಿಕರ ಮೆರವಣಿಗೆಗಳನ್ನು ಸಂಘಟಿಸುವ ಕೆಲಸ ಮಾಸ್ಕೋ ನಗರ ಮಂಡಳಿಯ ಜವಾಬ್ದಾರಿ. ಈ ಬಾರಿ ಮಾಸ್ಕೋ ನಗರ ಮಂಡಳಿ ಪೊಪೊವ್ ನಾಯಕತ್ವದಲ್ಲಿ ಈ ಜವಾಬ್ದಾರಿ ನಿರ್ವಹಿಸಲು ನಿರಾಕರಿಸಿತು. ಆದರೆ ಈ ಸವಾಲನ್ನು ಮಾಸ್ಕೋ ಕಮ್ಯುನಿಸ್ಟ್ ಪಕ್ಷದ ನಗರ ಸಮಿತಿ ಸ್ವೀಕರಿಸಿ, ತಾನೇ ಅದನ್ನು ಸಂಘಟಿಸಿತು.ಲಕ್ಷಗಟ್ಟಲೆ ಜನ ಇದರಲ್ಲಿ ಭಾಗವಹಿಸಿ ಇಂತಹ ಮೆರವಣಿಗೆಯ ಅಗತ್ಯವಿಲ್ಲ ಎಂದು ಭಾವಿಸಿದವರಿಗೆ ಮುಖಭಂಗ ಮಾಡಿದರು. ಅಲ್ಲದೆ ಈ ಮೆರವಣಿಗೆ ಈ ಬಾರಿ ವಿಶಿಷ್ಟವಾಗಿತ್ತು.

ಅಧ್ಯಕ್ಷ ಗೋರ್ಬಚೆವ್, ಪ್ರಧಾನಿ ರಿಝ್ಕೋವ್, ಪಾರ್ಲಿಮೆಂಟ್ ಅಧ್ಯಕ್ಷ ಲುಕಿನೋವ್, ರಷ್ಯನ್ ಅಧ್ಯಕ್ಷ ಯೆಲ್ಸ್ಟೀನ್, ರಷ್ಯನ್ ಪ್ರಧಾನಿ, ಮಾಸ್ಕೋ ಮೇಯರ್ ಮಿಲಿಟರಿ ಪೆರೇಡ್‌ನಿಂದ ವಂದನೆ ಸ್ವೀಕರಿಸಿದ ನಂತರ ನಾಗರಿಕರ ಮೆರವಣಿಗೆಯಲ್ಲಿ ಸೇರಿಕೊಂಡು ಅದರ ಜೊತೆ ನಡೆದರು. ಮೆರವಣಿಗೆಯ ನೇತೃತ್ವವನ್ನು ಇವರು, ಸಂಘಟನಾ ಸಮಿತಿಯ ಸದಸ್ಯರು, ಮಹಾಯುದ್ಧದ ವೀರರು, ಪ್ರಮುಖ ಕಾರ್ಮಿಕರು, ಸೋವಿಯತ್--ರಷ್ಯನ್-ಮಾಸ್ಕೋ ಕಮ್ಯುನಿಸ್ಟ್ ಪಕ್ಷದ ನಾಯಕರು ವಹಿಸಿದ್ದರು. ಲೆನಿನ್‌ರ ಶವಾಲಯದಲ್ಲಿ ಈ ಮೆರವಣಿಗೆಯಿಂದ ನಿಯೋಗವೊಂದು ಹೋಗಿ ಗೌರವ ಸಲ್ಲಿಸಿತು.

ಆದರೆ ಅಕ್ಟೋಬರ್ ಕ್ರಾಂತಿಯ ಟೀಕಾಕಾರರು ಎರಡು ಬದಲಿ ಆಚರಣೆ ನಡೆಸಿದರು. ಮುಖ್ಯ ಮೆರವಣಿಗೆಯಲ್ಲಿ ಲಕ್ಷಗಟ್ಟಲೆ ಜನ ಭಾಗವಹಿಸಿದರೆ ಈ ಎರಡು ಪ್ರದರ್ಶನಗಳಲ್ಲಿ ಕೆಲವು ಸಾವಿರ ಜನ ಭಾಗವಹಿಸಿದರು. ಎರಡೂ ಪ್ರದರ್ಶನಗಳಲ್ಲಿ 'ಸರಕಾರ ರಾಜಿನಾಮೆ ಕೊಡಬೇಕು' ಎಂಬ ಘೋಷಣೆಗಳನ್ನು ಕೂಗಿದರು. 'ಕಮ್ಯುನಿಸ್ಟ್ ಆಡಳಿತದ ಮುಗ್ಧ ಬಲಿಪಶುಗಳು' ಎಂದು ಅವರು ಕರೆಯುವವರ ಬಗ್ಗೆ ಸಂತಾಪ ಸೂಚಿಸಲಾಯಿತು.

ಈ ಎರಡೂ ಪ್ರದರ್ಶನಗಳನ್ನು ಹಲವು ಕಮ್ಯುನಿಸ್ಟ್ ವಿರೋಧಿ, ಸಮಾಜವಾದಿ ವಿರೋಧಿ ಸಂಘಟನೆಗಳು ಏರ್ಪಡಿಸಿದ್ದವು. ಈ ಎರಡೂ ಪ್ರದರ್ಶನಗಳಲ್ಲಿ ರಷ್ಯನ್ ಅಧ್ಯಕ್ಷ, ಮಾಸ್ಕೋ ಮೇಯರ್ ಭಾಗವಹಿಸಿದ್ದರು.

ಇತರ ಹಲವು ಗಣತಂತ್ರಗಳಲ್ಲಿ, ನಗರಗಳಲ್ಲಿ ಇದೇ ರೀತಿ ಅಕ್ಟೋಬರ್ ಕ್ರಾಂತಿಯ ಮಹತ್ವ ಅಲ್ಲಗಳೆಯುವ ಪ್ರಯತ್ನ ನಡೆಯಿತು. ಬಾಲ್ಟಿಕ್ ಗಣತಂತ್ರಗಳಲ್ಲಿ ರಜೆ ಇದ್ದರೂ ಅಧಿಕೃತ ಸಮಾರಂಭಗಳು ಇರಲಿಲ್ಲ. ಆದರೆ ಕಾರ್ಮಿಕ ಸಂಘಟನೆಗಳು ಈ ಜವಾಬ್ದಾರಿ ವಹಿಸಿಕೊಂಡವು. ಜಾರ್ಜಿಯಾದಲ್ಲಿ ನವೆಂಬರ್ 7 ರಜಾದಿನವೂ ಆಗಿರಲಿಲ್ಲ. ಆದರೂ ಹೆಚ್ಚಿನ ನಗರಗಳಲ್ಲಿ ವಾರ್ಷಿಕೋತ್ಸವ ಆಚರಿಸಲಾಯಿತು. ಇತರ ಎಲ್ಲಾ ಗಣತಂತ್ರಗಳಲ್ಲಿ, ಹೆಚ್ಚಿನ ನಗರಗಳಲ್ಲಿ ಮೆರವಣಿಗೆ, ರ್‍ಯಾಲಿಗಳಿಂದ ವಾರ್ಷಿಕೋತ್ಸವ ಆಚರಿಸಲಾಯಿತು.

ಅಧ್ಯಕ್ಷ ಗೋರ್ಬಚೆವ್ ಅಕ್ಟೋಬರ್ ಕ್ರಾಂತಿ ಸ್ವಾತಂತ್ರ್ಯ, ಸಮಾನತೆಯ ಮತ್ತು ನ್ಯಾಯದ ಘೋಷಣೆಗಳನ್ನು ಕಾರ್ಯರೂಪಗೊಳಿಸಿದ 20 ಶತಮಾನದ ಅಪ್ರತಿಮ ಘಟನೆಯೆಂದು ಬಣ್ಣಿಸಿ, ಸಮಾಜವಾದ ಕಟ್ಟುವ ಪ್ರಯತ್ನದಲ್ಲಿ ಆದ ಕೆಲವು ಕುಕೃತ್ಯಗಳಿಗೆ ಹಿಂದಿನ ಪೀಳಿಗೆಗಳನ್ನು ಜವಾಬ್ದಾರಿ ಮಾಡುವ ಪ್ರವೃತ್ತಿಯನ್ನು ಖಂಡಿಸಿದರು. ಹಿಂದಿನ ಪೀಳಿಗೆಗಳ ಕೊಡುಗೆಯನ್ನು ಸ್ಮರಿಸಿದರು, ಕೊಂಡಾಡಿದರು.

ಈ ಬಾರಿಯ ವಾರ್ಷಿಕೋತ್ಸವದ ಆಚರಣೆ 'ಗ್ಲಾಸ್‌ನೋಸ್ತ್'ನ್ನು ಸಮಾಜವಾದದ ವಿರೋಧಿಗಳು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬುದಕ್ಕೆ ಹಿಡಿದ ಕನ್ನಡಿಯಾಗಿತ್ತು. ಆದರೆ ಪಕ್ಷ, ಸಾಮೂಹಿಕ ಸಂಘಟನೆಗಳು, ಜನತೆ ಇದಕ್ಕೆ ನೀಡಿದ ರಾಜಕೀಯ ಉತ್ತರ ಅಷ್ಟೇ ಗಮನಾರ್ಹವಾದುದು. ಅವರು 'ಸಮಾಜವಾದಿ ಕ್ರಾಂತಿಯ ಆದರ್ಶಗಳು, ಮತ್ತು ಸಮಾಜವಾದಿ ಪುನರ್ನವೀಕರಣವನ್ನು' ಎತ್ತಿ ಹಿಡಿದರು. ಬೆಂಬಲಿಸಿದರು.

KRNM/BGW-293 M AG (2) PRB DECR 319-78/79

ವಿಳಾಸ:

ವಿ.ಪಿ.ಸಿಂಗ್-ಇ.ಎಂ.ಎಸ್. ರಾಜ್ಯ ಸಂಚಾರ

(ಪುಟ 1ರಿಂದ)

ಯುದ್ಧ ಮಾಡಲು ಸಿದ್ಧರಾಗಿಯೇ ಹೊರಟಿದ್ದರೆಂದೂ ಕುದುರೆಯನ್ನು ಕಟ್ಟಿಹಾಕುವಂತೆ ನಾನು ಬಿಹಾರ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವರಿಗೆ ಆದೇಶ ನೀಡಿದ್ದು, ಕುದುರೆಯನ್ನು ಕಟ್ಟಿಹಾಕಿದ ಕೂಡಲೇ ಸಿಟ್ಟಿಗೆದ್ದ ಅಡ್ವಾಣಿಯವರು ತಮ್ಮೊಡನೆ ಯುದ್ಧವನ್ನೇ ಮಾಡಿದರೆಂದೂ ತಮ್ಮ ಸರಕಾರ ಉರುಳಲು ಬಿಜೆಪಿಯ ಕೈವಾಡ ಕಾರಣವೆಂದೂ ವಿವರಿಸಿದಾಗ ಜನರು ಅಹುದೆಂಬ ಉದ್ಗಾರಗಳಿಂದ ಅದಕ್ಕೆ ತಲೆದೂಗಿದರು.

"1977-79ರಲ್ಲಿ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ, ಎಲ್.ಕೆ. ಅಡ್ವಾಣಿಯವರು ಮಂತ್ರಿಯಾಗಿದ್ದಾಗ ಅದೇ ಸಮಯದಲ್ಲಿ ಉತ್ತರಪ್ರದೇಶದ ಸರಕಾರದಲ್ಲಿಯೂ ಅವರ ಪಕ್ಷದವರು ಮಂತ್ರಿಯಾಗಿದ್ದರು. ಆದರೆ ಆಗ ಇವರು ರಾಮ ಜನ್ಮ ಭೂಮಿ-ಬಾಬ್ರಿಮಸೀದಿ ಸಮಸ್ಯೆಗಳನ್ನೆತ್ತಲಿಲ್ಲ. ನಾನು ಪ್ರಧಾನ ಮಂತ್ರಿಯಾಗಿದ್ದಾಗ ಆ ಪ್ರಶ್ನೆ ಎತ್ತಿ, ರಥಯಾತ್ರೆ, ಕಾರಸೇವೆ ನಡೆಸಿ ಜಾತೀಯ ಗಲಭೆ ಮಾಡಿ ನನ್ನ ಸರಕಾರ ಉರುಳಿಸಿದರು. ನಾನು ಅಧಿಕಾರದಲ್ಲಿದ್ದಾಗ ಒತ್ತಾಯದ ಮೂಲಕ ಕಾರಸೇವೆ ಮಾಡಿ ಮಸೀದಿ ಒಡೆದು ರಾಮಮಂದಿರ ಕಟ್ಟಲು ಹೊರಟ ಅಡ್ವಾನಿಯವರು ನನ್ನ ಸರಕಾರ ಉರುಳಿ, ಈಗ ಚಂದ್ರಶೇಖರ್ ಸರಕಾರ ಬಂದ ನಂತರ ಕಾರಸೇವೆಯನ್ನು ಬಿಟ್ಟುಕೊಟ್ಟು ಬರೀ ಸತ್ಯಾಗ್ರಹ ಪ್ರಾರಂಭಿಸುವುದರ ಕಾರಣವೇನು?" ಎಂದು ಸಾರ್ವಜನಿಕರ ಮುಂದೆ ಸವಾಲೆಸೆದಾಗ 'ಹಿಂದುಳಿದವರ, ಅಲ್ಪಸಂಖ್ಯಾತರ ರಕ್ಷಣೆಗೆ ಹೊರಟ ನಿಮ್ಮ ಸರಕಾರವನ್ನು ಕೆಳಗಿಳಿಸಲಿಕ್ಕೆ' ಎಂದು ಪ್ರತಿಕ್ರಿಯಿಸಿದರು.

ಗುಲ್ಬರ್ಗಾ-ಬೀದರ್‌ಗ-

ಳಲ್ಲಿ ನಡೆದ ಕೊನೆಯ ಹಂತದ ಸಾರ್ವಜನಿಕ ಸಭೆಗಳಲ್ಲಿ ಇ.ಎಂ.ಎಸ್.ನಂಬೂದರಿಪ್ಪಾಡ್ ಅವರು 1947ರಲ್ಲಿ ಭಾರತ ವಿಭಜನೆಯಾದಾಗ ಜಾತೀಯ ಗಲಭೆ ನಡೆದಾಗ ನಾವು ಕಮ್ಯುನಿಸ್ಟರು ಅದನ್ನು ವಿರೋಧಿಸಿದ್ದೆವು. ಜಾತೀಯವಾದಿಗಳ ವಿರುದ್ಧ ಸಾಮ್ರಾಜ್ಯಶಾಹಿಗಳ ವಿರುದ್ಧ ಮಹಾತ್ಮ ಗಾಂಧಿ, ಜವಹರಲಾಲ್ ನೆಹರೂರವರು ವಿರೋಧ ವ್ಯಕ್ತಮಾಡಿದಾಗ ನಾವು ಅವರನ್ನು ಬೆಂಬಲಿಸಿದೆವು. ಆದರೆ ಅವರು ಅಂದಿನ ಸ್ವಾತಂತ್ರ್ಯ ಚಳುವಳಿಯ ಮೌಲ್ಯಗಳನ್ನು ಧಿಕ್ಕರಿಸಿದಾಗ ನಾವು ಅವರನ್ನು ವಿರೋಧಿಸಬೇಕಾಯಿತು. ಈಗ ವಿ. ಪಿ.ಸಿಂಗ್ ಅವರು ಆ ಮೌಲ್ಯಗಳ ರಕ್ಷಣೆಗಾಗಿ, ಜಾತೀಯತೆಯ ವಿರುದ್ಧ ಧೀರ ಹೋರಾಟ ನಡೆಸಿದ್ದಾರೆ. ನೀವು

> "ಎಂಥ ವ್ಯಕ್ತಿತ್ವ. ಎಂಥ ಸ್ಪಷ್ಟತೆ. ಸ್ವತಂತ್ರ ಸಂಗ್ರಾಮ ಕಾಲದ ರಾಜಕೀಯ ಮೌಲ್ಯಗಳನ್ನು ನೆನಪಿಸಿಕೊಳ್ಳುವ ವಿಧಾನ, ಅವರ ಪದಂಜರ ಶ್ಲಾಘನೀಯ. ಅವರ ವಯಸ್ಸಿನವರಾದಾಗ ನಮ್ಮ ಗತಿಯೇನೋ"
>
> ಇ.ಎಂ.ಎಸ್ ಕುರಿತು ಚಂದ್ರೇಗೌಡರು

ಕರ್ನಾಟಕದ ಜನ ಅವರಿಗೆ ಅತ್ಯುತ್ಸಾಹದಿಂದ ಬೆಂಬಲ ನೀಡುತ್ತಿರುವುದನ್ನು ನೋಡಿ ನನಗೆ ಸಂತೋಷವಾಗಿದೆ. ನಾವು ಎಡ ಪಕ್ಷದವರು ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಒಂದು ಕಡೆ ಮತ್ತೊಂದು ಕಡೆ ವಿ.ಪಿ.ಸಿಂಗ್ ಜನತಾದಳ, ರಾಷ್ಟ್ರೀಯ ರಂಗ, ತೆಲುಗುದೇಶಂ, ಡಿಎಂಕೆ- ಹೀಗೆ ಇಬ್ಬರೂ ಸೇರಿ ಹದಗೆಟ್ಟಿರುವ ಭಾರತ ದೇಶದಲ್ಲಿ ಹೊಸ ರಾಜಕೀಯ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಹೊರಟಿದ್ದೇವೆ. ಪರ್ಯಾಯ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಲು ಈ ಎರಡೂ ಗುಂಪುಗಳು. ವಿ.ಪಿ.ಸಿಂಗ್ ಅವರ ನೇತೃತ್ವದಲ್ಲಿ ನಡೆಸುತ್ತಿರುವ ಚಳುವಳಿಯಲ್ಲಿ ನೀವೆಲ್ಲಾ ಭಾಗೀದಾರರಾಗಿ ಅದಕ್ಕೆ ಸಂಪೂರ್ಣ ಬೆಂಬಲ ನೀಡಿ ಎಂದು ಕೇಳಿಕೊಂಡರು.

ಇ.ಎಂ.ಎಸ್. ಅವರ ಈ ಅಭಿಲಾಷೆಯನ್ನು ಪ್ರಶಂಸಿಸುತ್ತಾ ವಿ.ಪಿಸಿಂಗ್ ಅವರು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಹಿರಿಯ ಹೋರಾಟಗಾರರಾದ ಇ.ಎಂ.ಎಸ್ ಅವರ ಆಶಯಗಳಿಗೆ ಒತ್ತು-

> "ಶೋಷಣೆಯನ್ನು ತಪ್ಪಿಸುವ ಸಲುವಾಗಿ ಬಲಿಷ್ಠವಾದ ರೈತ-ಕೃಷಿ ಕೂಲಿಗಾರರ ಸಂಘಟನೆಯನ್ನು ಕಟ್ಟಿರಿ. ಬದಲಾವಣೆಯಾಗುತ್ತಿರುವ ರಾಜಕೀಯ ಪರಿಸ್ಥಿತಿಯಲ್ಲಿ ಮಧ್ಯಪ್ರವೇಶಿಸಬೇಕಾದರೆ ಬಲಿಷ್ಠ ಸಂಘಟನೆ ಅಗತ್ಯ. ಆದ ಕಾರಣ ಬಲಿಷ್ಠ ಸಂಘಟನೆ ಕಟ್ಟಿರಿ, ಹೋರಾಡಿರಿ"
>
> ಡಿ.14ರಂದು ಗುಲ್ಬರ್ಗಾಕ್ಕೆ ಹೋಗುವ ದಾರಿಯಲ್ಲಿ ಸಿಪಿಐ(ಎಂ), ರೈತ ಸಂಘಟನೆದವರು ತಮಗಿತ್ತ ಸ್ವಾಗತಕ್ಕೆ ಉತ್ತರ ನೀಡುತ್ತಾ ಇ.ಎಂ.ಎಸ್. ನಂಬೂದರಿಪ್ಪಾಡ್ ಬುದ್ಧಿವಾದ.

ಕೊಟ್ಟು ತಮ್ಮವರೇ ಆದ ಕೆಲವರು ತಮಗೆ ಬೆನ್ನ ಹಿಂದೆ ಚೂರಿ ಹಾಕಿದಾಗ, ಎಡ ಪಕ್ಷಗಳು ದೃಢವಾಗಿ ತಮಗೆ ಬೆಂಬಲ ನೀಡುತ್ತಾ ಬಂದಿರುವುದನ್ನು ನೆನಸಿಕೊಂಡು ಎಡ ಪಕ್ಷಗಳು ಮತ್ತು ತಮ್ಮ ಪಕ್ಷ ಒಟ್ಟಾಗಿ ಚಳುವಳಿ ನಡೆಸುತ್ತೇವೆ ಅದಕ್ಕೆ ಬೆಂಬಲ ನೀಡಬೇಕೆಂದು ಹೇಳಿದರು.

ತಮಿಳುನಾಡು, ಕೇರಳಗಳಂತೆಯೇ ಕರ್ನಾಟಕದಲ್ಲಿ ವಿ.ಪಿ.ಸಿಂಗ್ ಅವರ ಎರಡು ದಿನಗಳ ಮಿಂಚಿನ ಸಂಚಾರ ರಾಜ್ಯದ ರಾಜಕೀಯ ಬಲಾಬಲಗಳಲ್ಲಿ ಬದಲಾವಣೆ ತರುವುದರಲ್ಲಿ ಸಂಶಯವಿಲ್ಲ. ವಿಜಾಪುರದಲ್ಲಿ 36 ಮುಸ್ಲಿಂ ವಕೀಲರು ಜನತಾದಳ ಸೇರುತ್ತೇವೆಂದು ಸಾರ್ವಜನಿಕ ಸಭೆಯಲ್ಲಿ ಘೋಷಿಸಿದರು. ಬಿಜಾಪುರ, ಗುಲ್ಬರ್ಗಾ, ಬೀದರ್‌ಗಳಲ್ಲಿ ಮುಸ್ಲಿಂ, ಹರಿಜನ-ಗಿರಿಜನರು ಹೆಚ್ಚಿನ ಸಂಖ್ಯೆಯಲ್ಲಿ ಜನತಾದಳಕ್ಕೆ ಬೆಂಬಲ ಸೂಚಿಸುತ್ತಿರುವುದು ಕಂಡು ಬಂತು. ರಾಮಜನ್ಮ ಭೂಮಿ-ಬಾಬ್ರಿ ಮಸೀದಿಯ ವಿಷಯದಲ್ಲಿ ವಿ.ಪಿಸಿಂಗ್ ಸರಕಾರದ ದೃಢ ನಿಲುಮೆ, ಸರಕಾರಹೋದರೂ ಚಿಂತೆಯಿಲ್ಲ ಬಿಜೆಪಿಯ ಜಾತೀವಾದಕ್ಕೆ ತಲೆಬಾಗುವುದಿಲ್ಲ, ಅಧಿಕಾರದಲ್ಲಿ ಉಳಿಯಬೇಕಾಗಿದ್ದರೆ, ಬಿಜೆಪಿಯ ಕರಾರುಗಳಿಗೆ ಒಪ್ಪುತ್ತಿದ್ದೆಂಬ ಮಾತು, ಹಾಗೆಯೇ ಮಂಡಲ ಕಮಿಷನ್ ವರದಿಯ ಅನುಷ್ಠಾನ ಈ ವರ್ಗದ ಜನರಲ್ಲಿ ಧೈರ್ಯ ತುಂಬಿದಂತಾಗಿದೆ , ಕಾಂಗ್ರೆಸ್ ಬಿಟ್ಟು ವಿ.ಪಿ.ಸಿಂಗ್ ಅವರಿಗೆ ಬೆಂಬಲ ಕೊಡಬೇಕೆಂಬ ನಿರ್ಧಾರ ಕೈಗೊಳ್ಳಲು ಸಹಾಯವಾಗಿದೆಂದರೆ ತಪ್ಪಾಗಲಾರದು.

ಗುಲ್ಬರ್ಗಾ ಸಿಪಿಐ(ಎಂ) ಶಹಾಬಾದ್ ಗುಲ್ಬರ್ಗಾದ ಸಿಐಟಿಯು ಕಾರ್ಮಿಕರು, ರೈತರು, ವಿದ್ಯಾರ್ಥಿ ಯುವಜನತೆ ನಾಲ್ಕೈದು ದಿವಸ ಪ್ರಚಾರ ಮಾಡಿ, ಪೋಸ್ಟರ್, ಬಂಟಿಂಗ್ ಹಚ್ಚಿ, ಕಮಾನುಗಳಿಂದ ಊರನ್ನು ಅಲಂಕರಿಸಿದ್ದರು. ಸಿಐಟಿಯು ಮತ್ತು ಕೆಎಸ್‌ಆರ್‌ಟಿಸಿ ವರ್ಕರ್ಸ್ ಯೂನಿಯನ್‌ನವರೂ ಪ್ರಚಾರ ಮಾಡಿದ್ದರು. ಗುಲ್ಬರ್ಗಾದಂತೆ ಬಿಜಾಪುರ-ಬೀದರ್‌ಗಳಲ್ಲಿಯೂ ಕೆಂಬಾವುಟ ಹಾರಾಡುತ್ತಿದ್ದವು. ವಿ.ಪಿಸಿಂಗ್ ಅವರು ದೇಶದಲ್ಲಿ ತರಬೇಕೆಂದಿರುವ ರಾಜಕೀಯ ಪರ್ಯಾಯ ವ್ಯವಸ್ಥೆಯ ನಿರ್ಮಾಣದಲ್ಲಿ ಸಿಪಿಐ(ಎಂ) ಸಿಪಿಐ ಪಕ್ಷಗಳು ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತವೆಂಬುದನ್ನು ಈ ಕೆಂಪು ಪತಾಕೆಗಳು ಕಮಾನುಗಳು ವಿ.ಪಿ.ಸಿಂಗ್ ಮತ್ತಿತರರಿಗೆ ತೋರಿಸಿಕೊಟ್ಟವೆ. ಈ ಹೊಸ ವಾತಾವರಣದ ಸದುಪಯೋಗ ಮಾಡಿಕೊಳ್ಳುವ ಜವಾಬ್ದಾರಿ ಸಿಪಿಐ(ಎಂ) ಕಾರ್ಯಕರ್ತರದ್ದಾಗಿದೆ. ಯಾಕೆಂದರೆ ಬಿಜಾಪುರದಲ್ಲಿ ಕೆಲವು ದಳದ ಕಾರ್ಯಕರ್ತರು ಇ.ಎಂ.ಎಸ್ ಅವರಿಗೆ ಕೈಮುಗಿದು "ನೀವೇ ನಮ್ಮ ಮುಂದಿರುವ ಭವಿಷ್ಯ"ವೆಂದು ಹೇಳಿದ್ದು ಮಹತ್ವಪೂರ್ಣ ಭವಿಷ್ಯ.

> ಸ್ವಾತಂತ್ರ್ಯ ಸಂಗ್ರಾಮದ ಧೀರ ಯೋಧ ಸಿಪಿಐ(ಎಂ) ಪಕ್ಷದ ಪ್ರದಾನ ಕಾರ್ಯದರ್ಶಿ 6 ದಿವಸ ತಮ್ಮ ಜೊತೆಯಲ್ಲಿ ಇದ್ದು, ಆರೋಗ್ಯ ಸರಿಯಿಲ್ಲದಿದ್ದರೂ, ವಯಸ್ಸಾಗಿದ್ದರೂ ಕೂಡಾ ಅತ್ಯಂತ ಸ್ಫೂರ್ತಿಯಿಂದ ನಮಗೆ ಸರಿಯಾದ ರಾಜಕೀಯದ ಮಾರ್ಗದರ್ಶನ ನೀಡಿದ್ದಾರೆ. ಅವರಿಂದ ನಾವು ಸ್ಫೂರ್ತಿ ಪಡೆಯಬೇಕು. ಜಾತೀಯತೆಯ ವಿರುದ್ಧ ಹೋರಾಡಬೇಕು. ಹೊಸ ರಾಜಕೀಯ ಪರ್ಯಾಯ ವ್ಯವಸ್ಥೆ ನಿರ್ಮಿಸಲು ಹೋರಾಡಬೇಕು"
>
> ಬೀದರ್ ಸಾರ್ವಜನಿಕ ಸಭೆಯಲ್ಲಿ ಇ.ಎಂ.ಎಸ್ ಕುರಿತು ರಾಮಕೃಷ್ಣ ಹೆಗಡೆಯವರು

ಈ ವಾರ

* ಬಿ.ಜೆ.ಪಿ ಮತ್ತು ಹಿಂದುತ್ವದ ಆದರ ಇತರ ಮಿತ್ರರು ತಮ್ಮ ನಿಲುವಿನಿಂದ (ಅಂದರೆ ರಾಷ್ಟ್ರದ ಜಾತ್ಯಾತೀತ ಸ್ವರೂಪಕ್ಕೆ ಧಕ್ಕೆ ತರುವ ಯಾವ ಪ್ರಯತ್ನಗಳನ್ನು ಬಿಡದಿರುವ) ಹಿಂದೆ ಸರಿಯದಿರುವಾಗ ಮಧ್ಯ.ಮತ್ತು ಎಡಪಂಥೀಯ ಪಕ್ಷಗಳು ಕೋಮು ರಾಕ್ಷಸನನ್ನು ಎದುರಿಸಲು ಒಂದಾಗದಿರಲು ಸಾಧ್ಯವಿರದು. ಕನಿಷ್ಠ ಈ ವಿಷಯದಲ್ಲಾದರೂ ಒಟ್ಟಾಗಿ ದುಡಿಯಲು ಅವರು ಮುಂದಾಗದೆ ಅವರು ತಕ್ಷಣವೇ ಹೀಗೆ ಮಾಡದಿದ್ದಲ್ಲಿ ಊಹೆಯ ವಿಚಾರ ಎಂದು ಕಳೆದ 43 ವರ್ಷಗಳಲ್ಲಿ ನಾವು ತಿಳಿದಿದ್ದ ಭಾರತ ಛಿದ್ರಗೊಳ್ಳುತ್ತದೆ ಎನ್ನುವ ವಿಚಾರವನ್ನು ತಿರಸ್ಕರಿಸಲಾಗದು ಎನ್ನುವುದು ಹಗಲಿನ ಬೆಳಕಿನಷ್ಟೇ ಸ್ಪಷ್ಟ.

-ಟೈಮ್ಸ್ ಆಫ್ ಇಂಡಿಯ, 15-12-1990

* ಆಂಧ್ರಪ್ರದೇಶ, ಉತ್ತರಪ್ರದೇಶ, ಮತ್ತು ಗುಜರಾತ್‌ನ ಗಲಭೆಗಳು ಕೋಮು ಪರಿಸ್ಥಿತಿ ಪಡೆದಿರುವ ಅಪಾಯಕಾರಿ ತಿರುವಿನ ಸೂಚನೆಗಳಾಗಿವೆ. ವ್ಯಾಪಕ ಹಿಂಸಾಚಾರಗಳು ಮತ್ತು ಅಯೋಧ್ಯೆ ವಿವಾದದ ನಡುವೆ ನೇರ ಸಂಬಂಧವಿರುವುದು ಪ್ರಶ್ನಾತೀತವಾಗಿದೆ.

ಕೋಮು ಸೌಹಾರ್ದತೆ ಉಂಟುಮಾಡುವುದು ಕೇವಲ ಒಂದು ಪಕ್ಷ ಅಥವಾ ಒಂದು ಸರಕಾರದ ಕೆಲಸವಲ್ಲ. ಎರಡೂ ಸಮುದಾಯಗಳಿಗೆ ಸೇರಿದ ಮೂಲಭೂತವಾದಿಗಳು ದೇಶವನ್ನು ನಾಶಮಾಡಲು ಪ್ರಯತ್ನಿಸುತ್ತಿದ್ದಾರೆ: ದೇಶದ ಉಳಿದವರು ಒಗ್ಗಟ್ಟಿನಿಂದ ಸೆಣಸಿದರೆ ಮಾತ್ರ ಅವರ ಪಿತೂರಿಗಳನ್ನು ಸೋಲಿಸಬಹುದು.

-ದಿ ಹಿಂದುಸ್ತಾನ್ ಟೈಮ್ಸ್, 11-12-1990

* ಯಾವುದಾದರೊಂದು ಮತೀಯ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರನ್ನೋ ಅಥವಾ ಕೋಮುಗಲಭೆಗಳಿಗೆ ಪ್ರಚೋದನೆ ನೀಡಿದ ಇತಿಹಾಸದ ದಾಖಲೆಗಳಿರುವ ವ್ಯಕ್ತಿಗಳನ್ನೋ ಗಲಭೆ ಪೀಡಿತ ಪ್ರದೇಶಗಳಿಂದ ದೂರವಿಡುವುದು ಕಾಯಿದೆಯ ಪಾಲನೆಯ ದೃಷ್ಟಿಯಿಂದ ಕೆಲವು ಸಂದರ್ಭಗಳಲ್ಲಿ ಅನಿವಾರ್ಯ ಎನಿಸಬಹುದು.

ಆದರೆ ಇತ್ತೀಚಿನವರೆಗೆ ಕೇಂದ್ರ ಸರಕಾರದ ಗೃಹ ಇಲಾಖೆಯ ಹೊಣೆ ಹೊತ್ತಿದ್ದ ಮುಫ್ತಿ ಮಹಮದ್ ಸಯೀದ್ ಮತ್ತು ಜೀವನ ಪರ್ಯಂತ ಮತೀಯ ಶಕ್ತಿಗಳ ವಿರುದ್ಧ ಹೋರಾಡಿದ ಇತಿಹಾಸವಿರುವ ಇಂದರ್ ಗುಜ್ರಾಲ್‌ರಂಥ ವ್ಯಕ್ತಿಗಳಿಗೂ ಗಲಭೆಗೆ ಪ್ರಚೋದನೆ ನೀಡಿದರೆನ್ನುವ ಪಟ್ಟ ಕಟ್ಟಿದರೆ ಅದನ್ನು ಅಪ್ಪಟ ಕ್ಷುದ್ರ ರಾಜಕೀಯ ಎಂದೇ ಹೇಳಬೇಕು.

(-ಮುಫ್ತಿ, ಗುಜ್ರಾಲ್‌ರಿಗೆ ಉತ್ತರಪ್ರದೇಶ ಭೇಟಿ ನಿರ್ಬಂಧಿಸಿದ ಬಗ್ಗೆ) ಕನ್ನಡ ಪ್ರಭ, ಡಿ.13

* ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ವಿವೇಕಶೂನ್ಯ ಕೊಲೆಗಳು 1990ನ್ನು ಬಹುಶಃ ವಿಭಜನೆಯ ದಿನಗಳ ನಂತರದ ರಕ್ತ ರಂಜಿತ ವರ್ಷವನ್ನಾಗಿ ಮಾಡಬಹುದು. ಹೆಂಗಸರು ಮತ್ತು ಮಕ್ಕಳ ಅಮಾನುಷ ಕೊಲೆ ಈಗಿನ ಹಿಂಸಾಚಾರದ ಅಲೆಯ ಅತಿ ಕಳವಳಕಾರಿ ಅಂಶವಾಗಿದೆ.

-ಡೆಕ್ಕನ್ ಹೆರಾಲ್ಡ್, ಡಿ.17

* ಕೆಲವು ರಾಜ್ಯಗಳಲ್ಲಿ ಕಳೆದ ವಾರ ಸಿಡಿದೆದ್ದ ಕೋಮು ದಳ್ಳುರಿ ಹತೋಟಿಗೆ ಬರುತ್ತಿರುವ ಸುಳಿವು ಇನ್ನೂ ಸಿಕ್ಕಿಲ್ಲ..... ಈ ರಾಜ್ಯಗಳಲ್ಲಿ ಸಮಸ್ಯೆಯನ್ನು ರಾಜಕೀಯವಾಗಿ ಹಾಗೂ ಆಡಳಿತಾತ್ಮಕವಾಗಿ ಎದುರಿಸುವಲ್ಲಿ ಸರಕಾರಗಳು ವಿಫಲವಾಗಿರುವುದು ನಿರ್ವಿವಾದ.

.....ರಾಷ್ಟ್ರೀಯ ಮತ್ತು ಜಾತ್ಯಾತೀತ ಪಕ್ಷಗಳಿಗೂ ಇದೊಂದು ಸವಾಲು. ಕೋಮು ಸೌಹಾರ್ದ ಬೆಳೆಸುವ ವಿಚಾರದಲ್ಲಿಯಾದರೂ ಅವು ಜೊತೆಗೂಡಿ ನಿಲ್ಲುವುದು ಜರೂರು ಅವಶ್ಯಕತೆ. ಯಾವುದೇ ಕೋಮಿನಲ್ಲಿನ ಮೂಲಭೂತವಾದಿಗಳ ಸೊಲ್ಲಡಗಿಸಲು ಇದು ಅತ್ಯಂತ ಉಪಯುಕ್ತ ಮಾರ್ಗ. ಇದರಲ್ಲಿ ಅಡಗಿರುವುದು ರಾಷ್ಟ್ರದ ಏಕತೆ ಪ್ರಶ್ನೆ.

-ಪ್ರಜಾವಾಣಿ, ಡಿ.15

* ಬಹುಶಃ ವಿಭಜನೆಯಾದಂದಿನಿಂದ ದೇಶದ ಕೋಮು ಪರಿಸ್ಥಿತಿ ಇಷ್ಟು ಹದಗೆಟ್ಟಿರಲಿಲ್ಲ. ಹಿಂದೆಲ್ಲ ಒಂದು ಕಡೆ ಕೋಮು ಗಲಭೆ ನಡೆದರೆ ಇತರೆಡೆ ಹಬ್ಬುತ್ತಿರಲಿಲ್ಲ. ಈಗ ಅದಕ್ಕೆ ತದ್ವಿರುದ್ಧವಾಗಿ ಉತ್ತರ ಪ್ರದೇಶ , ಆಂಧ್ರಪ್ರದೇಶ, ಗುಜರಾತ್ ಮತ್ತು ಅದಕ್ಕೆ ಮುನ್ನ ಕರ್ನಾಟಕದಲ್ಲಿ ಗಲಭೆಗಳು ತೀವ್ರ ಗತಿಯಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಒಂದರ ಹಿಂದೊಂದು ಸಂಭವಿಸಿವೆ.

-ಇಂಡಿಯನ್ ಎಕ್ಸ್‌ಪ್ರೆಸ್, ಡಿ.18

ಚಾಟಿಂಗೋಟಿ

* ಕ್ಯಾಪಿಟೇಷನ್ ಶುಲ್ಕಕ್ಕೆ ಕೇಂದ್ರ ಸರಕಾರ ಕಾನೂನು ರಚಿಸಬೇಕು.

-ಮುಖ್ಯಮಂತ್ರಿ ಬಂಗಾರಪ್ಪ

ನಿಮ್ ಗುರುವೇ ಮೂಗ್ದಾರ ಹಿಡ್ದಿರುವ ಸರ್ಕಾರವೇ ಐತ್ಲಾ ಕೇಂದ್ರದಲ್ಲಿ! ಮಾಡಿಸ್ಲಾ.........

—— ಬಡ ಬೋರೇಗೌಡನ ಸಲಹೆ

ವಿ.ಪಿ.ಸಿಂಗ್‌ರವರನ್ನು ನೋಡಲು ಹೊರಟ ಸಂಗಾತಿಗಳ ಸಾವು

ಡಿಸೆಂಬರ್ 8ರಂದು ತಮಿಳುನಾಡಿನ ಚಂಗಲ್‌ಪೇಟೆಯಲ್ಲಿ ನಡೆದ ವಿ.ಪಿ.ಸಿಂಗ್‌ರವರ ಬಹಿರಂಗ ಸಭೆಗೆ ಹೋಗುತ್ತಿದ್ದ ಕಲ್ಪಾಕಂನಿಂದ ಬರುತ್ತಿದ್ದ ಜನರನ್ನು ತುಂಬಿದ್ದ ಲಾರಿಯೊಂದು ಅಪಘಾತಕ್ಕೀಡಾಗಿ ಅದರಲ್ಲಿದ್ದ ಹಲವು ಸಂಗಾತಿಗಳು ಸಾವನ್ನಪ್ಪಿದ್ದಾರೆ. 36 ಜನರಿಗೆ ತೀವ್ರವಾಗಿ ಗಾಯಗಳಾಗಿವೆ. ರಾಮಚಂದ್ರನ್ ಎಂಬುವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ತೀವ್ರವಾಗಿ ಗಾಯಗೊಂಡ 6 ಜನ ಗಾಯಾಳುಗಳಲ್ಲಿ ಚಂಗಲ್‌ಪೇಟೆ ಸಿಐಟಿಯು ಜಿಲ್ಲಾ ಸಮಿತಿ ಸದಸ್ಯರಾದ ಕಾಂ:ಸುಬ್ರಮಣ್ಯಂ, ಕಲ್ಪಾಕಂ ಕ್ಯಾಂಟೀನ್ ಸಮಿತಿಯ ಕಾರ್ಯದರ್ಶಿ ಕಾಂ:ಬಾಲಕೃಷ್ಣನ್ ಇವರುಗಳು ದಿನಾಂಕ 12-12-90 ರಂದು ಆಸ್ಪತ್ರೆಯಲ್ಲಿ ಮೃತರಾದರು.

ಸತ್ತ ಸಂಗಾತಿಗಳಿಗೆ ತಮಿಳುನಾಡಿನ ಪಕ್ಷದ ಕಾರ್ಯಕಾರೀ ಸಮಿತಿ ಸಂತಾಪ ವ್ಯಕ್ತಪಡಿಸಿದೆ. ಕಾರ್ಯಕಾರಿ ಸಮಿತಿಯ ಪರವಾಗಿ ಕಾಂ:ಎನ್.ವರದರಾಜನ್, ಕಾಂ:ಕೆ.ವರದರಾಜನ್ ಮತ್ತು ಕಾಂ:ಎ.ಕೆ.ಪದ್ಮನಾಭನ್ ಇವರುಗಳು ಪುಷ್ಪಾಂಜಲಿ ಅರ್ಪಿಸಿದರು.

ವಿದ್ಯಾರ್ಥಿಗಳ ಸಮಾವೇಶ

ಎಸ್‌ಎಫ್‌ಐನ ಬಳ್ಳಾರಿ ಘಟಕವು "ರಾಷ್ಟ್ರೀಯ ಸಮಗ್ರತೆಮತ್ತು ಪ್ರಸಕ್ತ ಸವಾಲುಗಳು" ಕುರಿತು ಬಳ್ಳಾರಿ ನಗರದ ಐ.ಎಂ.ಎ. ಹಾಲ್‌ನಲ್ಲಿ ವಿದ್ಯಾರ್ಥಿಗಳ ಸಮಾವೇಶವೊಂದನ್ನು ಸಿ.ಮಲ್ಲಯ್ಯನವರ ಅಧ್ಯಕ್ಷತೆಯಲ್ಲಿ ಸಂಘಟಿಸಿತು. ಸಭೆಯನ್ನುದ್ದೇಶಿಸಿ ಎಸ್.ವೈ.ಗುರುಶಾಂತ್, ಯು.ಪಣ್ಣಪ್ಪ, ಎಸ್. ಪ್ರಸನ್ನಕುಮಾರ್ ಮುಂತಾದವರು ಮಾತನಾಡಿದರು. ಸಭೆಯು ವಿ.ಪಿ.ಸಿಂಗ್, ಬೊಮ್ಮಾಯಿ ಮುಂತಾದವರ ಮೇಲೆ ನಡೆದ ಅಮಾನುಷ ಹಲ್ಲೆಯನ್ನು ಖಂಡಿಸಿತು.

ವಿ.ಪಿ. ಸಿಂಗ್ ಇತರರಮೇಲೆ ಕೋಮುಶಕ್ತಿಗಳಹಲ್ಲೆ:,ಖಂಡನೆ

ಭೂಪಾಲ್‌ನಲ್ಲಿ ಡಿಸೆಂಬರ್ 2ರಂದು ಶ್ರೀವಿ.ಪಿ.ಸಿಂಗ್, ಶ್ರೀಎಸ್.ಆರ್. ಬೊಮ್ಮಾಯಿ ಇತರರ ಮೇಲೆ ಬಿ.ಜೆ.ಪಿ.- ಮತ್ತು ವಿ.ಹೆಚ್.ಪಿ. ಕಾರ್ಯಕರ್ತರು ನಡೆಸಿದ ಹಲ್ಲೆಯನ್ನು ಸಿ.ಪಿ.ಐ(ಎಂ) ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ, ಮಂಡಲಿ ಬಲವಾಗಿ ಖಂಡಿಸಿದೆ.ಇದು ಜಾತ್ಯತೀತತೆಯ,-ಕೋಮು ಸೌಹಾರ್ದತೆಯ ಹಾಗು ದೇಶದ ಐಕ್ಯತೆಯ ಮೇಲೆ ನಡೆಸಿದಂತಹ ಹೇಯ ದಾಳಿಯೆಂದು ವರ್ಣಿಸಿದೆ.

ಕೋಮುವಾದಿಗಳು ಅಧಿಕಾರಕ್ಕೆ ಬಂದರೆ ಅವರು ಏನು ಮಾಡಬಹುದೆಂಬುದರ ಮುನ್ಸೂಚನೆ ಇದಾಗಿದೆ ಎಂದು ಅಭಿಪ್ರಾಯ ಪಟ್ಟಿದೆ. ಹಲ್ಲೆ ನಡೆಸಿದ ಕೋಮುವಾದಿಗಳ ಮೇಲೆ ಸೂಕ್ತ ಕ್ರಮ ವಹಿಸದೇ ಬೇಜವಾಬ್ದಾರಿಯುತವಾಗಿ ವರ್ತಿಸಿದ ಮಧ್ಯಪ್ರದೇಶದ ಮುಖ್ಯ ಮಂತ್ರಿ ಸುಂದರ್ ಲಾಲ್ ಪಟ್ವಾ ಅವರು ಮುಖ್ಯ ಮಂತ್ರಿಯಾಗಿ ವರ್ತಿಸದೇ, ಜನತೆಯ ಪ್ರತಿನಿಧಿಯಾಗಿ ವರ್ತಿಸದೇ ಬಿ.ಜೆ.ಪಿ.ಯ ಕೋಮುವಾದಿಯಂತೆ ವರ್ತಿಸಿದ್ದಲ್ಲದೇ ಹಿಂದಿನ ಕೇಂದ್ರ ಸರಕಾರ ದೇಶದ ಐಕ್ಯತೆಗಾಗಿ ತೆಗೆದುಕೊಂಡಿದ್ದ ಕ್ರಮವನ್ನು ಈ ಮೂಲಕ ಧಿಕ್ಕರಿಸಿದೆ. ಜಿಲ್ಲೆಯಾದ್ಯಂತ ಪಕ್ಷದ ಎಲ್ಲಾ ಶಾಖೆಗಳು ತಕ್ಷಣವೇ ಈ ಬರ್ಬರ ಕೃತ್ಯವನ್ನು ಖಂಡಿಸಿ,ಪ್ರತಿಭಟನೆಯನ್ನು ವ್ಯಕ್ತಪಡಿಸಲು ಕರೆನೀಡಿದೆ.

Printed and published by P.Ramachandra Rao on behalf of Communist Party of India (marxist), karnataka State Committee, 95-A, 2nd Cross, Muneshwara Block, Palace Guttahalli, Bangalore-560003, Phone 366489 Editor: P.RAMA...